ಸಂಪುಟ: 04 ಸಂಚಿಕೆ: 246 ಪುಟಗಳು: 08 ಮಂಗಳವಾರ 19 ನವೆಂಬರ್ 2024

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ಶತಮೂರ್ಖ ಕೂಡ ತನ್ನ ಹೃದಯಕ್ಕೆ ಹತ್ತಿರವಾದ ಕೆಲಸವನ್ನು ಸಾಧಿಸಬಲ್ಲ. ಆದರೆ ಕೆಲಸವನ್ನು ತನ್ನ ಅಭಿರುಚಿಗೆ ತಕ್ಕಂತೆ ರೂಪಿಸುವವನು ಮಾತ್ರ ಬುದ್ಧಿವಂತ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಸಿಎಂ ಬದಲಾವಣೆ ಬಗ್ಗೆ ಮಹತ್ವದ ಮಾಹಿತಿ ನೀಡಿದ ಗೃಹ ಸಚಿವ

• ಉದಯವಾಹಿನಿ, ಬೆಂಗಳೂರು

ಸಿಎಂ ಬದಲಾವಣೆ ಬಗ್ಗೆ ಮಹತ್ವದ ಮಾಹಿತಿಯನ್ನು ಮೈಸೂರಿನಲ್ಲಿ ಗೃಹ ಸಚಿವ ಜಿ.ಪರಮೇಶ್ವರ್ ಅವರು ನೀಡಿದ್ದಾರೆ. ಅವರು ಮೈಸೂರಿನಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡುತ್ತ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸುವ ಬಗ್ಗೆ ಯಾವತ್ತೂ ಕೂಡ ಪಾರ್ಟಿಯಲ್ಲಿ ಮಾತನಾಡಿಲ್ಲ, ಬಿಜೆಪಿಯವರಿಗೆ ಸಿದ್ದರಾಮಯ್ಯ ಅವರನ್ನು ಕಂಡರೇ ಹೊಟ್ಟೆ ಕಿಚ್ಚು ಅಂತ ತಿಳಿಸಿದರು.

ಇದೇ ವೇಳೆ ಅವರು ಮಾತನಾಡುತ್ತ , ರಾಜ್ಯದಲ್ಲಿ ಬಿಪಿಎಲ್ ಕಾರ್ಡ್‌ಗಳ ಪರಿಷ್ಕರಣೆ ಹಾಗೂ ಗ್ಯಾರಂಟಿಗಳಿಗೂ ಸಂಬಂಧವಿಲ್ಲ, ಈಗಾಗಲೇ ಸರ್ಕಾರಿ ನೌಕರರು, ಎರಡು ಕಾರು ಹೊಂದಿರುವವರು, ತೆರಿಗೆ ಕಟ್ಟುತ್ತಿದ್ದವರು, 3 ಹೆಕ್ಟೇರ್ ಗಿಂತ ಹೆಚ್ಚು ಭೂಮಿ ಹೊಂದಿರುವವರು ಬಿಪಿಎಲ್ ಕಾರ್ಡ್ ಗಳನ್ನು ಬಳಸುತ್ತಿದ್ದಾರೆ. ಇಂಥವರು ತಾವೇ ಸ್ವತಃ ಕಾರ್ಡ್ ಗಳನ್ನು ವಾಪಸ್ ನೀಡಬೇಕಿತ್ತು ಎಂದು ತಿಳಿಸಿದ್ದಾರೆ. ಈಗಾ ನಾವು ಕಾರ್ಡ್ ಗಳನ್ನು ಪರಿಷ್ಕರಣೆ ಮಾಡುವ ಪರಿಸ್ತಿತಿ ಬಂದಿದೆ. ಈ ಕೆಲಸ ಮುಂಚೆನೇ ಮಾಡಬೇಕಾಗಿತ್ತು. ತಡವಾದರೂ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.

## ಆಪರೇಶನ್ ಕಮಲದಿಂದಲೇ ಸಮ್ಮಿಶ್ರ ಸರ್ಕಾರ ಉರುಳಿಬಿದ್ದಿತು

• ಉದಯವಾಹಿನಿ, ಮಂಡ್ಯ

ಹಗರಣಗಳಿಂದ ಸರ್ಕಾರ ಉರುಳಲ್ಲ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಹಳಷ್ಟು ಹಗರಣಗಳು ನಡೆದರೂ ಅವರು ಅವಧಿ ಪೂರೈಸಿದರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪಗಳನ್ನು ಮಾಡಲಾಗುತ್ತಿದೆಯೇ ಹೊರತು ಯಾವುದನ್ನೂ ಸಾಬೀತು ಮಾಡಿಲ್ಲ, ಹಾಗಾಗಿ ಸರ್ಕಾರ ಉರುಳುವ ಚಾನ್ಸೇ ಇಲ್ಲ ಎಂದು ಚಲುವರಾಯಸ್ವಾಮಿ ಹೇಳಿದರು.

ನಗರದಲ್ಲಿಂದು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತಾಡಿದ ಸಚಿವ ಎನ್ ಚಲುವರಾಯಸ್ವಾಮಿ ಆಪರೇಶನ್ ಕಮಲದ ಬಗ್ಗೆ ಮಾತು ಕೇಳಿಬರುತ್ತಿರೋದು ಮೊದಲ ಸಲವಲ್ಲ, ಹಿಂದೆ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಬಿಎಸ್ ಯಡಿಯೂರಪ್ಪರನ್ನು ಮುಖ್ಯಮಂತ್ರಿ ಮಾಡಲು ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರನ್ನು ಖರೀದಿಸಲಾಗಿತ್ತು, ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಪದೇಪದೆ ಸರ್ಕಾರ ಬೀಳುತ್ತೆ ಅನ್ನುತ್ತಿದ್ದಾರೆ, ಆಪರೇಶನ್ ಕಮಲ ನಡೆಯುತ್ತಿದೆ ಅನ್ನೋದಿಕ್ಕೆ ಮತ್ತೇನು ಸಾಕ್ಷಿ ಬೇಕು? ಎಂದು ಹೇಳಿದರು.

## ಏರ್‌ಪೋರ್ಟ್ ಮಾದರಿಯಲ್ಲಿ ಮೆಜೆಸ್ಟಿಕ್ ರೈಲು ನಿಲ್ದಾಣ ಅಭಿವೃದ್ಧಿ

• ಉದಯವಾಹಿನಿ, ಬೆಂಗಳೂರು

ರೈಲ್ವೆ ಇಲಾಖೆಯ ರಾಜ್ಯ ಸಚಿವ ವಿ. ಸೋಮಣ್ಣನವರು ಮೆಜೆಸ್ಟಿಕ್ ರೈಲು ನಿಲ್ದಾಣವನ್ನು 1500 ಕೋಟಿ ರೂಪಾಯಿ ವೆಚ್ಚದಲ್ಲಿ ವಿಮಾನ ನಿಲ್ದಾಣದ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಘೋಷಿಸಿದ್ದಾರೆ. ಈ ಯೋಜನೆಯು ವಿಮಾನ ನಿಲ್ದಾಣದಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದ್ದಾರೆ.

ಏರ್‌ಪೋರ್ಟ್ ಮಾದರಿಯಲ್ಲಿ ಮೆಜೆಸ್ಟಿಕ್ ರೈಲು ನಿಲ್ದಾಣ ಅಭಿವೃದ್ಧಿ ಮಾಡುತ್ತೇವೆ ಎಂದು ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ. ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಅಭಿವೃದ್ಧಿಗೆ ಡಿಪಿಆರ್ ಸಿದ್ಧವಾಗಿದೆ ಎಂದು ಹೇಳಿದ್ದಾರೆ.

ರೈಲು ನಿಲ್ದಾಣ ಅಭಿವೃದ್ಧಿ ಬಗ್ಗೆ ರೈಲ್ವೆ ಮಂಡಳಿ ಕೆಲ ಸ್ಪಷ್ಟನೆ ಕೇಳಿದೆ. ಮುಂದಿನ ದಿನಗಳಲ್ಲಿ ರೈಲ್ವೆ ಮಂಡಳಿ ಮುಂದೆ ಇಡುತ್ತೇವೆ. ಒಳ್ಳೆಯ ಕೆಲಸಗಳಿಗೆ ಪ್ರಧಾನಿ ನರೇಂದ್ರ ಮೋದಿ ಬೇಡ ಎನ್ನುವುದಿಲ್ಲ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜೊತೆ ಚರ್ಚಿಸಿ ಕೆಲಸ ಆರಂಭಿಸುತ್ತೇವೆ ಎಂದು ತಿಳಿಸಿದ್ದಾರೆ.

## ಬಿಜೆಪಿಗೆ ಕಾಂಗ್ರೆಸ್ ಶಾಸಕರನ್ನು ಕಳುಹಿಸಿದ್ದೆ ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ, ಧಾರವಾಡ

ಬಿಜೆಪಿ ಆಪರೇಷನ್ ಕಮಲ ಮಾಡಲು ಕಾಂಗ್ರೆಸ್ ಶಾಸಕರಿಗೆ 100 ಕೋಟಿ ಆಫರ್ ನೀಡಿದೆ ಎಂದು ಶಾಸಕ ಗಣಿಗ ರವಿ ಕುಮಾರ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಈ ಕುರಿತಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಇದೀಗ ಹೊಸ ಬಾಂಬ್ ಸಿಡಿಸಿದ್ದು, ಈ ಹಿಂದೆ ಬಿಜೆಪಿ ಸರ್ಕಾರ ರಚನೆಗೆ ಕಾಂಗ್ರೆಸ್ಸಿನ ಶಾಸಕರನ್ನು ಕಳುಹಿಸಿದ್ದೇ ಸಿಎಂ ಸಿದ್ದರಾಮಯ್ಯನವರು ಎಂದು ಹೊಸ ಬಾಂಬ್ ಸಿಡಿಸಿದ್ದಾರೆ. ಬಿಜೆಪಿ ಸರ್ಕಾರ ರಚನೆಗೆ ಕೆಲ ಶಾಸಕರನ್ನೇ ಸಿದ್ದರಾಮಯ್ಯನವರೇ ಕಳುಹಿಸಿದ್ದರು. ಕಳೆದ ಬಾರಿ ಬಿಜೆಪಿ ಸರ್ಕಾರ ರಚನೆ ಮಾಡೋವಾಗ ಶಾಸಕರನ್ನು ಕಳುಹಿಸಿದ್ದೆ ಕಾಂಗ್ರೆಸ್. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿ ಮುಂದುವರೆಯಬಾರದು ಎನ್ನುವ ಕಾರಣಕ್ಕೆ ಸಿದ್ದರಾಮಯ್ಯನವರೇ ಕೆಲ ಶಾಸಕರನ್ನು ಕಳುಹಿಸಿದ್ದರು. ಹೀಗಾಗಿ ನಾವು ಸರ್ಕಾರ ರಚನೆ ಮಾಡಿದ್ದೆವು. ಈ ಬಾರಿ ಅವರಿಗೆ ಬಹುಮತ ಇದೆ. ನಾವು ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.



• ರುಂಡವಿಲ್ಲದ ಮಹಿಳೆಯ ಮೃತದೇಹ ಅರೆಬೆತ್ತಲೆಯಾಗಿ ಪತ್ತೆ • ಈಶಾನ್ಯ ರಾಜ್ಯಕ್ಕೆ ಮತ್ತೆ 50 ಸಿಎಪಿಎಫ್ ತುಕಡಿಗಳನ್ನ ರವಾನಿಸಿದ ಕೇಂದ್ರ • ಜಿರಿಬಾಮ್ ನಲ್ಲಿ 5 ಚರ್ಚ್‌ಗಳು, 14 ಮನೆಗಳನ್ನು ಸುಟ್ಟು ಹಾಕಲಾಗಿದೆ

# ಮಣಿಪುರ ಹಿಂಸಾಚಾರ

• ಉದಯವಾಹಿನಿ, ನವದೆಹಲಿ

ಈಶಾನ್ಯ ರಾಜ್ಯ ಮಣಿಪುರದಲ್ಲಿ ಹಿಂಸಾಚಾರ ಮುಂದುವರೆದಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ಕಚೇರಿಗಳನ್ನು ಉದ್ರಿಕ್ತರ ಗುಂಪು ಧ್ವಂಸಗೊಳಿಸಿದ್ದು, ಗಲಭೆಪೀಡಿತ ಜಿಲ್ಲೆಗಳಲ್ಲಿ ಅನಿರ್ದಿಷ್ಟಾವಧಿ ಕರ್ಫ್ಯೂವನ್ನು ಜಾರಿ ಮಾಡಲಾಗಿದೆ. ಮಣಿಪುರದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದು, ಈಶಾನ್ಯ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದು ಸವಾಲುದಾಯಕವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ



ಸರ್ಕಾರ 5000 ಭದ್ರತಾ ಸಿಬ್ಬಂದಿಗಳನ್ನೊಳಗೊಂಡ ಹೆಚ್ಚುವರಿ 50 ಸಿಎಪಿಎಫ್ ತುಕಡಿಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದೆ.

ಜಿರಿಬಾಮ್‌ನಲ್ಲಿ ನ.12ರಂದು ಉಲ್ಬಣಗೊಂಡ ಹಿಂಸಾಚಾರದ ಬಳಿಕ ಕೇಂದ್ರ ಗೃಹ ಸಚಿವಾಲಯ ಹೆಚ್ಚುವರಿಯಾಗಿ 15 ಸಿಆರ್‌ಪಿಎಫ್ ಮತ್ತು ಐದು ಬಿಎಸ್‌ಎಫ್ ತಂಡಗಳೊನ್ನಳಗೊಂಡ 20 ಸಿಎಪಿಎಫ್ ತುಕಡಿಗಳನ್ನು ಈಗಾಗಲೇ ನಿಯೋಜಿಸಿತ್ತು.

1 ಮಣಿಪುರ ಹಿಂಸಾಚಾರ ಪ್ರಕರಣಗಳ ತನಿಖೆ NIAಗೆ ವಹಿಸಿದ ಕೇಂದ್ರ

2 ಬಿಜೆಪಿ-ಕಾಂಗ್ರೆಸ್ ಕಚೇರಿಗಳಿಗೆ ನುಗ್ಗಿದ ಗುಂಪು

3 ಮಣಿಪುರ ಗಡಿಯಲ್ಲಿ ಮತ್ತೆರಡು ಮೃತದೇಹ ಪತ್ತೆ

ಆದರೂ ಮಣಿಪುರದಲ್ಲಿ ಹಿಂಸಾಚಾರ ನಿಯಂತ್ರಣಕ್ಕೆ ಬರುತ್ತಿಲ್ಲ. ಮತ್ತೆ 50 ತುಕಡಿಗಳನ್ನು ನಿಯೋಜಿಸಿದ್ದು, ಇದರಲ್ಲಿ 35 ಸಿಆರ್‌ಪಿಎಫ್ ಇದ್ದು, 15 ಬಿಎಸ್‌ಎಫ್ ತುಕಡಿಗಳಿವೆ ಎಂದು ಪಿಟಿಐ ವರದಿ ಮಾಡಿದೆ. ಮಣಿಪುರದಲ್ಲಿ ಈಗಾಗಲೇ ಸಿಆರ್‌ಪಿಎಫ್ ಪ್ರಧಾನ ನಿರ್ದೇಶಕ ಎಡಿ ಸಿಂಗ್ ಮತ್ತು ಕೇಂದ್ರ ಶಸಾಸ್ತ್ರ ಪೊಲೀಸ್ ಪಡೆಯ ಹಿರಿಯ ಅಧಿಕಾರಿಗಳು ಬೀಡು ಬಿಟ್ಟಿದ್ದಾರೆ.

ಕಳೆದ ವರ್ಷ ಮೇ ತಿಂಗಳಲ್ಲಿ ಈಶಾನ್ಯ ರಾಜ್ಯದಲ್ಲಿ ಭುಗಿಲೆದ್ದ ಹಿಂಸಾಚಾರದಿಂದ ಇಲ್ಲಿಯವರೆಗೆ ರಾಜ್ಯದಲ್ಲಿ 218 ಸಿಎಪಿಎಫ್ ತುಕಡಿಗಳನ್ನು ಈ ರಾಜ್ಯದಲ್ಲಿ ನಿಯೋಜಿಸಲಾಗಿದೆ. ಇದೀಗ ನಿಯೋಜಿಸಿರುವ ಹೊಸ 50 ಘಟಕಗಳು ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ನಿರ್ವಹಣೆಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಗೃಹ ಸಚಿವಾಲಯಕ್ಕೆ ವರದಿ ಮಾಡಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಮಣಿಪುರದಲ್ಲಿ ಹಿಂಸಾಚಾರದ ಬಳಿಕ ಕೇಂದ್ರ ಗೃಹ ಸಚಿವಾಲಯ ರಾಜ್ಯದ ಭದ್ರತಾ ಪರಿಸ್ಥಿತಿ ಕುರಿತು ಪ್ರಮುಖ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ. ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ನಿರ್ವಹಿಸುವಂತೆ

### ಡೊಭಾಲ್ ಜತೆ ಶಾ ಸಭೆ

ಮಣಿಪುರದ ಮೂರು ಹಿಂಸಾಚಾರ ಪ್ರಕರಣಗಳ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಿ ಕೇಂದ್ರ ಗೃಹ ಸಚಿವಾಲಯ ಆದೇಶ ಹೊರಡಿಸಿದೆ. ಕೇಂದ್ರ ಗೃಹ ಸಚಿವಾಲಯದ ಆದೇಶದ ಬೆನ್ನಲ್ಲೇ ಮಣಿಪುರದ ಜೀವಹಾನಿ ಮತ್ತು ಕಾನೂನು ಸುವ್ಯವಸ್ಥೆಗೆ ಅಡ್ಡಿಪಡಿಸಲು ಕಾರಣವಾದ ಮೂರು ಹಿಂಸಾಚಾರ ಪ್ರಕರಣಗಳ ತನಿಖೆಯನ್ನು ವಹಿಸಿಕೊಂಡಿರುವ ಎನ್‌ಐಎ ತಂಡವು, ಪೊಲೀಸರಿಂದ ಮಾಹಿತಿ ಕಲೆಹಾಕುತ್ತಿದೆ. ಮಣಿಪುರದಲ್ಲಿ ಹಿಂಸಾಚಾರ ತೀವ್ರಗೊಂಡ ಬೆನ್ನಲ್ಲೇ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಸರ್ವಪಕ್ಷಗಳ ತುರ್ತುಸಭೆ ಕರೆದಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಇತ್ತ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಣಿಪುರದ ಭದ್ರತಾ ಪರಿಸ್ಥಿತಿಯನ್ನು ಪರಿಶೀಲಿಸಲು ಪ್ರಮುಖ ಸಭೆಯನ್ನು ನಡೆಸಲಿದ್ದಾರೆ. ಮಣಿಪುರದ ಅಸ್ಥಿರ ಪರಿಸ್ಥಿತಿಯನ್ನು ನಿಭಾಯಿಸಲು ಕಾರ್ಯತಂತ್ರವನ್ನು ರೂಪಿಸುವ ನಿರೀಕ್ಷೆಯಿದೆ.

### ಮೊತ್ತೋರ್ವ ಪ್ರತಿಭಟನಾಕಾರ ಸಾವು

ಮಣಿಪುರದ ಕಣಿವೆ ಪ್ರದೇಶಗಳಲ್ಲಿ ಪ್ರತಿಭಟನೆಗಳು ಮತ್ತು ಹಿಂಸಾಚಾರ ಮುಂದುವರಿದಿದ್ದರಿಂದ ಒಬ್ಬರು ಸಾವನ್ನಪ್ಪಿ, ಮತ್ತೊಬ್ಬರು ಗಾಯಗೊಂಡಿದ್ದಾರೆ. ಜನರನ್ನು ಚದುರಿಸಲು ಜಿರಿಬಾಮ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಗುಂಡು ಹಾರಿಸಿದ್ದು, ಕೆ ಅಥೌಬಾ ಎಂದು ಗುರುತಿಸಲಾದ 20 ವರ್ಷದ ವ್ಯಕ್ತಿಯನ್ನು ಕೊಂದಿದ್ದಾರೆ. ಬಾಬುಪಾರಾದಲ್ಲಿ ರಾತ್ರಿ 11 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಅದೇ ಪ್ರದೇಶದಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಮತ್ತು ಕಾಂಗ್ರೆಸ್‌ನ ಸ್ಥಳೀಯ ಕಚೇರಿಗಳ ಪೀಠೋಪಕರಣಗಳು ಮತ್ತು ಇತರ ವಸ್ತುಗಳನ್ನು ಗುಂಪೊಂದು ಸುಟ್ಟು ಹಾಕಿತು. ಜಿರಿಬಾಮ್ ಪೊಲೀಸ್ ಠಾಣೆಯ 500 ಮೀಟರ್ ವ್ಯಾಪ್ತಿಯಲ್ಲಿ ಹಿಂಸಾಚಾರ ನಡೆದಿದೆ. ಗಾಯಗೊಂಡ ವ್ಯಕ್ತಿಯನ್ನು ಸಮೀಪದ ಆಸ್ಪತ್ರೆಗೆ ರವಾನಿಸಲಾಗಿದ್ದು, ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ಅವರ ಸ್ಥಿತಿ ಏನೆಂಬುದನ್ನು ಇನ್ನೂ ಬಹಿರಂಗಪಡಿಸಿಲ್ಲ.

ಸೂಚಿಸಿ ಭದ್ರತಾ ಪಡೆ ನಿಯೋಜನೆಗೆ ಕೇಂದ್ರ ಗೃಹ ಸಚಿವಾಲಯ ಸೂಚನೆ ನೀಡಿತು. ಶಸಾಸ್ತ್ರ ಹೊಂದಿರುವ ಎರಡು ಸಮುದಾಯದ ಗುಂಪುಗಳು ಹಿಂಸಾಚಾರದಲ್ಲಿ ತೊಡಗಿದ್ದು, ಅನೇಕ ಜನರು ಜೀವ ಕಳೆದು ಕೊಂಡಿದ್ದಾರೆ. ಇಲ್ಲಿಯವರೆಗೆ 220ಕ್ಕೂ ಹೆಚ್ಚು ಮಂದಿ ಜೀವ ಬಿಟ್ಟಿದ್ದಾರೆ. ಅಷ್ಟೇ ಅಲ್ಲ ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ.


ಮೂರು ಎಫ್‌ಐಆರ್ ದಾಖಲಿಸಿದ ಎನ್‌ಐಎ: ಮಣಿಪುರದ ಇತ್ತೀಚಿನ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ ಮೂರು ಪ್ರಕರಣಗಳನ್ನು ದಾಖಲಿಸಿ ವಿಚಾರಣೆ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪ್ರಕರಣಗಳಲ್ಲಿ ಮಣಿಪುರ ಪೊಲೀಸರು ಸಹ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ನವೆಂಬರ್ 13ರಂದು ಭಯೋತ್ಪಾದಕ ವಿರೋಧಿ ಕಾರ್ಯಾಚರಣೆ ಅಡಿ ಈ ಪ್ರಕರಣಗಳನ್ನು ದಾಖಲಿಸಲಾಗಿದ್ದು, ತನಿಖೆ ನಡೆಯುತ್ತಿದೆ.

ಶಸ್ತ್ರಸಜ್ಜಿತ ಭಯೋತ್ಪಾದಕರ ಗುಂಪು ಜಿರಿಬಾಮ್‌ನಲ್ಲಿ ಮಹಿಳೆಯ ಕೊಲೆ ಸಂಬಂದ ಎಫ್‌ಐಆರ್ ದಾಖಲಾಗಿದೆ. ಇನ್ನು ಜಕುರ್ದೋರ್ ಕಾರೊಂಗ್‌ನಲ್ಲಿ ಸಿಆರ್‌ಪಿಎಫ್ ಸಿಬ್ಬಂದಿ ಮೇಲೆ ಹಲ್ಲೆ ಮತ್ತು ಶಸ್ತ್ರಸಜ್ಜಿತ ಭಯೋತ್ಪಾದಕರು ಜಿರಿಬಾಮ್‌ನ ಬೊರೊಬೆಕ್ರಾ ಪೊಲೀಸ್ ಠಾಣೆ ಮೇಲೆ ಹಲ್ಲೆ ಹಾಗೂ ಬೊರೊಬೆಕ್ರಾದಲ್ಲಿನ ಮನೆಗೆ ಬೆಂಕಿ ಮತ್ತು ಮನೆ ಸುಟ್ಟ ಪ್ರಕರಣದಲ್ಲಿ ಎನ್‌ಐಎ ಅಧಿಕಾರಿಗಳು ತನಿಖೆ ಮುಂದುವರೆಸಿದ್ದಾರೆ.

**ಸಿಎಂ ಸರ್ವಪಕ್ಷ ಸಭೆ:** ಮಣಿಪುರದಲ್ಲಿ ಹಿಂಸಾಚಾರ ಭುಗಿಲೆದ್ದಿರುವ ಹಿನ್ನೆಲೆಯಲ್ಲಿ ಮಣಿಪುರ ಮುಖ್ಯಮಂತ್ರಿ ಬೀರೇನ್ ಸಿಂಗ್ ಅವರು ಸರ್ವಪಕ್ಷಗಳ ಸಭೆ ಕರೆದಿದ್ದಾರೆ. ಈ ಸಭೆಯಲ್ಲಿ ಮಣಿಪುರ ಹಿಂಸಾಚಾರವನ್ನು ಹತ್ತಿಕ್ಕಲು ಏನೆಲ್ಲಾ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಎಲ್ಲಾ ಪಕ್ಷಗಳ ಜತೆ ಮುಖ್ಯಮಂತ್ರಿ ಬೀರೇನ್ ಸಿಂಗ್ ಚರ್ಚೆ ನಡೆಸುವರು.

### ಆರು ಶವಗಳು ಪತ್ತೆ

ಗೋಣಿಚೀಲದಲ್ಲಿ ಕಟ್ಟಿದ್ದ ವಿವಸ್ತ್ರ ಮಹಿಳೆ ಮತ್ತು ಹೆಣ್ಣುಮಗುವಿನ ಶವ ದಕ್ಷಿಣ ಅಸ್ಸಾಂನ ಬರಾಕ್ ನದಿಯಲ್ಲಿ ಪತ್ತೆಯಾಗಿದೆ. ನೆರೆಯ ಮಣಿಪುರದಲ್ಲಿ ಆರು ಶವಗಳು ಪತ್ತೆಯಾದ ಬೆನ್ನಲ್ಲೇ ಭುಗಿಲೆದ್ದ ಹಿಂಸಾಚಾರದ ನಡುವೆಯೇ ಈ ಘಟನೆ ವರದಿಯಾಗಿದೆ. ಜಿರಿಬಾಮ್‌ನ ಪರಿಹಾರ ಶಿಬಿರದಿಂದ ನಾಪತ್ತೆಯಾದ ಮೂವರು ಮಹಿಳೆಯರು ಮತ್ತು ಮಕ್ಕಳ ಶವ ಪತ್ತೆಯಾಗಿತ್ತು. ಅಸ್ಸಾನ ಕಚಾರ್‌ನಲ್ಲಿರುವ ಚಿರಿಘಾಟ್‌ನಲ್ಲಿ ಒಂದು ದೇಹ ಪತ್ತೆಯಾಗಿದ್ದರೆ. ಇದೇ ಜಿಲ್ಲೆಯ ಸಿಂಗರ್ಬಂದ್‌ನಲ್ಲಿ ಮತ್ತೊಂದು ಶವ ಪತ್ತೆಯಾಗಿದೆ. ಇಂಪಾಲ ಕಣಿವೆಯಲ್ಲಿ ಒಂಬತ್ತು ಮಂದಿ ಬಿಜೆಪಿ ಶಾಸಕರು ಸೇರಿದಂತೆ 13 ಶಾಸಕರ ಮನೆಗಳ ಮೇಲೆ ಉದ್ರಿಕ್ತರ ಗುಂಪು ದಾಳಿ ನಡೆಸಿದ ಮರುದಿನವೇ ಈ ಘಟನೆ ವರದಿಯಾಗಿದೆ.



## ಯಾವುದೇ ಕಾರ್ಡ್‌ಗಳನ್ನು ರದ್ದು ಮಾಡುತ್ತಿಲ್ಲ : ಸಚಿವ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ರಾಜ್ಯ ಸರ್ಕಾರವು ಬಿಪಿಎಲ್ ಕಾರ್ಡ್ ಪರಿಷ್ಕರಣೆಗೆ ಮುಂದಾಗಿದ್ದು, ಸದ್ಯ ಬೆಂಗಳೂರು ವ್ಯಾಪ್ತಿಯಲ್ಲಿ ಬಿಪಿಎಲ್ ಕಾರ್ಡ್ ಪರಿಷ್ಕರಣೆ ಆಗಲಿದೆ ಎಂದು ತಿಳಿದು ಬಂದಿದೆ. ಈ ಕುರಿತಾಗಿ ಆಹಾರ ಸಚಿವ ಕೆ.ಎಚ್ ಮುನಿಯಪ್ಪ ಸ್ಪಷ್ಟನೆ ನೀಡಿದ್ದು, ಬಿಪಿಎಲ್ ಕಾರ್ಡ್ ಹೊಂದಿರುವವರನ್ನು ಎಪಿಎಲ್ ಕಾರ್ಡಿಗೆ ಸೇರಿಸುತ್ತೇವೆ. ಆದರೆ ಯಾವುದೇ ಕಾರ್ಡ್ ಗಳನ್ನು ರದ್ದು ಪಡಿಸುತ್ತಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಪಿಎಲ್ ಕಾರ್ಡ್ ಎಪಿಎಲ್ ಕಾರ್ಡ್ ಯಾವುದು ರದ್ದು ಮಾಡುತ್ತಿಲ್ಲ. ಸುಮ್ಮನೆ ರಾಜಕೀಯವಾಗಿ ಮಾತನಾಡುತ್ತಿದ್ದಾರೆ ಅಷ್ಟೇ ಎಂದು ಸಚಿವ ಕೆ ಹೆಚ್ ಮುನಿಯಪ್ಪ ಸ್ಪಷ್ಟನೆ ನೀಡಿದರು.



ದಕ್ಷಿಣ ಭಾರತದಲ್ಲಿ ರಾಜ್ಯದಲ್ಲಿ 80 ಪರ್ಸೆಂಟ್ ಬಿಪಿಎಲ್ ಕಾರ್ಡ್ ದಾರರಿದ್ದಾರೆ ಕೆಲವರು ಬಿಪಿಎಲ್‌ಗೆ ಅರ್ಹರಲ್ಲದವರು ಕೂಡ ಇದ್ದಾರೆ. ಅಂತವರನ್ನು ತೆಗೆದು ಎಪಿಎಲ್‌ಗೆ ಹಾಕುತ್ತೇವೆ ಆದರೆ ಯಾವುದೇ ಕಾರ್ಡ್ ರದ್ದು ಮಾಡುವುದಿಲ್ಲ. ಎಪಿಎಲ್ ಕಾರ್ಡ್ ದಾರರಿಗೂ ಬೇರೆ ಬೇರೆ ಸೌಲಭ್ಯಗಳು ಸಿಗಲಿವೆ. ಅನುಕೂಲಸ್ಥರು ತೆರಿಗೆ ಪಾವತಿಸುವವರನ್ನು ಎಪಿಎಲ್ ಕಾರ್ಡಿಗೆ ಸೇರಿಸುತ್ತೇವೆ. ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣದಲ್ಲಿ 50% ಮೇಲೆ ಇಲ್ಲ ಆದರೆ ನಮ್ಮ ರಾಜ್ಯದಲ್ಲಿ ಮಾತ್ರ 80 ಪರ್ಸೆಂಟ್ ಬಿಪಿಎಲ್ ಕಾರ್ಡ್ದಾರರು ಇದ್ದಾರೆ. ಅವರನ್ನು ತೆಗೆಯುವ ಕೆಲಸ ಮಾಡುತಿದ್ದೇವೆ ಅಷ್ಟೇ. ರಾಜ್ಯದ 6.5 ಕೋಟಿ ಜನರಲ್ಲಿ 4.5 ಕೋಟಿ ಫಲಾನುಭವಿಗಳು ಇದ್ದಾರೆ. ಬಿಪಿಎಲ್ ಗೆ ಅರ್ಹರಲ್ಲದವರನ್ನು ಎಪಿಎಲ್ ಗೆ ಬದಲಾವಣೆ ಮಾಡುತಿದ್ದೇವೆ. ಇದು ಆದ ತಕ್ಷಣ ಬಿಪಿಎಲ್ ಕಾರ್ಡ್ ಸಿಗದವರಿಗೆ ಹೊಸ ಕಾರ್ಡ್ ನೀಡುತ್ತೇವೆ ಎಂದು ಆಹಾರ ಸಚಿವ ಕೆಎಚ್ ಮುನಿಯಪ್ಪ ತಿಳಿಸಿದರು.

## ಸಿಎಂ-ಕೇಂದ್ರ ಸಚಿವ ಮುಖಾಮುಖಿ

• ಉದಯವಾಹಿನಿ, ಬೆಂಗಳೂರು



### ಮುಡಾ ಸೈಟ್ ಹಗರಣದ ಬಗ್ಗೆ ಚರ್ಚೆ

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸಿಎಂ ಸಿದ್ದರಾಮಯ್ಯ-ಕೇಂದ್ರ ಸಚಿವ ವಿ.ಸೋಮಣ್ಣ ಮುಖಾಮುಖಿ ಭೇಟಿಯಾಗಿದ್ದಾರೆ. ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವ ವಿ.ಸೋಮಣ್ಣ ಭೇಟಿಯಾಗಿದ್ದು, ಮುಡಾ ಸೈಟ್ ಬಗ್ಗೆ ಮಾತನಾಡಿದ್ದಾರೆ. ನಾನು ಅವತ್ತೆ ಹೇಳಿದ್ದೆ. ಸೆರೆಂಡರ್ ಮಾಡಿ ಅಂತ, ಅವತ್ತು ಸೆರೆಂಡರ್ ಮಾಡಿದ್ರೆ ಇವತ್ತು ಇಷ್ಟೆಲ್ಲಾ ಅಗುತ್ತಿತ್ತಾ ಎಂದು ಹೇಳಿದ್ರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಸಿಎಂ ಸಿದ್ದರಾಮಯ್ಯ, ಕಾಯ್ದೆ ಪ್ರಕಾರ ದುಡ್ಡು ಕೊಡಬೇಕಿತ್ತು. ಅವರು ಬರೇ 14 ಸೈಟ್ ಕೊಟ್ಟಿದ್ದಾರೆ ಎಂದು ಉತ್ತರಿಸಿದ್ದಾರೆ.

# ಚನ್ನಪಟ್ಟಣ ಚುನಾವಣೆಯಲ್ಲಿ ಜೋರಾಯ್ತು ಬೆಟ್ಟಿಂಗ್ ಭರಾಟೆ

■ ಚುನಾವಣೆಯ ಫಲಿತಾಂಶ ವಿಚಾರವಾಗಿ ಯಾರೂ ಬೆಟ್ಟಿಂಗ್ ಕಟ್ಟಬೇಡಿ ■ ಫೋನ್ ಸ್ವಿಚ್ ಆಫ್ ಮಾಡಿ ಮಲಗಿಬಿಡಿ ■ ಬೆಟ್ಟಿಂಗ್ ಕಟ್ಟಿ ಆರ್ಥಿಕ ನಷ್ಟ ಅನುಭವಿಸಬೇಡಿ

• ಉದಯವಾಹಿನಿ, ಹಾಸನ

ಚನ್ನಪಟ್ಟಣ ಚುನಾವಣಾ ಫಲಿತಾಂಶ ವಿಚಾರವಾಗಿ ಯಾರೂ ಬೆಟ್ಟಿಂಗ್ ಕಟ್ಟಬೇಡಿ. ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿ ಆರಾಮಾಗಿರಿ ಎಂದು ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.

ಯಾರೂ ಕೂಡ ಬೆಟ್ಟಿಂಗ್ ಕಟ್ಟಿ ಆರ್ಥಿಕ ನಷ್ಟ ಅನುಭವಿಸಬೇಡಿ. ಬೆಟ್ಟಿಂಗ್‌ನಿಂದ ಎಷ್ಟೋ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ಚುನಾವಣೆಯ ಫಲಿತಾಂಶ ವಿಚಾರವಾಗಿ ಯಾರೂ ಬೆಟ್ಟಿಂಗ್ ಕಟ್ಟಬೇಡಿ. ಫೋನ್ ಸ್ವಿಚ್ ಆಫ್ ಮಾಡಿ ಮಲಗಿಬಿಡಿ, ಬೆಟ್ಟಿಂಗ್ ಕಟ್ಟಿ ಆರ್ಥಿಕ ನಷ್ಟ ಅನುಭವಿಸಬೇಡಿ. ಮಾಧ್ಯಮದ ಮೂಲಕ ನಿಖಿಲ್ ಕುಮಾರಸ್ವಾಮಿ ಅವರು ಮನವಿ ಮಾಡಿದರು. ಎಲ್ಲಾರ ಬೆಂಬಲ ಸಿಕ್ಕಿದ್ದರಿಂದ ಗೆಲುವಿನ ವಿಶ್ವಾಸ ಮೂಡಿದೆ. ನಿಮ್ಮಲ್ಲಿ ಮನವಿ ಮಾಡುವೆ. ಎಲ್ಲಾದಕ್ಕೂ ದೇವರಿದ್ದಾನೆ. ಆರಾಮಾಗಿ ಮಲಗಿ. ಜನತೆಯ ಮತ್ತು ದೇವರ ಆಶೀರ್ವಾದದಿಂದ ಗೆಲ್ಲುವ ವಿಶ್ವಾಸವಿದೆ.



ಈ ಉಪಚುನಾವಣೆಯಲ್ಲಿ ಮಾಜಿ ಸಚಿವರು, ಶಾಸಕರು, ಕಾರ್ಯಕರ್ತರು, ಅಭಿಮಾನಿಗಳು ಸೇರಿದಂತೆ ಸಾಕಷ್ಟು ಜನ ನನ್ನ ಚುನಾವಣೆಗಾಗಿ ದುಡಿದಿದ್ದಾರೆ. ಜೆಡಿಎಸ್ ಪಕ್ಷದ ಇತಿಹಾಸದಲ್ಲಿ ಇಂತಹ ಚುನಾವಣೆ ನಡೆದಿರಲಿಲ್ಲ. ಇದು ಇತಿಹಾಸದ ಪುಟಗಳಲ್ಲಿ ಉಳಿಯುವ ಚುನಾವಣೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಹೇಳಿದರು.

**ಇದು ಇತಿಹಾಸದ ಪುಟಗಳಲ್ಲಿ ಉಳಿಯುವ ಚುನಾವಣೆ**

### ಹಗರಣಗಳ ವಿರುದ್ಧ ನಾವುಕೂಡ ಜಾಗೃತಿ ಮೂಡಿಸುವ ಪಾದಯಾತ್ರೆ

ಇವತ್ತು136 ಶಾಸಕರನ್ನ ಕಾಂಗ್ರೆಸ್ ನವರು ಇಟ್ಟುಕೊಂಡಿದ್ದಾರೆ. ಸರ್ಕಾರ ರಚನೆ ಮಾಡೋದಕ್ಕಿಂತ ಹೆಚ್ಚಿನ ಸ್ಥಾನವನ್ನ ಜನ ಕಾಂಗ್ರೆಸ್ ಪಕ್ಷಕ್ಕೆ ನೀಡಿದ್ದಾರೆ. ಕಳೆದ ಒಂದೂವರೆ ವರ್ಷದಿಂದ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ, ಹಗರಣಗಳ ವಿರುದ್ಧ ನಾವುಕೂಡ ಜಾಗೃತಿ ಮೂಡಿಸುವ ಪಾದಯಾತ್ರೆ ಮಾಡಿದ್ದೇವೆ ಎಂದರು. ಕಳೆದ ಲೋಕಸಭಾ ಚುನಾವಣೆ ವೇಳೆ ನಾಲ್ಕು ತಿಂಗಳು ಗ್ಯಾರಂಟಿ ತಡೆಹಿಡಿದಿದ್ದರು. ಈಗ ಚುನಾವಣೆ ಬರ್ತಿದ್ದಂಗೆ ಗೃಹಲಕ್ಷ್ಮಿ ಯೋಜನೆಯನ್ನ ನಾಲ್ಕೂ ತಿಂಗಳ ಹಣ ಒಟ್ಟಿಗೆ ಹಾಕ್ತೀವಿ ಅಂತಾರೆ. ಎಷ್ಟರ ಮಟ್ಟಿಗೆ ಜನಗಳಿಗೆ ಗ್ಯಾರೆಂಟಿ ರೀಚ್ ಆಗ್ತಿದೆ ಅನ್ನುವುದಕ್ಕೆ ಸರ್ಕಾರ ಉತ್ತರ ಕೊಡಬೇಕು ಎಂದು ಪ್ರಶ್ನಿಸಿದರು. ಸರ್ಕಾರ ಉರುಳಿಸೋದಗಾಲಿ ಅಥವಾ ದುಡ್ಡು ಕೊಟ್ಟು ಎಂಎಲ್‌ಗಳನ್ನ ಕೊಂಡುಕೊಳ್ಳುವ ಪ್ರಶ್ನೆಯೇ ಇಲ್ಲ. ಇಂದು ರಾಜ್ಯ ಸರ್ಕಾರಕ್ಕೆ ಜನ ಏನು ಆಶೀರ್ವಾದ ಮಾಡಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜನರೇ ತಿರಸ್ಕಾರ ಮಾಡುತ್ತಾರೆ ಎಂದು ನಿಖಿಲ್ ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಯುವಕರು, ಹಿರಿಯರು ಸೇರಿದಂತೆ ಎಲ್ಲಾರೂ ಉತ್ಸಾಹದಿಂದ ನನ್ನ ಜೊತೆ ಹೆಜ್ಜೆ ಹಾಕಿದ್ದಾರೆ. ಹಾಗಾಗಿ ನನ್ನ ಹೃದಯದಲ್ಲಿ ಸಂಪೂರ್ಣ ಗೆಲುವಿನ ವಿಶ್ವಾಸವಿದೆ. ದೇವೇಗೌಡರು, ಕುಮಾರಣ್ಣ 1500 ಕೋಟಿ ಅನುದಾನ ತಂದು ಚನ್ನಪಟ್ಟಣದ ಅಭಿವೃದ್ಧಿ ಮಾಡಿದ್ದಾರೆ. ಕ್ಷೇತ್ರದ ಜನರು ಆಶೀರ್ವಾದ ಮಾಡಿದರೆ ಮುಂದಿನ ದಿನಗಳಲ್ಲಿ ಯುವ ಸಮುದಾಯಕ್ಕೆ ಆದ್ಯತೆ ಕೊಡುತ್ತೇನೆ. ಉದ್ಯೋಗ ಸೃಷ್ಟಿ ಮಾಡಲು ದೃಢ ಸಂಕಲ್ಪ ಮಾಡಿದ್ದೇನೆ ಎಂದು ತಿಳಿಸಿದರು

ಕುಮಾರಣ್ಣ ಲಾಟರಿ ನಿಷೇಧ ಮಾಡಿದ್ರು ಎಂದು ಮಾತಾಡ್ತೀವಿ, ಆದರೆ ಆನ್‌ಲೈನ್ ಗೇಮ್‌ಗಳಿಗೆ ಬಹಳ ಜನ ಯುವಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು, ಇದು ಸಮಾಜವನ್ನ ಒಡೆಯುವ ಕೆಲಸ ಇಂತಹ ಕೃತ್ಯಗಳಿಗೆ ಯಾರೂ ಕೂಡ ಕೈ ಹಾಕಬೇಡಿ ಎಂದು ನಿಖಿಲ್ ಅವರು ಮನವಿ ಮಾಡಿದರು.

ಆಪರೇಷನ್ ಕಮಲ ವಿಚಾರಕ್ಕೆ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸ ಆಗಬಾರದು. ಆ ರೀತಿ ದಾಖಲೆಗಳು ಇದೆ ಅನ್ನೋದಾದ್ರೆ ರಾಜ್ಯದ ಜನತೆ ಮುಂದೆ ಇಡಲಿ. ಇವೆಲ್ಲ ಚರ್ಚೆಗೆ ಗ್ರಾಸವಾಗುವ ವಿಚಾರ ಆಗಬಾರದು ಎಂದರು.

**ಈ ದಿನದ ದರ** | ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,631/Gram24ct ₹6,995/Gram22ct | ಬೆಳ್ಳಿ: ₹89.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

### ವಚನದರ್ಶನ

ಈಚೆಗೆ ವಚನದರ್ಶನದ ವಿರೋಧ ತೋರಿತು. ವಚನಸಾಹಿತ್ಯ ವೇದವಿರೋಧಿ, ವಚನದರ್ಶನದಲ್ಲಿ ವೇದಪೂರಕದಂತೆ ಬಿಂಬಿಸಲಾಗಿದೆ ಎಂಬುದು ಆರೋಪ. ಮೊನ್ನೆ ವಚನದರ್ಶನ ಕಣ್ಣಾಡಿಸಿದೆ. ಗದಗಿನ ಸದಾಶಿವಾನಂದಸ್ವಾಮಿಗಳ ಗೌರವ ಸಂಪಾದಕತ್ವದಲ್ಲಿ ಜನಮೇಜಯ ಉಮರ್ಜಿ ನಿರಂಜನ ಪೂಜಾರ, ಚಂದ್ರಪ್ಪ ಬಾರಂಗಿ, ಸಂತೋಷಕುಮಾರ್ ಪಿ. ಕೆ. ಯವರ ಸಂಪಾದಕತ್ವದಲ್ಲಿ ಪ್ರಜ್ಞಾಪ್ರವಾಹ ಈ ಕೃತಿ ಪ್ರಕಟಿಸಿದೆ. 1/8 ಡೆಮ್ಮಿ ಗಾತ್ರ 232 ಪುಟ ಬೆಲೆ 260. ಉತ್ತಮ ಕಾಗದ, ಸುಂದರ ಮುದ್ರಣ. ಹದಿನೆಂಟು ಲೇಖಕರ ಹತ್ತೊಂಭತ್ತು ಲೇಖನ. ಇಪ್ಪತ್ತನೇ ಲೇಖನ ವಚನಕಾರರ ಪರಿಚಯ. ಕೊನೆಗೆ ಓದಬಹುದಾದ ಮೂವತ್ತೇಳು ಪುಸ್ತಕ ಪಟ್ಟಿ. ಇಲ್ಲಿ ವ್ಯಕ್ತವಾದ ಅಭಿಪ್ರಾಯ ಹೊಸವೇನಲ್ಲ. ಈ ಹಿಂದೆಯೇ ಎಂ. ಆರ್. ಶ್ರೀನಿವಾಸಮೂರ್ತಿ, ಆರ್. ಸಿ. ಹಿರೇಮಠ, ಹೆಚ್. ತಿಪ್ಪೇರುದ್ರಸ್ವಾಮಿ, ಎಂ. ಚಿದಾನಂದಮೂರ್ತಿ, ಸಿದ್ಧೇಶ್ವರ ಸ್ವಾಮಿಗಳು, ಶಿ. ಶಿ. ಬಸವನಾಳ, ಸಂ. ಶಿ. ಭೂಸನೂರಮಠ, ಇಮ್ಮಡಿ ಶಿವಬಸವಸ್ವಾಮಿಗಳು, ಎಂ. ಎಸ್. ಸುಂಕಾಪುರ, ಓ. ಎಲ್. ನಾಗಭೂಷಣಸ್ವಾಮಿ ಮುಂತಾದವರು ವಿವಿಧ ಕೃತಿಗಳಲ್ಲಿ ಈ ಅಭಿಪ್ರಾಯ ಹೇಳಿದ್ದಾರೆ. ಬಸವಣ್ಣನ ಜಗದಗಲ ಮುಗಿಲಗಲ ವಚನ ಮಹತೋ ಮಹೀಯಾನ್ ಉಪನಿಷನ್ಮಂತ್ರಕ್ಕೆ, ಚೆನ್ನಬಸವಣ್ಣನ ಆವಲ್ಲಿ ಸರ್ವಪ್ರಪಂಚ ನಿವೃತ್ತಿಯಾಗಿಹುದು ಅದೀಗ ಬ್ರಹ್ಮಜ್ಞಾನ ವಚನ ಭಿದ್ಯತೇ ಹೃದಯಗ್ರಂಥಿಃ ಉಪನಿಷನ್ಮಂತ್ರಕ್ಕೆ ಹೋಲಿಕೆ. ಅಲ್ಲಮನ ಬಹುತೇಕ ವಚನಗಳು ಶುದ್ಧ ವೇದಾಂತದವು. ಸಾಂದರ್ಭಿಕವಾಗಿ ವೇದವಿರೋಧಿ ವಚನಗಳಿದ್ದರೂ ಒಟ್ಟಾರೆ ಸಾರಾಸಗಟಾಗಿ ವೇದೋಪನಿಷತ್ತುಗಳನ್ನು ತಿರಸ್ಕರಿಸಬೇಕೆಂಬ ನಿಲುವು ತಾಳಬೇಕಿಲ್ಲ. ಇತ್ತೀಚೆಗೆ ಲಿಂಗಾಯತ ಪ್ರತ್ಯೇಕ ಧರ್ಮದ ವಾದ ಎದ್ದಿರುವ ಪರಿಣಾಮ ವೇದವಿರೋಧಿ ಭಾವ ತೋರಿರುವುದು ಸೈದ್ಧಾಂತಿಕ ಸತ್ಯವಲ್ಲ.

# 4.50 ಲಕ್ಷ ಕೋಟಿ ತೆರಿಗೆ ಕಟ್ಟಿದ್ರೆ ವಾಪಸ್ ಬರೋದು 59 ಸಾವಿರ ಕೋಟಿ

## ಬಿಜೆಪಿಯಾಗಲಿ, ಜೆಡಿಎಸ್ ಆಗಲಿ ನೀಡಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಸ್ಪಷ್ಟನೆ

• ಉದಯವಾಹಿನಿ ಬೆಂಗಳೂರು

ನಾವು ರಾಜ್ಯದಿಂದ ಕೇಂದ್ರಕ್ಕೆ ರೂ.4.50 ಲಕ್ಷ ಕೋಟಿ ತೆರಿಗೆಯನ್ನು ಕಟ್ಟುತ್ತೇವೆ. ನಮಗೆ ವಾಪಸ್ಸು ಬರುವುದು ರೂ.59 ಸಾವಿರ ಕೋಟಿ ಮಾತ್ರ. ಉಳಿದ ದುಡ್ಡು ಕೇಂದ್ರದಲ್ಲಿಯೇ ಇರುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದ ರಾಮಯ್ಯ, ನಾವು ರಾಜ್ಯದಿಂದ ಕೇಂದ್ರಕ್ಕೆ ರೂ.4.50 ಲಕ್ಷ ಕೋಟಿ ತೆರಿಗೆಯನ್ನು ಕಟ್ಟುತ್ತೇವೆ.

ನಮಗೆ ವಾಪಸ್ಸು ಬರುವುದು ರೂ.59 ಸಾವಿರ ಕೋಟಿ ಮಾತ್ರ. ಉಳಿದ ದುಡ್ಡು ಕೇಂದ್ರದಲ್ಲಿಯೇ ಇರುತ್ತದೆ. ಅದನ್ನು ರಾಜ್ಯಕ್ಕೆ ಕೊಡಿಸಲಿ. ಬರೀ ಮಾತನಾಡಿದರೆ ಪ್ರಯೋಜನವೇನು ಹೆಚ್.ಡಿ.ದೇವೇಗೌಡರಾಗಲಿ, ಕುಮಾರಸ್ವಾಮಿಯವರಾಗಲಿ ಕರ್ನಾಟಕಕ್ಕೆ ಅನ್ಯಾಯವಾದಾಗ ಮಾತನಾಡಿದ್ದರೆಯೇ ಎಂದು ಪ್ರಶ್ನಿಸಿದ್ದಾರೆ. ಅನರ್ಹರ ಬಿಪಿಎಲ್ ಕಾರ್ಡ್ ಗಳನ್ನು ಮಾತ್ರ ರದ್ದು ಮಾಡಲಾಗುವುದು. ಅರ್ಹ ಬಡವರಿಗೆ ಕಾರ್ಡ್ ತಪ್ಪಿಸುವುದಿಲ್ಲ. ಅನ್ನಭಾಗ್ಯ ಯೋಜನೆಯನ್ನು ಜಾರಿ ಮಾಡಿದ್ದು ನಾವೇ ಹೊರತು, ಬಿಜೆಪಿಯಾಗಲಿ, ಜೆಡಿಎಸ್ ಆಗಲಿ ನೀಡಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಮತ್ತೊಮ್ಮೆ ಸ್ಪಷ್ಟನೆ ನೀಡಿದ್ದಾರೆ. ಕಾರ್ಯಕ್ರಮ ಜಾರಿ ಮಾಡಿದ್ದು ಈ ಸಿದ್ದರಾಮಯ್ಯ. 2017ರಲ್ಲಿ 1 ರೂಪಾಯಿಗೆ ನೀಡುತ್ತಿದ್ದ ಅಕ್ಕಿಯನ್ನು ಉಚಿತವಾಗಿ ನೀಡಲಾಯಿತು. ಇದನ್ನು ಮಾಡಿಲ್ಲ, ಸುಮ್ಮನೆ ಮಾತನಾಡುತ್ತಾರೆ. ಬಿಜೆಪಿ ಅಧಿಕಾರದಲ್ಲಿರುವ ಯಾವ ರಾಜ್ಯದಲ್ಲಿ ಇಂಥಾ ಯೋಜನೆಯನ್ನು ಜಾರಿ ಮಾಡಿದ್ದಾರೆ. ಗುಜರಾತ್, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶ, ಹರಿಯಾಣ ಎಲ್ಲಿ ಮಾಡಿದ್ದಾರೆ ಕೇಂದ್ರ ಸಚಿವ ಅವರು ಸರ್ಕಾರ ಕೇವಲ ಗ್ಯಾರಂಟಿ ಎನ್ನುತ್ತಿದೆ, ತೆರಿಗೆ ಹಣ ಎಲ್ಲಿ ಹೋಗುತ್ತಿದೆ ಎಂದು ಪ್ರಶ್ನಿಸಿದ್ದಾರೆ. ಕುಮಾರ ಸ್ವಾಮಿ ಅವರು ಇರುವಾಗ ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದ್ದರೆ? ಅವರಿಗೆ ಮಾತನಾಡಲು ಯಾವ ನೈತಿಕ ಹಕ್ಕಿದೆ ನಾವು ರಾಜ್ಯದಿಂದ ಕೇಂದ್ರಕ್ಕೆ ರೂ.4.50 ಲಕ್ಷ ಕೋಟಿ

**ಅನ್ನಭಾಗ್ಯ ಯೋಜನ ಜಾರಿ**



> **ಮಹಾರಾಷ್ಟ್ರ ಜನರನ್ನು ದಾರಿತಪ್ಪಿಸಿ ಮತಗಳಿಸಲು ಮಹಾರಾಷ್ಟ್ರ ಸರ್ಕಾರ ಸುಳ್ಳು ಜಾಹೀರಾತು ನೀಡಿದೆ. ಮಹಾರಾಷ್ಟ್ರ ಸರ್ಕಾರದ ವಿರುದ್ಧ ಕಾನೂನು ಹೋರಾಟ ನಡೆಸಲು ಪರಿಶೀಲನೆ ಮಾಡಲಾಗುತ್ತಿದೆ ಎಂದರು.**

ತೆರಿಗೆಯನ್ನು ಕಟ್ಟುತ್ತೇವೆ. ನಮಗೆ ವಾಪಸ್ಸು ಬರುವುದು ರೂ.59 ಸಾವಿರ ಕೋಟಿ ಮಾತ್ರ. ಉಳಿದ ದುಡ್ಡು ಕೇಂದ್ರ ದಲ್ಲಿಯೇ ಇರುತ್ತದೆ. ಅದನ್ನು ರಾಜ್ಯಕ್ಕೆ ಕೊಡಿಸಲಿ. ಬರೀ ಮಾತನಾಡಿದರೆ ಪ್ರಯೋಜನವೇನು ಹೆಚ್.ಡಿ.ದೇವೇಗೌಡರಾಗಲಿ, ಕುಮಾರ ಸ್ವಾಮಿಯವರಾಗಲಿ ಕರ್ನಾಟಕಕ್ಕೆ ಅನ್ಯಾಯವಾದಾಗ ಮಾತ ನಾಡಿದ್ದರೆಯೇ ನಬಾರ್ಡ್ ವತಿಯಿಂದ ಕಳೆದ ವರ್ಷ ರೂ.5,600 ಕೋಟಿ ಸಾಲ ರಾಜ್ಯಕ್ಕೆ ನೀಡಲಾಗಿತ್ತು. ಈ ವರ್ಷ ರೂ.2,340 ಕೋಟಿ ನೀಡಿದ್ದಾರೆ ಇದು ಅನ್ಯಾಯವಲ್ಲವೇ ಸಾಲದ ಪ್ರಮಾಣವನ್ನು 58% ರಷ್ಟು ಕಡಿಮೆ

> **2023-24 ರ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ರೂ.5,300 ಕೋಟಿ ಅನುದಾನ ನೀಡುವುದಾಗಿ ಹೇಳಿದ್ದರು. ಕುಮಾರಸ್ವಾಮಿ ಈ ಬಗ್ಗೆ ಏನು ಕೇಳಿದ್ದಾರೆ 15ನೇ ಹಣಕಾಸು ಆಯೋಗದಡಿ ರೂ.11,595 ಕೋಟಿ ಘೋಷಣೆ ಮಾಡಿದ್ದರು. ಎಲ್ಲಿ ಕೊಟ್ಟರು ಇದನ್ನು ನೀವು ಕೇಳುವುದಿಲ್ಲ. ರೂ.56,000 ಕೋಟಿ ಗ್ಯಾರಂಟಿ ಯೋಜನೆಗಳನ್ನು ಕೊಡುತ್ತಿದ್ದೇವೆ. BJP ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಏಕೆ ಕೊಡುತ್ತಿಲ್ಲ**

ಮಾಡಿದ್ದಾರೆ. ಕುಮಾರಸ್ವಾಮಿ, ಪ್ರಹ್ಲಾದ ಜೋಷಿಯವರುಗಳು ಕರ್ನಾಟಕದ ಮಂತ್ರಿಗಳಾಗಿ ಏನು ಮಾಡುತ್ತಿದ್ದಾರೆ ರೈತರಿಗೆ ಅನ್ಯಾಯ ಮಾಡಬೇಡಿ, ಇದು ದ್ರೋಹದ ಕೆಲಸ ಎಂದು ಪ್ರಧಾನಮಂತ್ರಿ ಅವರಿಗೆ, ಹಣಕಾಸು ಸಚಿವೆ ಅವರಿಗೆ ಪತ್ರ ಬರೆದಿದ್ದೇನೆ. ನಾನು ಅಧಿಕಾರಕ್ಕೆ ಬಂದ ನಂತರ 5 ಲಕ್ಷದವರೆಗೆ ಬಡ್ಡಿರಹಿತ ಸಾಲ. 15 ಲಕ್ಷದವರೆಗೆ ಶೇಕಡಾ 3% ದರದಲ್ಲಿ ಸಾಲ ನೀಡಲಾಗಿದೆ. ನಬಾರ್ಡ್ ಹಣಕಾಸಿನ ಮಂತ್ರಿಗಳ ಕೆಳಗೆ ಬರುತ್ತದೆ. ನಿರ್ಮಲಾ ಸೀತಾರಾಮನ್ ಏನು ಮಾಡುತ್ತಿದ್ದಾರೆ

# ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂ. 'ಖರೀದಿ' ಆರಂಭ

• ಉದಯವಾಹಿನಿ ಬೆಂಗಳೂರು

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ರಾಗಿ ಖರೀದಿಸಲು ಡಿಸೆಂಬರ್ 01 2024 ರಿಂದ ನೋಂದಣಿ ಪ್ರಕ್ರಿಯೆ ಶುರುವಾಗಲಿದ್ದು, ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಡಾ.ಜಗದೀಶ್ ಕೆ. ನಾಯಕ್ ಅವರು ಆಹಾರ ಇಲಾಖೆ ಹಾಗೂ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ 2024-25ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಕುರಿತು ಚರ್ಚಿಸಲು ಕರೆಯಲಾಗಿದ್ದ ಮೊದಲನೆಯ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪ್ರತಿ ಕ್ವಿಂಟಾಲ್ ರಾಗಿಗೆ 4290 ರೂಗಳ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ನಿಗದಿ ಪಡಿಸಿದ್ದು ರಾಜ್ಯ ಸರ್ಕಾರ ಆದೇಶಿಸಿದೆ. ಕನಿಷ್ಠ ಬೆಂಬಲ ಯೋಜನೆಯಡಿ ರಾಗಿ ಖರೀದಿಗೆ ಸಂಬಂಧಿಸಿದಂತೆ ಪ್ರತಿ ತಾಲ್ಲೂಕು ಹಂತದಲ್ಲಿ ಅಗತ್ಯಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆಯಬೇಕು. ರಾಗಿ ಖರೀದಿಗೆ ಸಂಬಂಧಿಸಿದಂತೆ



ಉದಯವಾಹಿನಿ ಚಿತ್ರ

ನೋಂದಣಿ ಕಾರ್ಯಕ್ಕೆ ನಿಗದಿತ ಸ್ಥಳಗಳನ್ನು ಗುರ್ತಿಸಿ ರೈತರಿಗೆ ಮುಂಚಿತವಾಗಿ ಮಾಹಿತಿ ನೀಡಬೇಕು. ನೋಂದಣಿಗೆ ಯಾವುದೇ ಸಮಸ್ಯೆ ಆಗದಂತೆ ಕಂಪ್ಯೂಟರ್ ಗಳು, ಇಂಟರ್ನೆಟ್ ವ್ಯವಸ್ಥೆ ಸೇರಿದಂತೆ ಅಗತ್ಯ ಸಿಬ್ಬಂದಿ ನಿಯೋಜಿಸಿ. ರೈತರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ, ಸಮಸ್ಯೆ ಆಗದಂತೆ ನೋಡಿಕೊಳ್ಳಿ ಎಂದು ಹೇಳಿದರು.

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ. ಆರ್.ಪುರಂ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ , ಯಲಹಂಕ ಹಾಗೂ ಆನೇಕಲ್ ತಾಲ್ಲೂಕಿನಲ್ಲಿ ರಾಗಿ ಖರೀದಿ ಕೇಂದ್ರವನ್ನು ತೆರೆಯಲು ಅನುಮತಿಯನ್ನು ನೀಡಲಾಗಿದೆ ಎಂದರು. ರಾಗಿ ಖರೀದಿ ಸಂಬಂಧ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಸಂಸ್ಥೆಯನ್ನು ಖರೀದಿ ಏಜೆನ್ಸಿಯಾಗಿ ಜಿಲ್ಲೆಗೆ ನೇಮಕ ಮಾಡಲಾಗಿದೆ. 2024-25 ನೇ ಸಾಲಿನ ಮುಂಗಾರು ಋತುವಿನಲ್ಲಿ ರೈತರು ಬೆಳೆದಿರುವ ಧಾನ್ಯಗಳನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ಕೃಷಿ ಇಲಾಖೆಯಿಂದ ಜಾರಿಗೊಳಿಸಿರುವ ಫ್ರೂಟ್ಸ್ ದತ್ತಾಂಶದಲ್ಲಿ ರೈತರು ನೋಂದಾಯಿಸಿಕೊಂಡು, ಐಡಿ ಪಡೆಯುವುದು ಕಡ್ಡಾಯ ಎಂದು ಹೇಳಿದರು.

> **ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಶಾಂತಗೌಡ ಜಿ.ಗುಣಕಿ ರವರು ಮಾತನಾಡಿ, ರಾಗಿ ಖರೀದಿ ಪ್ರಕ್ರಿಯೆಯನ್ನು ಜನವರಿ 01 2025 ರಿಂದ ಮಾರ್ಚ್ 31 2025 ರವರೆಗೆ ಕೈಗೊಳ್ಳುವಂತೆ ಸರ್ಕಾರ ಆದೇಶಿಸಿದೆ. ಕೃಷಿ ಇಲಾಖೆಯಿಂದ ಖರೀದಿ ಕೇಂದ್ರಗಳಿಗೆ ಗ್ರೇಡರ್ ಗಳನ್ನು ನೇಮಿಸಬೇಕು ಎಂದರು.**

# ದರ್ಶನ್‌ಗೆ ಬಿಗ್ ಶಾಕ್ : ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಪೊಲೀಸರು ಸಿದ್ಧತೆ!

• ಉದಯವಾಹಿನಿ ಬೆಂಗಳೂರು

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಇತ್ತೀಚಿಗೆ ನಟ ದರ್ಶನ್ ಅವರು ಬೆನ್ನು ನೋವಿನ ಕಾರಣ ನೀಡಿ ಹೈಕೋರ್ಟ್ ನಿಂದ ಮಧ್ಯಂತರ ಜಾಮೀನು ಪಡೆದುಕೊಂಡು ಬಳ್ಳಾರಿ ಜೈಲಿನಿಂದ ಬಿಡುಗಡೆಯಾಗಿದ್ದರು.

ಬಳಿಕ ಬೆಂಗಳೂರಿನ ಕೆಂಗೇರಿ ಬಳಿ ಇರುವ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ, ಪೊಲೀಸರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಹೌದು ಬಳ್ಳಾರಿ ಜೈಲಿನಿಂದ ಬಿಡುಗಡೆಯಾದರೂ ಕೂಡ ನಟ ದರ್ಶನ್ ಗೆ ರಿಲೀಫ್ ಇಲ್ಲದಂತಾಗಿದೆ. ಇದಕ್ಕೆ ಕಾರಣ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಇದೀಗ ಪೊಲೀಸರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ನಟ ದರ್ಶನ್ ಅವರು ಬೆನ್ನು ನೋವಿನ ಸಮಸ್ಯೆ ತಿಳಿಸಿ ಹೈಕೋರ್ಟ್ ನಿಂದ ಜಾಮೀನು ಪಡೆದುಕೊಂಡಿದ್ದರು. ಈ ಒಂದು ಆದೇಶವನ್ನು ಪ್ರಶ್ನಿಸಿ ಇದೀಗ ಬೆಂಗಳೂರಿನ ಪೊಲೀಸರು



ಉದಯವಾಹಿನಿ ಚಿತ್ರ

ಸುಪ್ರೀಂಕೋರ್ಟಿಗೆ ಮೇಲ್ಮನವಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಆರೋಪಿ ದರ್ಶನಿಗೆ ಮಧ್ಯಂತರ ಜಾಮೀನು ಮಂಜೂರು ಆದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟಿಗೆ ಮೇಲ್ಮನವಿ ಸಲ್ಲಿಸಲು ಸರ್ಕಾರ ಕೂಡ ಅನುಮತಿ ನೀಡಿದ್ದು, ಹಾಗಾಗಿ ಇದೀಗ ಪೊಲೀಸರು ಸುಪ್ರೀಂ ಕೋರ್ಟ್ ಮೊರೆ ಹೋಗಲಿದ್ದಾರೆ ಪೊಲೀಸರು ಸುಪ್ರೀಂಕೋರ್ಟಿಗೆ ಮೇಲ್ಮನವಿ ಅರ್ಜಿ ಸಲ್ಲಿಸಲಿದ್ದಾರೆ ಎಂದು ತಿಳಿಬಂದಿದೆ.

## ಬಿಪಿಎಲ್ ಕಾರ್ಡ್ ಬದಲಾವಣೆಯಲ್ಲಿ ಬೀದಿ ಬದಿಯ ವ್ಯಾಪಾರಿಗಳಿಗೂ ಶಾಕ್ ನೀಡಿದ ರಾಜ್ಯ ಸರ್ಕಾರ

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರವು ರಾಜ್ಯಾದ್ಯಂತ ಬಿಪಿಎಲ್ ಕಾರ್ಡ್ ಪರಿಷ್ಕರಣೆಗೆ ಮುಂದಾಗಿದ್ದು, ಬೆಂಗಳೂರು ವ್ಯಾಪ್ತಿಯಲ್ಲಿ ಬಿಪಿಎಲ್ ಕಾರ್ಡ್ ಪರಿಷ್ಕರಣೆ ಆಗಲಿದೆ ಎಂದು ತಿಳಿದುಬಂದಿದೆ. ಐಟಿ, ಜಿಎಸ್ ಟಿ ಇರುವ 10 ಸಾವಿರ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಆದರೆ ಇದೀಗ ಬೀದಿಬದಿ ಅಂಗಡಿ ವ್ಯಾಪಾರಗಳಿಗೂ ರಾಜ್ಯ ಸರ್ಕಾರ ಬಿಗ್ ಶಾಕ್ ನೀಡಿದೆ. ಹೌದು ಬ್ಯಾಂಕ್ ವಹಿವಾಟು ಆಧಾರದಲ್ಲಿ ಬೀದಿ ಬದಿಯ ವ್ಯಾಪಾರಿಗಳ ಬಿಪಿಎಲ್ ಕಾರ್ಡ್ ಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಬದಲಾವಣೆ ಮಾಡಲಾಗಿದೆ. ಸದ್ಯ ಬಿಪಿಎಲ್ ಕಾರ್ಡ್ ಇದ್ದಿದ್ದನ್ನು ಎಪಿಎಲ್ ಆಗಿ ಬದಲಾವಣೆ ಮಾಡಲಾಗಿದೆ. ಎಪಿಎಲ್ ಆಗಿ ಬದಲಾವಣೆಯಾಗಿದ್ದಕ್ಕೆ ಇದೀಗ ವ್ಯಾಪಾರಿಗಳು ಅಸಮಾಧಾನ ಹೊರಹಾಕಿದ್ದಾರೆ. ನಮ್ಮದು ದಿನಾಲೂ ನಡೆಯುವ ವ್ಯವಹಾರ ಇರುವ ಕಾರಣ ಹೆಚ್ಚಿಗೆ ಹಣ ಟ್ರಾನ್ಸ್ಆಕ್ಷನ್ ಆಗಿದೆ. ಆದರೆ ನಮಗೆ ಲಾಭದಲ್ಲಿ ಅಗಲಿ ಅಥವಾ ಆದಾಯದಲ್ಲಿ ಅಗಲಿ ಯಾವುದೇ ರೀತಿಯ ಹೆಚ್ಚಳವಿಲ್ಲ. ವಹಿವಾಟು ಆಧಾರದ ಮೇಲೆ ಬದಲಾವಣೆ ಮಾಡಬಾರದು ಎಂದು ವ್ಯಾಪಾರಗಳು ಅಗ್ರಹಿಸಿದ್ದಾರೆ.

## ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ನ.30 ಕೊನೆಯ ದಿನ

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರದಿಂದ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ನವೆಂಬರ್ 30 ಕೊನೆಯ ದಿನವಾಗಿದೆ. ರಾಜ್ಯ ಸರ್ಕಾರ ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ಪ್ಲೇಟ್‌ಯನ್ನು ವಾಹನಗಳಿಗೆ ಅಳವಡಿಸಿಕೊಳ್ಳಲು ದಿನಾಂಕ 17-08-2024ರವರೆಗೆ ಅವಕಾಶ ನೀಡಲಾಗಿತ್ತು. ಇಂತಹ ಅವಧಿಯನ್ನು ದಿನಾಂಕ 30-11-2024ರವರೆಗೆ ವಿಸ್ತರಿಸಿ ಆದೇಶಿಸಿರುವುದಾಗಿ ತಿಳಿಸಿದೆ. ಆದೇಶವು ದಿನಾಂಕ 17-08-2023ರಂದು ಹೊರಡಿಸಿದಂತ ಅಧಿಸೂಚನೆಯ ನಿಯಮಗಳಿಗೆ ಒಳಪಟ್ಟಿರುವುದಾಗಿ ಸಾರಿಗೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ. ಸಾರ್ವಜನಿಕರು ಆನ್ ಲೈನ್ ಮೂಲಕ ಹೆಚ್‌ಎಸ್‌ಆರ್‌ಪಿ ಪಡೆಯಲು ತೊಂದರೆ ಗಳಾದಲ್ಲಿ ಸಹಾಯವಾಣಿ ಸಂಖ್ಯೆ 9449863429 / 9449863426ಯನ್ನು ಕಚೇರಿ ಕೆಲಸದ ಸಮಯ ಬೆಳಿಗ್ಗೆ 10 ರಿಂದ ಸಂಜೆ 5.30ರೊಳಗೆ ಸಂಪರ್ಕಿಸಬಹುದು. ಸಾರ್ವಜನಿಕರು https://transport.karnataka.gov.in ಅಥವಾ www.siam.in ಗೆ ಭೇಟಿ ನೀಡಬಹುದು ಎಂದು ಸಾರಿಗೆ, ರಸ್ತೆ ಸುರಕ್ಷತೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಡಿತರ ಚೀಟಿದಾರರೇ ಎಚ್ಚರ : ಈ ತಪ್ಪು ಮಾಡಿದ್ರೆ ರದ್ದಾಗಲಿದೆ ನಿಮ್ಮ ಬಿಪಿಎಲ್ ಕಾರ್ಡ್!

• ಉದಯವಾಹಿನಿ ಬೆಂಗಳೂರು

ಅನರ್ಹರು ಹೊಂದಿರುವ ಅಂತ್ಯೋದಯ (ಎಎವೈ), ಆದ್ಯತಾ (ಬಿಪಿಎಲ್) ಪಡಿತರ ಚೀಟಿ ಹಿಂದಿರುಗಿಸುವ ಬಗ್ಗೆ ರಾಜ್ಯ ಸರ್ಕಾರವು ಮಹತ್ವದ ಆದೇಶ ಹೊರಡಿಸಿದೆ.

ಈ ಮೂಲಕ ಎಲ್ಲಾ ಪಡಿತರ ಚೀಟಿದಾರರಿಗೆ ತಿಳಿಸುವುದೇನೆಂದರೆ, ಈ ಕೆಳಕಂಡ ಕುಟುಂಬಗಳು ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಆದ್ಯತಾ (ಬಿಪಿಎಲ್) ಪಡಿತರ ಚೀಟಿಯನ್ನು ಹೊಂದಲು ಅನರ್ಹರಾಗಿರುತ್ತಾರೆ.

1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ;




ಉದಯವಾಹಿನಿ ಚಿತ್ರ

2. ಆದಾಯ ತೆರಿಗೆ/ ಸೇವಾ ತೆರಿಗೆ/ ವ್ಯಾಟ್/ ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.

3. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ, ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.

4. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿ ಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು,

5. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

ಆದ್ದರಿಂದ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಿಗೆ ವಿರುದ್ಧವಾಗಿ ಅಂತ್ಯೋದಯ ಅಥವಾ ಆದ್ಯತಾ (ಬಿಪಿಎಲ್) ಪಡಿತರ ಚೀಟಿ ಹೊಂದಿರುವವರು ತಕ್ಷಣವೇ ಚಿಕ್ಕಮಗಳೂರು ತಾಲ್ಲೂಕು ಕಛೇರಿಯ ಆಹಾರ ಶಾಖೆಗೆ ಪಡಿತರ ಚೀಟಿಯನ್ನು ಒಪ್ಪಿಸಲು ಕೋರಿದೆ.

ತಪ್ಪಿದಲ್ಲಿ ಅಕ್ರಮ ಪಡಿತರ ಚೀಟಿ ಹೊಂದಿರುವವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955 ಮತ್ತು ಕರ್ನಾಟಕ ಅನಧಿಕೃತ ಪಡಿತರ ಚೀಟಿ ಹೊಂದುವುದರ ತಡೆ ಆದೇಶ 1977ರ ಹಾಗೂ ಐ.ಪಿ.ಸಿ. ಕಲಂಗಳಡಿಯಲ್ಲಿ ಕ್ರಮ ಜರುಗಿಸಲಾಗುವುದು ಹಾಗೂ ಹಂಚಿಕೆ ಪಡೆದ ಆಹಾರಧಾನ್ಯಗಳ ಬಾಬು ಮುಕ್ತ ಮಾರುಕಟ್ಟೆ ದರದಂತೆ ಮೊಬಲಗನ್ನು ದಂಡದ ರೂಪದಲ್ಲಿ ವಸೂಲು ಮಾಡಲಾಗುವುದೆಂದು ತಿಳಿಸಲಾಗಿದೆ.

## ಬೆಂಗಳೂರಿನಲ್ಲಿ ಕಟ್ಟಡದಿಂದ ಜಿಗಿದು 18 ವರ್ಷದ ವಿದ್ಯಾರ್ಥಿ ಆತ್ಮಹತ್ಯೆ!

• ಉದಯವಾಹಿನಿ ಬೆಂಗಳೂರು

12 ನೇ ಮಹಡಿಯಿಂದ ಜಿಗಿದು 18 ವರ್ಷದ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. ಬೆಂಗಳೂರಿನ ಹೆಣ್ಣೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ನಿನ್ನೆ ರಾತ್ರಿ ಕಟ್ಟಡದಿಂದ ಬಿದ್ದು ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಘಟನೆ ನಡೆದ ಸ್ಥಳಕ್ಕೆ ಹೆಣ್ಣೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತ ವಿದ್ಯಾರ್ಥಿಯ ಗುರುತು ಪತ್ತೆಯಾಗಿಲ್ಲ. ಕಾಲೇಜು ಬದಲಾವಣೆ ವಿಚಾರಕ್ಕೆ ಪೋಷಕರ ಜೊತೆ ಅಸಮಾಧಾನಗೊಂಡು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಶಂಕಿಸಲಾಗಿದೆ. ಘಟನೆ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## 100 ಕೋಟಿ ಆಫರ್ , ಮಂಡ್ಯ ಶಾಸಕ ರವಿ ಗಾಣಿಗ ಸ್ಫೋಟಕ ಮಾಹಿತಿ..!

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರ ಕೆಡವಲು ಬಿಜೆಪಿಯಿಂದ ನೂರುಕೋಟಿ ಆಫರ್ ನೀಡಿದೆ ಅಂಥ ಮಂಡ್ಯ ಶಾಸಕ ರವಿ ಗಾಣಿಗ ಅವರು ಆರೋಪ ಮಾಡಿದ್ದಾರೆ.ಅವರು ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಇದೇ ವೇಳೆ ಅವರು ಮಾತನಾಡಿ, ನನ್ನ ಸಹದ್ಯೋಗಿಗಳನ್ನು ಭೇಟಿ ಮಾಡಿದ್ದಾರೆ ಅಂತ ಹೇಳಿದರು. ಶಾಸಕ ಬಾಬು ಮತ್ತು ತಮ್ಮಯ್ಯ ಅವರನ್ನು ಭೇಟಿ ಮಾಡಿದ್ದಾರೆ ಅವರಿಗೆ ಆಫರ್ ನೀಡಿದ್ದಾರೆ ಅಂತ ಆರೋಪಿಸಿದ್ದಾರೆ. ನೀವುಗಳೇ ಬನ್ನಿ ಏನುನ್ ಬೇಕೋ ಎಲ್ಲಾ ಆಫರ್ ಕೊಡ್ತಾ ಇದ್ದಾರೆ ಅಂಥ ಅವರು ಇದೇ ವೇಳೇ ಹೇಳಿದರು. ಇನ್ನೂ ರವಿಗಾಣಿಗ ಅವರ ಹೇಳಿಕೆಯನ್ನು ನಿರಾಕರಿಸಿರುವ ಕಿತ್ತೂರು ಶಾಸಕ ಬಾಬಾ ಸಾಹೇಬ್ ಬಿಜೆಪಿಯಲ್ಲಿರುವ ಸ್ನೇಹಿತರು ಪಾರ್ಟಿಗೆ ಬರುವಂತೆ ಆಹ್ವಾನಿಸಿರುವುದು ನಿಜ, ಆದರೆ ಯಾವುದೇ ಹಣವನ್ನು ನೀಡುವ ಬಗ್ಗೆ ಹೇಳಿರಲಿಲ್ಲ ಅಂತ ಹೇಳಿದರು.

## ಚಿರತೆ ಬಾಯಿಯಿಂದ ರುಂಡವಿಲ್ಲದ ಮೃತದೇಹ ಬಿಡಿಸಿಕೊಂಡ ಜನರು!

• ಉದಯವಾಹಿನಿ ಬೆಂಗಳೂರು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಚಿರತೆ ದಾಳಿಗೆ ಮಹಿಳೆಯೊಬ್ಬರು ಬಲಿಯಾಗಿರುವ ಘಟನೆ ನಡೆದಿದೆ.ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಕಂಬಾಲು ಗೊಲ್ಲರಹಟ್ಟಿ ಬಳಿ ಚಿರತೆ ದಾಳಿಗೆ ಮಹಿಳೆ ಸಾವನ್ನಪ್ಪಿರುವ ಘಟನೆ ಬೆಳಕಿಗೆ ಬಂದಿದೆ.ನಿನ್ನೆ ಸಂಜೆ ಜಮೀನಿಗೆ ಹುಲ್ಲು ತರಲು ಹೋಗಿದ್ದ ಮಹಿಳೆ ಕರಿಯಮ್ಮ ಮೇಲೆ ಚಿರತೆ ದಾಳಿ ನಡೆಸಿ ಕೊಂದು ಬಳಿಕ ಮಹಿಳೆಯ ರುಂಡ ತಿಂದಿದೆ. ಸಂಜೆ ಹೋಗಿದ್ದ ಮಹಿಳೆ ಮನೆಗೆ ಬರದೆ ಇದ್ದಾಗ ಗ್ರಾಮಸ್ಥರು ಹುಡುಕಾಟ ನಡೆಸಿದ್ದಾರೆ. ವೇಳೆ ರುಂಡವಿಲ್ಲದ ಮಹಿಳೆಯ ಮೃತದೇಹ ಪತ್ತೆಯಾಗಿದೆ. ಮೃತದೇಹವನ್ನು ಕಾಯುತ್ತಿದ್ದ ವೇಳೆ ಚಿರತೆ ಮತ್ತೆ ಮೃತದೇಹವನ್ನು ಹೊತ್ತಯಲು ಬಂದಾಗ ಗ್ರಾಮಸ್ಥರು ಕಲ್ಲು,ದೊಣ್ಣೆ, ಮಚ್ಚಿನಿಂದ ಚಿರತೆ ಮೇಲೆ ದಾಳಿ ಮಾಡಿದ್ದು, ಚಿರತೆ ಓಡಿಹೋಗಿದೆ.

# ಸಚಿವ ಜಮೀರ್ ಅಹ್ಮದ್‌ಗೆ ಬಿಗ್ ಶಾಕ್


• ಉದಯವಾಹಿನಿ ಬೆಂಗಳೂರು

ವಸತಿ ಸಚಿವ ಜಮೀರ್ ಅಹ್ಮದ್‌ಗೆ ಬಿಗ್ ಶಾಕ್ ಎನ್ನುವಂತೆ ಆದಾಯಕ್ಕಿಂತ ಹೆಚ್ಚು ಸ್ವತ್ತು ಹೊಂದಿದ ಆರೋಪದಲ್ಲಿ ಲೋಕಾಯುಕ್ತದಿಂದ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಲಾಗಿದೆ.

ಈ ಸಂಬಂಧ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೆ ಕರ್ನಾಟಕ ಲೋಕಾಯುಕ್ತ ಸಮನ್ಸ್ ಜಾರಿಗೊಳಿಸಿದೆ.

ಡಿಸೆಂಬರ್.3, 2024ರಂದು ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನಲ್ಲಿ ತಿಳಿಸಿರುವುದಾಗಿ ತಿಳಿದು ಬಂದಿದೆ.

ಅಂದಹಾಗೇ ಐಎಂಎ ಚಿಟ್‌ಫಂಡ್



ಉದಯವಾಹಿನಿ ಚಿತ್ರ

**ಲೋಕಾಯುಕ್ತ ಸಮನ್ಸ್ ಜಾರಿ**

ವಂಚನೆ ಪ್ರಕರಣದ ತನಿಖೆ ವೇಳೆ, ಐಎಂಎ ಮತ್ತು ಜಮೀರ್ ಅಹಮದ್ ಅವರ ನಡುವೆ ಹಣಕಾಸು ವ್ಯವಹಾರ ನಡೆದಿರುವುದನ್ನು ಜಾರಿ ನಿರ್ದೇಶನಾಲಯವು ಪತ್ತೆ ಮಾಡಿತ್ತು. ಈ ಬಳಿಕ 2021ರಲ್ಲಿ ಇಡಿ ಅಧಿಕಾರಿಗಳು ದಾಳಿಯನ್ನು ನಡೆಸಿದ್ದರು.

ಇನ್ನೂ ಚಿಟ್‌ಫಂಡ್ ವಂಚನೆಗೆ ಸಂಬಂಧಿಸಿದಂತೆ ದಾಳಿ ಸಂದರ್ಭದಲ್ಲಿ ಯಾವ ದಾಖಲೆಗಳೂ ಪತ್ತೆಯಾಗಿರಲಿಲ್ಲ. ಆದರೆ ಜಮೀರ್ ಅವರು ತಮ್ಮ ಆದಾಯಕ್ಕಿಂತ ಹೆಚ್ಚು ಸ್ವತ್ತು ಹೊಂದಿರುವುದು ಪತ್ತೆಯಾಗಿತ್ತು. ಈ ಸಂಬಂಧ ರಾಜ್ಯದ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಇ.ಡಿ ವಿವರಣಾತ್ಮಕವಾದ ವರದಿಯನ್ನು ನೀಡಿತ್ತು. ಜತೆಗೆ ತನಿಖೆಯ ಅಗತ್ಯವಿದೆ ಎಂದು ಹೇಳಿತ್ತು. 2022ರ ಸೆಪ್ಟೆಂಬರ್‌ನಲ್ಲಿ ಎಸಿಬಿ ರದ್ದಾದ ಕಾರಣ, ಎಲ್ಲಾ ಪ್ರಕರಣಗಳು ಲೋಕಾಯುಕ್ತಕ್ಕೆ ವರ್ಗಾವಣೆಯಾಗಿದ್ದವು. ಆನಂತರ ಜಮೀರ್ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದಂತೆ ಗಣನೀಯ ಮಟ್ಟದ ತನಿಖೆ ನಡೆದಿರಲಿಲ್ಲ. ಆದರೆ, ಈಗ ಪ್ರಕರಣಕ್ಕೆ ಮರುಜೀವ ನೀಡಿ, ಸಚಿವ ಜಮೀರ್ ಅಹ್ಮದ್ ಗೆ ಬಿಗ್ ಶಾಕ್ ನೀಡಲಾಗಿದೆ.

# ದಾಳಿಂಬೆ ಬೆಲೆ ಕುಸಿತ: ಬೆಳೆಗಾರರು ಕಂಗಾಲು

• ಉದಯವಾಹಿನಿ ದೇವನಹಳ್ಳಿ

ಕಳೆದ ಎರಡು ತಿಂಗಳ ಹಿಂದೆ ರೈತರ ತೋಟದಲ್ಲೇ ಕೆ.ಜಿಗೆ ರೂ.150ರಿಂದ ರೂ.220ಕ್ಕೆ ಖರೀದಿಯಾಗುತ್ತಿದ್ದ ದಾಳಿಂಬೆ ಬೆಲೆಯು ಏಕಾಏಕಿ ರೂ.50ಕ್ಕೆ ಕುಸಿದಿದೆ. ಇದರಿಂದ ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.ನಾಲ್ಕು ತಿಂಗಳ ಹಿಂದೆ ದಾಳಿಂಬೆಗೆ ಬಂಪರ್ ಬೆಲೆ ಸಿಕ್ಕಿತ್ತು.ತೋಟದಲ್ಲೇ ಕೆ.ಜಿಗೆ ರೂ.250ಕ್ಕೆ ಮಾರಾಟ ಆಗುತ್ತಿತ್ತು. ಎರಡು ತಿಂಗಳಿಂದ ಇಳಿಕೆಯ ಹಾದಿ ಹಿಡಿದಿದ್ದ ಬೆಲೆ ಮತ್ತೆ ಚೇತರಿಸಿಕೊಳ್ಳುತ್ತಿಲ್ಲ. ಈಗ ಕನಿಷ್ಠ ಬೆಲೆಗೆ ಬಂದು ನಿಂತಿದೆ ಎನ್ನುತ್ತಾರೆ ಬೆಳೆಗಾರರು. 'ತರಕಾರಿ, ದ್ರಾಕ್ಷಿ ಮತ್ತು ಇತರೆ ಹಣ್ಣುಗಳಿಗೆ ಸೂಕ್ತ ಮಾರುಕಟ್ಟೆ ಇಲ್ಲ. ಬೇಗ ಹಾಳಾಗುವ ಕಾರಣ ದಾಳಿಂಬೆ ಬೆಳೆಯಲು ಆರಂಭಿಸಿದೆವು. ಈಗ ನೋಡಿದರೆ ದಾಳಿಂಬೆ ಖರೀದಿಗೆ ತೋಟಕ್ಕೆ ಬರುವ ವರ್ತಕರು ಕೆ.ಜಿಗೆ ರೂ.50 ಕೇಳುತ್ತಿದ್ದಾರೆ. ಈ ಬೆಲೆಗೆ ನೀಡಿದರೆ ಹಾಕಿದ ಬಂಡವಾಳದಲ್ಲಿ ಶೇ 50ರಷ್ಟು ನಮ್ಮ ಕೈ ಸೇರುವುದಿಲ್ಲ. ಬೆಲೆ ಸಿಗುತ್ತಿಲ್ಲ ಎಂದು ಹಾಗೇ ಬಿಟ್ಟರೆ ತೋಟದಲ್ಲೇ ಹಣ್ಣು ಕೊಳೆಯುತ್ತದೆ' ಎಂದು ಅಳಲು ತೋಡಿಕೊಳ್ಳುತ್ತಾರೆ. ವ್ಯಾಪಾರಿಗಳು ತೋಟಗಳಿಗೆ ಬಂದು ರೈತರನ್ನು ಕಾಡಿಬೇಡಿ ಕೇಳಿದಷ್ಟು ಬೆಲೆ ನೀಡಿ ಕಟಾವು ಮಾಡಿಕೊಂಡು ಹೋಗುತ್ತಿದ್ದರು. ಈಗ ನಮ್ಮನ್ನು ಕೇಳುವವರೇ ಇಲ್ಲದಂತಾಗಿದೆ. ಕಟಾವು ಮಾಡಿಕೊಂಡು ಹೋದ ದಾಳಿಂಬೆಯು ಮಾರಾಟವಾದ ಬಳಿಕ ಹಣ ಕೊಡುವುದಾಗಿ ಹೇಳುತ್ತಾರೆ. ಅವರ ಷರತ್ತಿಗೆ ಒಪ್ಪಿದರೆ ಮಾತ್ರ ಕಟಾವಿಗೆ ಬರುತ್ತಾರೆ ನಷ್ಟವಾದರೂ ಅನಿವಾರ್ಯವಾಗಿ ಅವರು ಕೇಳಿದ ಬೆಲೆಗೆ ಮಾರಾಟ ಮಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಬೆಳೆಗಾರ ಬಸವರಾಜ ಅಳಲು ಹೇಳಿದರು. ದೇವನಹಳ್ಳಿ ತಾಲ್ಲೂಕಿನಲ್ಲಿ 480 ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆ ಬೆಳೆಯಲಾಗಿದೆ. ವರ್ಷದಿಂದ ವರ್ಷಕ್ಕೆ ಬೆಳೆಯುವ ಪ್ರಮಾಣ ಏರಿಕೆಯಾಗುತ್ತಿದೆ.

ಉದಯವಾಹಿನಿ ಚಿತ್ರ



# ನೇಮಕಾತಿಯಡಿ 12692 ಪೌರಕಾರ್ಮಿಕರ ಅಂತಿಮ ಆಯ್ಕೆ ಪಟ್ಟಿ ಪ್ರಕಟ

## ಆಡಳಿತ ವಿಭಾಗದ ವಿಶೇಷ ಆಯುಕ್ತರಾದ ಅವಿನಾಶ್ ಮೆನನ್ ರಾಜೇಂದ್ರನ್ ರವರು ಹೇಳಿಕೆ

• ಉದಯವಾಹಿನಿ ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ವಲಯವಾರು ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ 12692 ಪೌರಕಾರ್ಮಿಕರನ್ನು ಅಂತಿಮವಾಗಿ ಆಯ್ಕೆ ಮಾಡಿ ಪಟ್ಟಿಯನ್ನು ಬಿಡುಗಡೆಗೊಳಿದಲಾಗಿದೆ ಎಂದು ಆಡಳಿತ ವಿಭಾಗದ ವಿಶೇಷ ಆಯುಕ್ತರಾದ ಅವಿನಾಶ್ ಮೆನನ್ ರಾಜೇಂದ್ರನ್ ರವರು ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ಹುದ್ದೆಗಳಿಗೆ ಆಯ್ಕೆಯಾಗಿರುವ 12692 ಪೌರಕಾರ್ಮಿಕರ ಕರಡು ಆಯ್ಕೆ ಪಟ್ಟಿಯನ್ನು ದಿನಾಂಕ: 09-10-2024 ರಂದು ಪಾಲಿಕೆ ವೆಬ್‌ಸೈಟ್https://bbmp.gov.in/home ನಲ್ಲಿ ಪ್ರಕಟಿಸುವ ಜೊತೆಗೆ, ಆಯಾ ವಲಯಜಂಟಿ ಆಯುಕ್ತರು ರವರ ಕಛೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲೂ ಸಹ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ, ವಲಯವಾರು ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಕ್ರಮವಹಿಸಿ ಅಂತಿಮವಾಗಿ 12692 ಸಂಖ್ಯೆಯ ಪೌರಕಾರ್ಮಿಕರನ್ನು ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.



ಉದಯವಾಹಿನಿ ಚಿತ್ರ

**ಪೌರಕಾರ್ಮಿಕರ ಹುದ್ದೆಗೆ ಆಯ್ಕೆ**

ಸದರಿ ಅಂತಿಮ ಆಯ್ಕೆ ಪಟ್ಟಿಯನ್ನು ಆಯಾ ವಲಯ ಜಂಟಿ ಆಯುಕ್ತರು ರವರ ಕಛೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ಪ್ರಕಟಿಸಲಾಗುವುದು. ಅಲ್ಲದೆ ಪಾಲಿಕೆಯ ವೆಬ್‌ಸೈಟ್ ನಲ್ಲೂ ಸಹ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.ಪೌರಕಾರ್ಮಿಕರ ಹುದ್ದೆಗೆ ಆಯ್ಕೆಯಾಗಿರುವವರು ಯಾವುದೇ ಆಸೆ/ ಆಮಿಷಗಳಿಗೆ ಒಳಗಾಗಬಾರದು ಹಾಗೂ ಮಧ್ಯವರ್ತಿಗಳ ಮಾತುಗಳನ್ನು ಕೇಳಿ ವಂಚನೆಗಳಿಗೆ ಒಳಗಾಗಬಾರದು.

ಸದರಿ ಅಂತಿಮ ಆಯ್ಕೆ ಪಟ್ಟಿಯ ವಿವರಣೆ ಅಥವಾ ಮಾಹಿತಿಗಾಗಿ ತಮ್ಮ ವ್ಯಾಪ್ತಿಗೆ ಒಳಪಡುವ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ನೇರವಾಗಿ ಭೇಟಿ ನೀಡಿ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.ಅಂತಿಮ ಆಯ್ಕೆಯಾಗಿರುವ ಪೌರಕಾರ್ಮಿಕರು ಮೀಸಲಾತಿಗೆ

ಆಯ್ಕೆಯಾಗಿರುವ ಪೌರಕಾರ್ಮಿಕರು ತಮ್ಮ ಆಯ್ಕೆಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ವಲಯ ಮಟ್ಟದಲ್ಲಿ ರಚಿಸಲಾಗಿರುವ ದಾಖಲಾತಿ ಪರಿಶೀಲನಾ ತಂಡಗಳ ಮುಂದೆ ದಿನಾಂಕ: 25.11.2024 ರಿಂದ 30.11.2024ರ ವರೆಗೆ ವಲಯ ಮಟ್ಟದಲ್ಲಿ ನೀಡಲಾಗುವ ವೇಳಾಪಟ್ಟಿಯ ಅನುಗುಣವಾಗಿ ಮೇಲ್ಕಂಡಂತೆ ದಾಖಲೆಗಳನ್ನು ಖುದ್ದು ಹಾಜರುಪಡಿಸಬೇಕು.

### ಅನುಗುಣವಾಗಿ ಒದಗಿಸಬೇಕಿರುವ ದಾಖಲೆಗಳು

- ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಜಾತಿ ಮೀಸಲಾತಿ ಪ್ರಮಾಣ ಪತ್ರ.
- ಕನ್ನಡ ಮಾಧ್ಯಮ ಪ್ರಮಾಣ ಪತ್ರ.
- ಗ್ರಾಮೀಣ ಪ್ರಮಾಣ ಪತ್ರ.
- ಅಂಗವಿಕಲ ಪ್ರಮಾಣ ಪತ್ರ.
- ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ.
- ಮಾಜಿ ಸೈನಿಕ ಪ್ರಮಾಣ ಪತ್ರ.
- ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರ.
- ತೃತೀಯ ಲಿಂಗ ಪ್ರಮಾಣ ಪತ್ರ.
- ಇತರೇ (ಅನ್ವಯಿಸುವ ದಾಖಲೆ ಮಾತ್ರ)

ಉದಯವಾಹಿನಿ
ಪ್ರಾದೇಶಿಕ
ಮಂಗಳವಾರ 19 ನವೆಂಬರ್ 2024


# ದನದ ಕೊಟ್ಟಿಗೆಗಳಾದ ಹೆದ್ದಾರಿಗಳು: ಸುಗಮ ಸಂಚಾರಕ್ಕೆ ಅಡ್ಡಿ

## • ದನಗಳು ರಸ್ತೆಗಳು, ಸಾರ್ವಜನಿಕರ ಸ್ಥಳಗಳಲ್ಲಿ ಅಲೆಯುತ್ತಿರುವ ಪರಿಣಾಮ ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ

**• ಉದಯವಾಹಿನಿ ಚಾಮರಾಜನಗರ**

ಜಿಲ್ಲೆಯಾದ್ಯಂತ ದನ-ಕರು, ಕುರಿ-ಮೇಕೆ, ಕುದುರೆ-ಕತ್ತೆಗಳು ಸೇರಿದಂತೆ ಬಿಡಾಡಿ ಜಾನುವಾರುಗಳ ಉಪಟಳ ಹೆಚ್ಚಾಗಿದ್ದು ವಾಹನ ಸವಾರರು, ಪಾದಚಾರಿಗಳು ನಿತ್ಯ ಕಿರಿಕಿರಿ ಅನುಭವಿಸುತ್ತಿದ್ದಾರೆ.

ಕೊಟ್ಟಿಗೆಯಲ್ಲಿ ಇರಬೇಕಾದ ದನಗಳು ರಸ್ತೆಗಳು, ಸಾರ್ವಜನಿಕರ ಸ್ಥಳಗಳಲ್ಲಿ ಅಲೆಯುತ್ತಿರುವ ಪರಿಣಾಮ ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ. ವಾಹನ ಸವಾರರ ಹಾಗೂ ಜಾನುವಾರುಗಳ ಜೀವಕ್ಕೆ ಕಂಟಕ ಎದುರಾಗಿದೆ. ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿ ಬಿಡಾಡಿ ದನ, ಜಾನುವಾರುಗಳ ಕಾಟ ಮಿತಿಮೀರಿದೆ.

ನಗರದ ಬಿ.ರಾಚಯ್ಯ ಜೋಡಿ ರಸ್ತೆ, ಮೈಸೂರು-ನಂಜನಗೂಡು-ಕೊಳ್ಳೇಗಾಲ ಸಂಪರ್ಕಿಸುವ ಡಿವಿಯೇಷನ್ ರಸ್ತೆ, ತಮಿಳುನಾಡಿಗೆ ಸಂಪರ್ಕ ಬೆಳೆಸುವ ಸತ್ತಿ ರಸ್ತೆ, ಗುಂಡ್ಲುಪೇಟೆಗೆ ಸಾಗುವ ಮುಖ್ಯ ರಸ್ತೆಗಳಲ್ಲಿ ಬಿಡಾಡಿ ದನಗಳ ಹಿಂಡು ಬೀಡುಬಿಟ್ಟಿದ್ದು ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ.

ರಸ್ತೆಗೆ ಅಡ್ಡಲಾಗಿ ದನಗಳು ಓಡಾಡುತ್ತಿರುವುದರಿಂದ ಮಲಗುತ್ತಿರುವುದರಿಂದ ಅಪಘಾತಗಳು ಸಂಭವಿಸಿ ಜನ-ಜಾನುವಾರು ಗಂಭೀರವಾಗಿ ಗಾಯಗೊಳ್ಳುತ್ತಿವೆ.

**ಮುಖ್ಯ ರಸ್ತೆಯಲ್ಲೇ ಬಿಡಾರ**

**ಹನೂರು ಪಟ್ಟಣದ ಬಸ್ ನಿಲ್ದಾಣ ಹಾಗೂ ಮುಖ್ಯ ರಸ್ತೆಗಳಲ್ಲಿ ಬಿಡಾಡಿ ದನಗಳ ಹಾವಳಿ ಅತಿಯಾಗಿದ್ದು ವಾಹನ ಸವಾರರ ಹಾಗೂ ಸಾರ್ವಜನಿಕರ ಓಡಾಟಕ್ಕೆ ಕಿರಿಕಿರಿಯಾಗುತ್ತಿದೆ. ಮಹದೇಶ್ವರ ಬೆಟ್ಟ, ಬಂಡಳ್ಳಿ ಹಾಗೂ ಲೊಕ್ಕನಹಳ್ಳಿ ಮುಖ್ಯ ರಸ್ತೆಯಲ್ಲಿ ದಿನಬೆಳಗಾದರೆ ದನಗಳು ಅಲೆಯುತ್ತಿದ್ದು ವಾಹನಗಳಿಗೆ ಅಡ್ಡಲಾಗಿ ಅಪಘಾತಗಳಿಗೆ ಕಾರಣವಾಗುತ್ತಿವೆ.**

ತಹಶೀಲ್ದಾರ್ ಕಚೇರಿ, ಜಿಲ್ಲಾಡಳಿತ ಕಚೇರಿ, ಜಿಲ್ಲಾ ಆಸ್ಪತ್ರೆ, ನಗರಸಭೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಜಿಲ್ಲಾ ನ್ಯಾಯಾಲಯ ಸೇರಿದಂತೆ ಸಾರ್ವಜನಿಕರು ಹೆಚ್ಚು ಓಡಾಡುವ ಸ್ಥಳಗಳಲ್ಲಿಯೇ ಬಿಡಾಡಿ ದನಗಳು ಅಲೆಯುತ್ತಿರುವುದರಿಂದ ಸಮಸ್ಯೆ ಗಂಭೀರವಾಗಿದೆ.

ನೆರೆಯ ಮೈಸೂರು, ಬೆಂಗಳೂರು ಸೇರಿದಂತೆ ತಮಿಳುನಾಡು, ಕೇರಳ ರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳು ಚಾಮರಾಜನಗರ ಮೇಲೆ ಹಾದುಹೋಗಿದ್ದು ಬಿಡಾಡಿ ದನಗಳ


☛ ಉದಯವಾಹಿನಿ ಚಿತ್ರ

ಹಾವಳಿಗೆ ವಾಹನ ಸವಾರರು ಬೇಸತ್ತಿದ್ದಾರೆ.

ಕೊಳ್ಳೇಗಾಲ ನಗರದ ಪ್ರತಿ ಬಡಾವಣೆಗಳ ಪ್ರಮುಖ ರಸ್ತೆಗಳಲ್ಲಿ ಬೀಡಾಡಿ ದನಗಳ ಹಾವಳಿ ಮಿತಿಮೀರಿದೆ. ಸಾರ್ವಜನಿಕರು, ವಾಹನ ಸವಾರರು ನಿತ್ಯ ಜೀವ ಭಯದಲ್ಲಿ ಸಂಚರಿಸುವಂತಾಗಿದೆ. ಬಿಡಾಡಿ ದನ ಹಾಗೂ ಜಾನುವಾರಗಳ ಹಾವಳಿ ತಡೆಯಲು ನಗರಸಭೆ ವಿಫಲವಾಗಿರುವುದು ಸಾರ್ವಜನಿಕರ ಟೀಕೆಗೆ ಗುರಿಯಾಗಿದೆ. ನಗರದ ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಡಾ.ರಾಜಕುಮಾರ್ ರಸ್ತೆ, ಆರ್‌ಎಂಸಿ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ನೂರಾರು ಬಿಡಾಡಿ ದನಗಳು ಬಿಡಾರ ಹೂಡಿವೆ. ಕೆಲವೊಮ್ಮೆ ರಸ್ತೆಯಲ್ಲಿ ಸಾಗುವ ಪಾದಚಾರಿಗಳ ಮೇಲೆ ಏಕಾಏಕಿ ಎರಗುತ್ತಿರುವ ದನಗಳಿಂದ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಹಳೆ ಕುರುಬರ ಬಡಾವಣೆ, ನೂರ್ ಮೊಹಲ್ಲಾ ಬಡಾವಣೆ ಸೇರಿದಂತೆ ನಗರಕ್ಕೆ ಹೊಂದಿಕೊಂಡಿರುವ ಹಲವು ಬಡಾವಣೆಗಳಿಂದ ನಿತ್ಯವೂ ನೂರಾರು ಬಿಡಾಡಿ ದನಗಳು ನಗರ ಪ್ರವೇಶಿಸುತ್ತಿದ್ದು ಯಾರ ಅಂಜಿಕೆ ಇಲ್ಲದೆ ಎಲ್ಲೆಂದರಲ್ಲಿ ನಿಂತು, ಮಲಗಿ ತೊಂದರೆ ಕೊಡುತ್ತವೆ. ಕೆಲವೊಮ್ಮೆ ರಸ್ತೆಯ ಮಧ್ಯೆಯೇ ಮಲಗಿ ಸಂಚಾರ ದಟ್ಟಣೆಗೂ ಕಾರಣವಾಗುತ್ತಿವೆ. ಕಾರು, ಬಸ್, ಸರಕು ಸಾಗಣೆ ವಾಹಗನಳು, ದ್ವಿಚಕ್ರ ವಾಹನಗಳು ಎಷ್ಟೆ ಹಾರ್ನ್ ಮಾಡಿದರೂ ಒಂದಿಂಚೂ ಜಾಗ ಕದಲಿಸುವುದಿಲ್ಲ. ಬೆಳಿಗ್ಗೆ ಹಾಗೂ ಸಂಜೆಯ ಹೊತ್ತು ಶಾಲೆಗೆ ಹೋಗುವ ಮಕ್ಕಳು ದನಗಳ ದಾಳಿ ಭಯದಲ್ಲಿ ಬಿದ್ದು ಗಾಯಮಾಡಿಕೊಂಡಿದ್ದಾರೆ. ವೇಗವಾಗಿ ಚಲಿಸುವ ವಾಹನಗಳಿಗೆ ಏಕಾಏಕಿ ಅಡ್ಡಲಾಗಿ ನಿಲ್ಲುವ ದನಗಳಿಂದ ಅಪಘಾತಗಳು ಸಂಭವಿಸುತ್ತಿದ್ದು ಜನ ಜಾನುವಾರು ಜೀವಗಳಿಗೆ ಕಂಟಕವಾಗುತ್ತಿದೆ. ಸ್ಥಳೀಯ ಆಡಳಿತ ಅಧಿಕಾರಿಗಳಿಗೆ ಸಮಸ್ಯೆಯ ಅರಿವಿದ್ದರೂ ಬಿಡಾಡಿ ದನಗಳ ಉಪಟಳ ತಡೆಗೆ ನಿರ್ಲಕ್ಷ್ಯ ವಹಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಗುಂಡ್ಲುಪೇಟೆ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ವೃತ್ತಗಳಲ್ಲಿ ಬಿಡಾಡಿ ದನಗಳ ಹಾವಳಿ ಮಿತಿಮೀರಿದೆ. ಎಲ್ಲೆಂದರಲ್ಲಿ ಗುಂಪಾಗಿ ನಿಲ್ಲುವ ದನಗಳು ವಾಹನಗಳ ಸಂಚಾರಕ್ಕೆ ಅಡ್ಡಿ ಮಾಡುತ್ತಿವೆ. ದ್ವಿಚಕ್ರವಾಹನ ಸವಾರದು ಜೀವಭಯದಲ್ಲಿ ಸಂಚಾರ ಮಾಡಬೇಕಿದೆ.

**ನಿತ್ಯ ಜೀವ ಭಯಯಲ್ಲಿ ಸಂಚಾರ**

**ಪಾದಚಾರಿ ಮಾರ್ಗಗಳನ್ನೂ ಬಿಡಾಡಿ ದನಗಳು ಅತಿಕ್ರಮಿಸಿಕೊಳ್ಳುವುದರಿಂದ ಸಾರ್ವಜನಿಕರು ರಸ್ತೆ ಮೇಲೆ ನಡೆಯಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಇದರಿಂದ ಆಗಾಗ ಅಪಘಾತಗಳು ಸಂಭವಿಸಿದೆ. 15 ದಿನಗಳ ಹಿಂದಷ್ಟೆ ನಗರದಲ್ಲಿ ದಂಪತಿಗಳ ಮೇಲೆ ಬಿಡಾಡಿ ದನ ಏಕಾಏಕಿ ದಾಳಿ ಮಾಡಿದ್ದು ಸಣ್ಣ ಗಾಯಗಳೊಂದಿಗೆ ಪಾರಾಗಿದ್ದಾರೆ. ಮಹಿಳೆಯರು, ಮಕ್ಕಳು, ವೃದ್ಧರು ಸೇರಿದಂತೆ ನಾಗರಿಕರು ರಸ್ತೆಯ ಮೇಲೆ ಭಯದಿಂದ ಸಂಚರಿಸುವ ಪರಿಸ್ಥಿತಿ ಉಂಟಾಗಿದೆ - ಧರ್ಮೇಂದ್ರ, ಹಿರಿಯ ನಾಗರಿಕ**

# ಗ್ರಾಮ ಪಂಚಾಯಿತಿ ಆರೋಗ್ಯ ಅಭಿಯಾನ

**• ಉದಯವಾಹಿನಿ, ಬಂಗಾರಪೇಟೆ**

ತಾಲ್ಲೂಕಿನ ಬೂದಿಕೋಟೆ ಹೋಬಳಿಯ ಯಳೇಸಂದ್ರದ ಗ್ರಾಮ ಪಂಚಾಯಿತಿಯಲ್ಲಿ ಇತ್ತೀಚೆಗೆ ಗ್ರಾಮ ಪಂಚಾಯಿತಿ ಆರೋಗ್ಯ ಅಭಿಯಾನ ಹಮ್ಮಿಕೊಳ್ಳಲಾಯಿತು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮುನಿರಾಜು ಮಾತನಾಡಿ, ಆರೋಗ್ಯವೇ ಭಾಗ್ಯ ಎನ್ನುವ ನಾಣ್ಣುಡಿಯಿದೆ. ಆರೋಗ್ಯವಿದ್ದರೆ, ಜೀವನದಲ್ಲಿ ಏನು ಬೇಕಾದರೂ ಸಾಧನೆ ಮಾಡಬಹುದು' ಎಂದರು.ಉತ್ತಮ ಆರೋಗ್ಯಕ್ಕೆ ಆಹಾರ ಸೇವನೆ ಮುಖ್ಯ. ಇಂದಿನ ಬದಲಾದ ಜೀವನಶೈಲಿಯಿಂದ ಮಧುಮೇಹ ರೋಗಕ್ಕೆ ತುತ್ತಾಗುತ್ತಿದ್ದೇವೆ. ಅಕ್ಕಿ, ಸಕ್ಕರೆ, ಮೈದಾದಂತಹ ಪದಾರ್ಥಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವನೆ ಮಾಡುತ್ತಿರುವುದರಿಂದ ಸಕ್ಕರೆ ಕಾಯಿಲೆ ಬರುತ್ತದೆ. ನಿತ್ಯ ವ್ಯಾಯಾಮ, ವಾಕಿಂಗ್ ಇತ್ಯಾದಿ ಮಾಡುವುದರಿಂದ ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸಬಹುದು. ಆರು ತಿಂಗಳಿಗೊಮ್ಮೆ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಕೊಳ್ಳಬೇಕು ಎಂದರು.

ಪೌಷ್ಟಿಕ ಆಹಾರ ಸೇವನೆಗೆ ಮಾಸಿಕ 500 ಸಹಾಯ ಧನ ನೀಡಲಿದೆ. 6 ತಿಂಗಳು ಚಿಕಿತ್ಸೆ ಪಡೆದಲ್ಲಿ, ಕ್ಷಯ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು' ಎಂದರು.ಈ ವೇಳೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ನಾರಾಯಣಸ್ವಾಮಿ, ಪ್ರೇಮ್ ಕುಮಾರ್, ಗಿರಿ ಮತ್ತು ಗ್ರಾಮ ಆರೋಗ್ಯ ಸಮಿತಿಯ ಸದಸ್ಯರು ಹಾಜರಿದ್ದರು.


☛ ಉದಯವಾಹಿನಿ ಚಿತ್ರ

ಸಮತೋಲಿತ ಆಹಾರ ಎಂದರೆ ನಮ್ಮ ದೇಹಕ್ಕೆ ಅಗತ್ಯವಾದ ಎಲ್ಲಾ ಪೌಷ್ಟಿಕಾಂಶ ಒದಗಿಸುವುದು.

ಪ್ರೋಟಿನ್, ಕಾರ್ಬೋಹೈಡ್ರೇಟ್ ಹಾಗೂ ಕೊಬ್ಬಿನಂಥ ದೊಡ್ಡ ಪ್ರಮಾಣದ ಪೋಷಕಾಂಶಗಳಿಂದ ಹಿಡಿದು, ಸೂಕ್ಷ್ಮ ಪೋಷಕಾಂಶಗಳಾದ ವಿಟಮಿನ್ ಮತ್ತು ಖನಿಜಾಂಶಗಳನ್ನು ಒಳಗೊಂಡಿರುತ್ತದೆ.

ಈ ಪೋಷಕಾಂಶಗಳನ್ನು ಹಣ್ಣು ಮತ್ತು ತರಕಾರಿ, ಆಹಾರ ಧಾನ್ಯ ಹಾಗೂ ಬೇಳೆಕಾಳು, ಮಾಂಸ ಮತ್ತು ಹಾಲಿನ ಉತ್ಪನ್ನಗಳು ಹಾಗೂ ಕೊಬ್ಬು ಮತ್ತು ಎಣ್ಣೆಯಿಂದ ಪಡೆಯಬಹುದು.

**ಒಂದು ವಾರಕ್ಕಿಂತ ಹೆಚ್ಚು ಕೆಮ್ಮು ಕಂಡು ಬಂದರೆ ಅದು ಕ್ಷಯ ರೋಗಕ್ಕೆ ತಲುಪುವ ಸಾಧ್ಯತೆ ಇದ್ದು, ಅಂಥವರು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಒಂದು ವೇಳೆ ಕ್ಷಯ ರೋಗ ಕಂಡುಬಂದರೆ ಸರ್ಕಾರವು 6 ತಿಂಗಳು ಉಚಿತ ಚಿಕಿತ್ಸೆ ನೀಡಲಿದೆ**

**-ಅನಿತಾ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅನಿತಾ**

# 'ಕನಕನ ಬಂಡೆ' ತಾಣದ ಅಭಿವೃದ್ಧಿಗೆ ಗ್ರಹಣ

**• ಉದಯವಾಹಿನಿ, ಶ್ರೀರಂಗಪಟ್ಟಣ**

ತಾಲ್ಲೂಕಿನ ಮಹದೇವಪುರ ಬಳಿ, ಕಾವೇರಿ ನದಿಯ ಮಧ್ಯೆ ದಾಸ ಶ್ರೇಷ್ಠ ಕನಕದಾಸರು ಕುಳಿತು ಧ್ಯಾನ ಮಾಡಿದ 'ಕನಕನ ಬಂಡೆ' ತಾಣದ ಅಭಿವೃದ್ಧಿ ಮಾತಿಗೆ ಮಾತ್ರ ಸೀಮಿತವಾಗಿದೆ.

ಮಹದೇವಪುರದ ಪೂರ್ವ ದಿಕ್ಕಿನಲ್ಲಿ, ನದಿಯ ಮಧ್ಯೆ ಇರುವ ಕನಕನ ಬಂಡೆ ತಾಣವನ್ನು ಕೂಡಲಸಂಗಮ ಮಾದರಿಯಲ್ಲಿ ಅಭಿವೃದ್ಧಿ ಪಡಿಸಬೇಕು ಎಂಬ ಒತ್ತಾಯ ದಶಕದಿಂದಲೂ ಕೇಳಿ ಬರುತ್ತಿದೆ.

ಪ್ರವಾಸೋದ್ಯಮ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಐದಾರು ವರ್ಷಗಳ ಹಿಂದೆ ಸ್ಥಳ ಪರಿಶೀಲನೆ ನಡೆಸಿದ್ದಾರೆ. ನಿಗಮದಿಂದ ಒಂದಷ್ಟು ರಸ್ತೆ ಅಭಿವೃದ್ಧಿ ಕೆಲಸವೂ ಆಗಿದೆ. ಆದರೆ ಕಾವೇರಿ ನದಿಯ ದಡದಿಂದ 100 ಮೀಟರ್ ದೂರದಲ್ಲಿರುವ ಕನಕನ ಬಂಡೆಯನ್ನು ಸ್ಪರ್ಶಿಸಿ ಪುಳಕಿತರಾಗಬೇಕು ಎಂಬ ಭಕ್ತರ ಬಯಕೆ


☛ ಉದಯವಾಹಿನಿ ಚಿತ್ರ

ಇನ್ನೂ ಈಡೇರಿಲ್ಲ. ಈ ತಾಣವನ್ನು ಪ್ರವಾಸಿ ತಾಣವನ್ನಾಗಿ ರೂಪಿಸಬೇಕು ಎಂದು ಕನಕ ಶ್ರೀ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಸರ್ಕಾರ ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಿದೆ. ಕನಕ ಗುರುಪೀಠದ ಕೆ.ಆರ್. ನಗರ ಶಾಖೆಯ ಈಶ್ವರಾನಂದಪುರಿ ಸ್ವಾಮೀಜಿ ಇಲ್ಲಿಗೆ ಬಂದು ಹೋಗಿದ್ದಾರೆ. ಈ ತಾಣದ ಅಭಿವೃದ್ಧಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಮಾತನಾಡುತ್ತೇನೆ ಎಂಬ ಮಾತನ್ನೂ ಆಡಿದ್ದರು. ಸಿ.ಎಚ್. ವಿಜಯಶಂಕರ್ ಮೇಘಾಲಯ ರಾಜ್ಯಪಾಲರಾಗುವ ಮುನ್ನ ಟ್ರಸ್ಟ್ ಅವರಿಗೂ ಮನವಿ ಸಲ್ಲಿಸಿತ್ತು.

ಕನಕದಾಸರು ಧ್ಯಾನ ಮಾಡಿರುವ ಈ ಪವಿತ್ರ ಬಂಡೆಯ ಪರಿಸರವನ್ನು ಅಭಿವೃದ್ಧಿಪಡಿಸುವಂತೆ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಧಾರ್ಮಿಕ ಮುಖಂಡರಿಗೆ ಮನವಿ ಸಲ್ಲಿಸಿದ್ದೇವೆ. ಆದರೆ ಯಾರೂ ಇತ್ತ ಆಸಕ್ತಿ ವಹಿಸುತ್ತಿಲ್ಲ' ಎಂದು ಕನಕ ಶ್ರೀ ಗ್ರಾಮೀಣಾಭಿವೃದ್ಧಿ ಟ್ರಸ್ಟ್‌ನ ಕಾರ್ಯದರ್ಶಿ ಸಿದ್ದರಾಜು ಅಸಮಾಧಾನ ವ್ಯಕ್ತಪಡಿಸುತ್ತಾರೆ.

**ಕನಕದಾಸರು ಬಾಳೆ ಎಲೆಯ ಮೇಲು ತೇಲುತ್ತಾ ನದಿಯನ್ನು ದಾಟಿದ ದೃಶ್ಯವನ್ನು ಕಂಡ ಅಂಬಿಗನಿಗೆ ಅವರ ಬಗ್ಗೆ ಭಕ್ತಿ ಉಂಟಾಗಿ ಗುಡಿ ಕಟ್ಟಿದ ಎಂದು ಸ್ಥಳೀಯರು ಹೇಳುತ್ತಾರೆ. ಅದಕ್ಕೆ ಪುಷ್ಠಿ ನೀಡುವಂತೆ ಕನಕನ ಬಂಡೆ ಸಮೀಪ, ನದಿಯ ದಡದಲ್ಲಿ ಕನಕನ ಗುಡಿ ಈಗಲೂ ಇದೆ. ಪ್ರತಿ ಶನಿವಾರ ಮತ್ತು ವಿಶೇಷ ಸಂದರ್ಭಗಳಲ್ಲಿ ಪೂಜೆ, ಪುನಸ್ಕಾರಗಳು ನಡೆಯುತ್ತವೆ**

**-ಬೋರಯ್ಯ, ಅರ್ಚಕ**

# ಮೂಲ ಆದಿವಾಸಿಗಳ ಸಮೀಕ್ಷೆಗೆ 'ಕಾರ್ಮೋಡ'

**• ಉದಯವಾಹಿನಿ, ಮೈಸೂರು**

ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿರುವ ನೈಜ ದುರ್ಬಲ ಬುಡಕಟ್ಟುಗಳು ಹಾಗೂ ಅರಣ್ಯಾಧಾರಿತ ಮೂಲ ಆದಿವಾಸಿಗಳ ತಳಮಟ್ಟದ ಅಧ್ಯಯನ ಸಮೀಕ್ಷೆಯ ಮೇಲೆ ಕಾರ್ಮೋಡ ಕವಿದಿದೆ.

ಇಲ್ಲಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ(ಟಿಆರ್‌ಐ)ಯಲ್ಲಿರುವ ಮೂಲ ಆದಿವಾಸಿಗಳ ಅಧ್ಯಯನ ಕೇಂದ್ರದ ಮೂಲಕ, ರಾಜ್ಯದಲ್ಲಿರುವ ಜೇನುಕುರುಬ ಮತ್ತು ಕೊರಗ ಬುಡಕಟ್ಟುಗಳ ಜೊತೆಗೆ ಅರಣ್ಯಾಧಾರಿತ ಮೂಲ ಆದಿವಾಸಿಗಳಾದ ಇರುಳಿಗ, ಸೋಲಿಗ, ಯರವ, ಪಣಿಯನ್, ಹಸಲರು, ಗೌಡಲು, ಸಿದ್ದಿ, ಬೆಟ್ಟ ಕುರುಬ, ಕುಡಿಯ ಮತ್ತು ಮಲೆಕುಡಿಯ ಬುಡಕಟ್ಟುಗಳ ಅಧ್ಯಯನವನ್ನು ಇದೇ ವರ್ಷದ ಜನವರಿ 8 ರಿಂದ ಆರಂಭಿಸಲಾಗಿತ್ತು.

**ಸೌಲಭ್ಯಗಳನ್ನು ಕಲ್ಪಿಸಲು ಸಹಕಾರಿ:** ರಾಜ್ಯದಲ್ಲಿರುವ ಅರಣ್ಯಾಧಾರಿತ 12 ಮೂಲ ಆದಿವಾಸಿ ಬುಡಕಟ್ಟು ಜನರು ಮೀಸಲಾತಿ ಅಥವಾ ಸರ್ಕಾರದ ಯೋಜನೆಗಳ ಬಗ್ಗೆಯಾಗಲಿ ಜಾಗೃತಿ ಇಲ್ಲ. ಹಾಡಿ, ಗದ್ದೆ, ಪೋಡು, ಕಾಲೊನಿ ಹಾಗೂ ದೊಡ್ಡಿಗಳಲ್ಲಿ ಸರ್ಕಾರದ ಸೌಲಭ್ಯಗಳಿಗಾಗಿ ಆಧಾರ್


☛ ಉದಯವಾಹಿನಿ ಚಿತ್ರ

ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಜಾತಿ ಪ್ರಮಾಣಪತ್ರ ಮತ್ತು ಆದಾಯ ಪ್ರಮಾಣಪತ್ರಗಳನ್ನು ಇಂದಿಗೂ ಬಹಳಷ್ಟು ಮಂದಿ ಪಡೆದೇ ಇಲ್ಲ. ಇವುಗಳನ್ನು ಕೊಡಿಸಿಕೊಡುವ ನಿಟ್ಟಿನಲ್ಲಿ ಸಮೀಕ್ಷೆಯು ಮಹತ್ವದ್ದಾಗಿದೆ.

ಪರಿಶಿಷ್ಟ ಪಂಗಡದಲ್ಲಿರುವ ಮೂಲ ಆದಿವಾಸಿಗಳಾದ ಜೇನುಕುರುಬ, ಇರುಳಿಗ, ಸೋಲಿಗ, ಯರವ, ಪಣಿಯನ್, ಹಸಲರು, ಗೌಡಲು, ಸಿದ್ದಿ, ಕೊರಗ, ಬೆಟ್ಟ ಕುರುಬ, ಕುಡಿಯ, ತೋಡ, ಕಣಿಯನ್, ಕೊಕ್ಕಣಿ, ಕೋಯ, ವರ್ಲಿ ಮತ್ತು ಮಲೆಕುಡಿಯ ಬುಡಕಟ್ಟುಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕವಾಗಿ ಮತ್ತು ಆರೋಗ್ಯದ ದೃಷ್ಟಿಯಿಂದಲೂ ತೀರಾ ಹಿಂದುಳಿದಿವೆ.

ಇವರ ಸಂಪೂರ್ಣ ಮಾಹಿತಿ ಸಂಗ್ರಹಕ್ಕಾಗಿ ಸಮೀಕ್ಷೆಯು ಅತ್ಯಗತ್ಯ ಎನ್ನುತ್ತಾರೆ ಮುಖಂಡರು.

ಅನುದಾನ ಕೊರತೆಯ ಕಾರಣದಿಂದಲೂ ಸಮೀಕ್ಷೆಯು ನನೆಗುದಿಗೆ ಬಿದ್ದಿದೆ. ಸಂಸ್ಥೆಗೆ ಕಾಯಂ ನಿರ್ದೇಶಕರು ಇಲ್ಲದಿರುವುದು ಕೂಡ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ' ಎಂದು ಹೇಳಲಾಗುತ್ತಿದೆ.

**ಯರವ ಸಮುದಾಯದ ಮೊದಲ ಸ್ನಾತಕೋತ್ತರ ಪದವೀಧರೆಯಾದ ನಾನೇ ಮಾಹಿತಿಗೆ ಬಹಳಷ್ಟು ಅಲೆಯಬೇಕಾಗಿದೆ. ದತ್ತಾಂಶ ಸಂಗ್ರಹಕ್ಕೆ ಸಂಸ್ಥೆ ಸಿದ್ಧವಿಲ್ಲವೇನೋ ಎನಿಸುತ್ತಿದೆ. ನಾನೂ ಸಮೀಕ್ಷೆಯಲ್ಲಿ ಮೂರು ತಿಂಗಳು ಪಾಲ್ಗೊಂಡಿದ್ದೆ. ಆದಿವಾಸಿಗಳ ಸ್ಥಿತಿಗತಿಯ ವಾಸ್ತವಾಂಶವು ಸಮಾಜ ಹಾಗೂ ಸರ್ಕಾರಕ್ಕೆ ಗೊತ್ತಾಗಬೇಕು. ಇದಕ್ಕಾಗಿ ಸಮೀಕ್ಷೆ ಬೇಕಾಗಿದೆ' ಎನ್ನುತ್ತಾರೆ ಸರ್ವೇ ಕಾರ್ಯದಲ್ಲಿ ಪಾಲ್ಗೊಂಡಿದ್ದ**

**-ಆಶಾ, ಎಚ್.ಡಿ.ಕೋಟೆ ತಾಲ್ಲೂಕು**

# ಸಾಲುಮರದ ತಿಮ್ಮಕ್ಕನ ಹೆಸರಿನ ಅರಣ್ಯ ಪಾರ್ಕ್

**• ಉದಯವಾಹಿನಿ, ಮಾಲೂರು**

ಅರಣ್ಯ ಇಲಾಖೆ ವತಿಯಿಂದ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕನ ಹೆಸರಲ್ಲಿ ನಿರ್ಮಾಣ ಮಾಡಿರುವ ಅರಣ್ಯ ಪಾರ್ಕ್ ಹಾಗೂ ಅಲ್ಲಿ ಅಳವಡಿಸಿರುವ ಮಕ್ಕಳ ಆಟಿಕೆಗಳು ಮತ್ತು ಹಿರಿಯರ ಹೊರಾಂಗಣ ವ್ಯಾಯಾಮ ಪರಿಕರಗಳು ಸುತ್ತ ಮುತ್ತಲ ಗ್ರಾಮಸ್ಥರನ್ನು ಆಕರ್ಷಿಸುತ್ತಿವೆ.

ತಾಲ್ಲೂಕಿನ ಕೂರಂಡಹಳ್ಳಿಯ ಸುಮಾರು 360 ಎಕರೆ ಅರಣ್ಯ ಪ್ರದೇಶದಲ್ಲಿ ರೆಡ್ ಸ್ಯಾಂಡಲ್, ಸ್ಯಾಂಡಲ್ ಮತ್ತು ಬಿದಿರು ಗಿಡಗಳನ್ನು ಬೆಳೆಸಲಾಗಿದೆ. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಕೂರಂಡಹಳ್ಳಿ, ಪುರಸನಹಳ್ಳಿ, ಮಾಂಗಾಪುರ, ಮೈಲಾಂಡಹಳ್ಳಿ, ಚನಕಲ್, ಕುಡಿಯನೂರು ಗ್ರಾಮಗಳಿಂದ ಈ ಸುಂದರ ಉದ್ಯಾನ ನೋಡಲು ಪೋಷಕರು ತಮ್ಮ ಮಕ್ಕಳೊಂದಿಗೆ ಭೇಟಿ ನೀಡುತ್ತಿದ್ದಾರೆ.

**ಸಮರ್ಪಕ ಉದ್ಯಾನದ ಕೊರತೆ:** ಮಾಲೂರು ಪಟ್ಟಣದಲ್ಲಿರುವ ಒಂದೆರಡು ಉದ್ಯಾನಗಳಲ್ಲಿ ಮಕ್ಕಳಿಗೆ ಸಮರ್ಪಕ ಆಟಿಕೆಗಳಿಲ್ಲ, ವ್ಯಾಯಾಮ ಪರಿಕರಗಳೂ ಇಲ್ಲ. ಇರುವ ಒಂದೆರಡು ಆಟಿಕೆಗಳೂ ಹಾಳಾಗಿ ಹೋಗಿದ್ದು,


☛ ಉದಯವಾಹಿನಿ ಚಿತ್ರ

**ಸುಸಜ್ಜಿತ ಉದ್ಯಾನದತ್ತ ಊರ ದಂಡು**

ದುರಸ್ಥಿ ಮಾಡುವವರಿಲ್ಲ. ಪಟ್ಟಣದ ವೈಟ್ ಗಾರ್ಡನ್ ಬಳಿರುವ ಪಾರ್ಕ್‌ನಲ್ಲಿಯೂ ಇದೇ ಸ್ಥಿತಿ ಇದ್ದು, ಇಲ್ಲಿನ ಮಕ್ಕಳಿಗೆ ಆಟ ಆಡಲು ಹಾಗೂ ಇತರರಿಗೆ ವ್ಯಾಯಾಮ ಮಾಡಲು ಸುಸಜ್ಜಿತ ಪಾರ್ಕ್ ಅಗತ್ಯವಿತ್ತು. ಇದರಿಂದ ಪಟ್ಟಣದ ಅನೇಕರು ಕೂರಂಡಹಳ್ಳಿ ಅರಣ್ಯ ಪ್ರದೇಶದಲ್ಲಿ ನಿರ್ಮಾಣ ಮಾಡಿರುವ ಸಾಲುಮರದ ತಿಮ್ಮಕ್ಕ ಪಾರ್ಕ್‌ನತ್ತ ಹೆಜ್ಜೆ ಹಾಕುತ್ತಿದ್ದಾರೆ. ಶಾಲಾ-ಕಾಲೇಜುಗಳ ರಜಾ ದಿನಗಳಲ್ಲಂತೂ ಗ್ರಾಮೀಣ ಭಾಗದ ಮಕ್ಕಳು, ವಿದ್ಯಾರ್ಥಿಗಳ ದಂಡೆ ಪಾರ್ಕ್‌ನತ್ತ ಧಾವಿಸುತ್ತದೆ.

ಪಾರ್ಕಿನಲ್ಲಿ ಅಳವಡಿಸಿರುವ ಮೆಟ್ಟಿಲು ಗಿರಣಿ, ರೋಯಿಂಗ್ ಯಂತ್ರ, ಏರ್ಡ್ಯನ್, ಸ್ಪಿನ್ ಬೈಕ್, ಜಾಕೋಬ್ಸ್ ಲ್ಯಾಡರ್, ಸ್ಕೀಯಾರ್ಗ್ ಯಂತ್ರಗಳು ಮಕ್ಕಳನ್ನು ಬಹುವಾಗಿ ಆಕರ್ಷಿಸುತ್ತಿವೆ.

# ಐಐಟಿ ಕಾಲೇಜು ಸ್ಥಳಾಂತರಕ್ಕೆ ಆಕ್ಷೇಪ: ವಿದ್ಯಾರ್ಥಿಗಳಿಗೆ ತೊಂದರೆ

**• ಉದಯವಾಹಿನಿ, ಮುಳಬಾಗಿಲು**

ಮುಳಬಾಗಿಲು ನಗರದಲ್ಲಿರುವ ಸರ್ಕಾರಿ ತರಬೇತಿ ಸಂಸ್ಥೆಯನ್ನು ಸ್ಥಳದ ಅಭಾವದಿಂದಾಗಿ ಹೊಸ ಕಟ್ಟಡ ನಿರ್ಮಾಣವಾಗುತ್ತಿರುವ ದೇವರಾಯ ಸಮುದ್ರ ಎಂಬಲ್ಲಿಗೆ ವರ್ಗಾವಣೆ ಮಾಡಲು ನಿರ್ಧರಿಸಲಾಗಿದೆ. ಆದರೆ, ಇದಕ್ಕೆ ಸಾರ್ವಜನಿಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ನಗರದಿಂದ 10-15 ಕಿ.ಮೀ ದೂರದಲ್ಲಿರುವ ದೇವರಾಯ ಸಮುದ್ರಕ್ಕೆ ಕೈಗಾರಿಕಾ ತರಬೇತಿ ಸಂಸ್ಥೆಯ ವರ್ಗಾವಣೆಯು ಅವೈಜ್ಞಾನಿಕವಾಗಿದ್ದು, ಆ ಸ್ಥಳಕ್ಕೆ ಸಮರ್ಪಕವಾದ ಸಾರಿಗೆ ಸೌಲಭ್ಯವೂ ಇಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಅನನುಕೂಲವಾಗಿದೆ ಎಂದು ಜನರು ಆರೋಪಿಸಿದ್ದಾರೆ.

ಮುಳಬಾಗಿಲು ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ ಇಲ್ಲ. ಹೀಗಾಗಿ ನಗರದ ಹಳೆಯ ರೇಷ್ಮೆ ಮೊಟ್ಟೆ ಮಾರುಕಟ್ಟೆ ಪ್ರಾಂಗಣದಲ್ಲಿ ಈ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರ ನಿಗದಿಪಡಿಸಿದಷ್ಟು ವಿದ್ಯಾರ್ಥಿಗಳು ಸಂಸ್ಥೆಯಲ್ಲಿ ಕಲಿಯುತ್ತಿದ್ದಾರೆ. ನಗರಕ್ಕೆ ವಿವಿಧ ಭಾಗಗಳಿಂದ ಸಾರಿಗೆ ಸಂಪರ್ಕವಿರುವ ಕಾರಣ ಇಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆ ಇಲ್ಲ. ಆದರೆ, ಸಂಸ್ಥೆಗೆ ಸ್ವಂತ ಕಟ್ಟಡ ಇಲ್ಲದ ಕಾರಣ ಮುಳಬಾಗಿಲು ನಗರದಿಂದ ದೂರದ ದೇವರಾಯ ಸಮುದ್ರದ ಬಸ್ ಗೇಟ್ ಬಳಿ ನಿರ್ಮಿಸಲಾಗುತ್ತಿರುವ ಕಟ್ಟಡಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ.

ಆದರೆ, ಇಲ್ಲಿಗೆ ತೆರಳಲು ಸಾರಿಗೆ ಸೌಲಭ್ಯ ವ್ಯವಸ್ಥೆ ಇಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂದು ವಿದ್ಯಾರ್ಥಿಗಳು ಸೇರಿದಂತೆ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮುಳಬಾಗಿಲು ನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಕೈಗಾರಿಕಾ ಸಂಸ್ಥೆಯಲ್ಲಿ ಫಿಟ್ಟರ್, ಟರ್ನರ್, ವೆಲ್ಡರ್, ಮೆಕಾನಿಕ್,


☛ ಉದಯವಾಹಿನಿ ಚಿತ್ರ

ಎಲೆಕ್ಟ್ರಿಷಿಯನ್, ಎಲೆಕ್ಟ್ರಾನಿಕ್ಸ್ ಸೇರಿದಂತೆ ಎಲ್ಲಾ ವಿಭಾಗದ ತರಬೇತಿ ಘಟನೆಗಳಿದ್ದು, 350 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು ಮುಳಬಾಗಿಲು ನಗರದಲ್ಲಿರುವ ಐಟಿಐ ಕಾಲೇಜಿನಲ್ಲೇ ತಮ್ಮ ಸಂಪೂರ್ಣ ವಿದ್ಯಾಭ್ಯಾಸ ಪೂರ್ಣಗೊಳಿಸುವ ಆಕಾಂಕ್ಷೆಯಲ್ಲಿದ್ದರು.

**ಅವೈಜ್ಞಾನಿಕ ಎಂಬ ವಾದ**

**ಇತ್ತೀಚೆಗೆ ಮುಳಬಾಗಿಲು-ಕೋಲಾರ ಮಧ್ಯೆ ಭಾಗದಲ್ಲಿರುವ ದೇವರಾಯ ಸಮುದ್ರದ ಬಳಿ ನಿರ್ಮಾಣವಾಗುತ್ತಿರುವ ಕಟ್ಟಡಕ್ಕೆ ಐಟಿಐ ಕಾಲೇಜು ಸ್ಥಳಾಂತರ ಮಾಡುತ್ತಿರುವುದಕ್ಕೆ ಬಹುತೇಕ ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ತಾಲ್ಲೂಕಿನ ದೇವರಾಯ ಸಮುದ್ರದಲ್ಲಿ 20 ವರ್ಷಗಳಿಂದಲೂ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಹೀಗಿರುವಾಗ ನಗರದ ಕೈಗಾರಿಕಾ ತರಬೇತಿ ಸಂಸ್ಥೆಯನ್ನೂ ಅಲ್ಲಿಗೇ ವರ್ಗಾಯಿಸುತ್ತಿರುವುದು ಅವೈಜ್ಞಾನಿಕ ಎಂಬುದು ವಿದ್ಯಾರ್ಥಿಗಳ ವಾದ.**

# ಉಳಿಯಲೇಬೇಕಿದೆ ಜಿಲ್ಲಾಸ್ಪತ್ರೆಯಲ್ಲಿರುವ 'ಆಯುಷ್' ಕೇಂದ್ರ

## ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಈ ಕೇಂದ್ರವು 5 ವರ್ಷಗಳ ಒಪ್ಪಂದ ಮುಗಿದ ಕಾರಣ ಸ್ಥಗಿತಗೊಳ್ಳುವ ಸಾಧ್ಯತೆ

**• ಉದಯವಾಹಿನಿ ಮಡಿಕೇರಿ**

ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಕಳೆದ 5 ವರ್ಷಗಳಿಂದ ಕಾರ್ಯನಿರ್ವಹಿಸಿ ಹಲವು ಮಂದಿಗೆ ಬೆಳಕಾಗಿದ್ದ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ಓಟ್‌ರೀಚ್ ಸೇವಾ ಕೇಂದ್ರದ ಅವಧಿ ಮುಂದಿನ ವರ್ಷ ಫೆಬ್ರುವರಿ ವೇಳೆಗೆ ಮುಗಿಯಲಿದೆ.


ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಆಯಿಷ್) ಈ ಕೇಂದ್ರವು 5 ವರ್ಷಗಳ ಒಪ್ಪಂದ ಮುಗಿದ ಕಾರಣ ಸ್ಥಗಿತಗೊಳ್ಳುವ ಸಾಧ್ಯತೆ ಅಧಿಕವಾಗಿದೆ.

ಈ ಕುರಿತು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಪತ್ರ ಬರೆದು ಕೊಡಗಿನಲ್ಲಿ ದಿನ ಕಳೆದಂತೆ ಶ್ರವಣ ದೋಷವುಳ್ಳವರ ಸಂಖ್ಯೆ ಹೆಚ್ಚುತ್ತಿದೆ. ಕೇಂದ್ರವನ್ನು ಮುಂದುವರಿಸಬೇಕು ಎಂದು ಮನವಿ ಮಾಡಿದರೂ ಕೇಂದ್ರ ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ. ಇಲ್ಲಿನ ಶಾಸಕರು ಹಾಗೂ ಸಂಸದರು ಈ ಕುರಿತು ಗಮನ ಹರಿಸಲೇ ಬೇಕಿದೆ ಎಂಬ ಒತ್ತಾಯ ಜನರಿಂದ ಕೇಳಿ ಬಂದಿದೆ.

**ಕೊಡಗಿನಲ್ಲಿ ದಿನ ಕಳೆದಂತೆ ಶ್ರವಣ ದೋಷವುಳ್ಳವರ ಸಂಖ್ಯೆ ಹೆಚ್ಚು**

ಶ್ರವಣದೋಷವುಳ್ಳವರ ಚಿಕಿತ್ಸೆ ಒಂದೆರಡು ದಿನಗಳಲ್ಲಿ ಮುಗಿಯುವಂತದ್ದಲ್ಲ. ಇದಕ್ಕೆ ನಿರಂತರವಾದ ಹಾಗೂ ನಿಯಮಿತವಾದ ಥೆರಪಿ ಬೇಕಾಗುತ್ತದೆ. ಈ ಬಗೆಯ ಚಿಕಿತ್ಸೆ ನೀಡುವ ದೇಶದ ಕೆಲವೇ ಕೆಲವು ಸಂಸ್ಥೆಗಳಲ್ಲಿ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯೂ ಒಂದು. ಈ ಬಗೆಯ ಸಂಸ್ಥೆ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಇಲ್ಲ.

ಶ್ರವಣದೋಷವುಳ್ಳ ಮಕ್ಕಳು, ಶ್ರವಣ ಸಮಸ್ಯೆ ಎದುರಿಸುತ್ತಿರುವ ಜನರು, ಮಾತನಾಡಲು ಸಮಸ್ಯೆ ಇರುವ ಮಕ್ಕಳು ಪ್ರತಿ ಬಾರಿಯೂ ಥೆರಪಿ ತೆಗೆದುಕೊಳ್ಳಲು ಮೈಸೂರಿಗೆ ಹೋಗಬೇಕಿತ್ತು. ಅದನ್ನು ತಪ್ಪಿಸಲು ಸಂಸ್ಥೆಯು ಕೆಲವೊಂದು ದೂರದ ಜಿಲ್ಲೆಗಳಲ್ಲಿ 'ಔಟ್‌ರೀಚ್' ಸೇವಾ ಕೇಂದ್ರಗಳನ್ನು ಆರಂಭಿಸಿತ್ತು.


☛ ಉದಯವಾಹಿನಿ ಚಿತ್ರ

**ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ (ಐಶ್) ಓಟ್‌ರೀಚ್ ಸೇವಾ ಕೇಂದ್ರವು ಮಡಿಕೇರಿಯ ಕೊಡಗು ವೈದ್ಯಕೀಯ ವಿಜ್ಞಾನಗಳ ಬೋಧಕ ಆಸ್ಪತ್ರೆಯಲ್ಲಿ ಜನರಿಗೆ ಅತ್ಯುತ್ತಮ ಸೇವೆ ನೀಡುತ್ತಿದೆ. ಇಂತಹ ಕೇಂದ್ರ ಮುಂದುವರಿಯಲು ಪ್ರಯತ್ನಿಸಲಾಗುತ್ತಿದೆ.-ಡಾ.ಶ್ವೇತಾ, ಕಿವಿ ಮೂಗು ಗಂಟಲು ವಿಭಾಗದ ಮುಖ್ಯಸ್ಥರು**

ಈ ಬಗೆಯ ಒಂದು ಔಟ್‌ರೀಚ್ ಸೇವಾ ಕೇಂದ್ರ ನಮ್ಮ ಕೊಡಗಿನಲ್ಲಿಯೂ ಇದೆ. ಕಳೆದ 5 ವರ್ಷಗಳಿಂದ ಜಿಲ್ಲಾಸ್ಪತ್ರೆಯಲ್ಲಿ ಈ ಕೇಂದ್ರ ಕಾರ್ಯಾಚರಣೆ ನಡೆಸುತ್ತಿದೆ.

ಇಲ್ಲಿಂದ ಜಿಲ್ಲೆಯ ಸಾವಿರಾರು ಮಂದಿ ಚಿಕಿತ್ಸೆ ಪಡೆದಿದ್ದಾರೆ. ಶ್ರವಣದೋಷವುಳ್ಳ ಮಕ್ಕಳಿಗೆ, ಶ್ರವಣ ಸಮಸ್ಯೆಗಳನ್ನು ಎದುರಿಸುತ್ತಿರುವ ಜನರಿಗೆ ಈ ಸಂಸ್ಥೆ ಸೂಕ್ತ ಚಿಕಿತ್ಸೆ ನೀಡಿದೆ. ಇದು ಹಲವರ ಬದುಕಿನ ಬೆಳಕಾಗಿದೆ. ಆದರೆ, ಇದರ ಒಪ್ಪಂದದ ಅವಧಿ ಮುಗಿದಿದೆ ಎಂಬ ಕಾರಣಕ್ಕೆ ಕೇಂದ್ರ ಮುಚ್ಚುವ ಭೀತಿ ಎದುರಾಗಿದೆ.

ಈ ನಡುವೆ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧಿಕಾರಿಗಳು ಒಂದು ವೇಳೆ ಈ ಕೇಂದ್ರ ಮುಚ್ಚಿದರೂ, ಆಡಿಯೊಲಜಿಸ್ಟ್ ಸೇರಿದಂತೆ ಇತರ ತಜ್ಞರನ್ನು ನೇಮಕ ಮಾಡಿಕೊಂಡು ಸೇವೆ ಮುಂದುವರಿಸಲಾಗುವುದು ಎಂದು ಹೇಳುತ್ತಾರೆ.

ಆದರೆ, ಐಶ್‌ನ ಔಟ್‌ರೀಚ್ ಸೇವಾ ಕೇಂದ್ರ ಕೇವಲ ಥೆರಪಿಗಳನ್ನು ಮಾತ್ರವಲ್ಲ ದುಬಾರಿ ಬೆಲೆಯ ಶ್ರವಣ ಯಂತ್ರಗಳನ್ನು ಅತ್ಯಂತ ಕನಿಷ್ಠ ಬೆಲೆಗೆ ಪೂರೈಸುತ್ತಿದೆ. ಜೊತೆಗೆ, ಆಟಿಸಂಪೀಡಿತ ಮಕ್ಕಳಿಗೆ ಸ್ಪಷ್ಟವಾಗಿ ಮಾತನಾಡಲು ಥೆರಪಿಗಳನ್ನು ನೀಡುತ್ತಿದೆ.

ಈ ಎಲ್ಲಾ ಕಾರಣಗಳಿಂದ ಈ ಔಟ್ ರೀಚ್ ಸೇವಾ ಕೇಂದ್ರ ಮುಚ್ಚಬಾರದು ಎಂಬ ಒತ್ತಾಯ ಜನರಿಂದ ಕೇಳಿ ಬಂದಿದೆ.

**ಮುಚ್ಚಲು ತೀರ್ಮಾನ**

**ಈಗಾಗಲೇ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಈ ಕೇಂದ್ರವನ್ನು ಮುಚ್ಚಬಾರದು, ಮುಂದುವರಿಸಬೇಕು. ಇದರ ಅಗತ್ಯತೆ ಕೊಡಗಿಗೆ ಇದೆ ಎಂದು ಒತ್ತಾಯಿಸಿ ಬರೆದ ಪತ್ರಕ್ಕೆ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಸಮರ್ಪಕವಾಗಿ ಸ್ಪಂದಿಸಿಲ್ಲ. ಮಾತ್ರವಲ್ಲ, ಈ ಔಟ್‌ರೀಚ್ ಸೇವಾ ಕೇಂದ್ರವನ್ನು ಮುಚ್ಚಲು ಬಹುತೇಕ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.**

# ಮಿನಿ ನ್ಯೂಸ್

## ಬಾವಿಯಲ್ಲಿ ವ್ಯಕ್ತಿ ಶವ ಪತ್ತೆ

**• ಉದಯವಾಹಿನಿ, ಮುಳಬಾಗಿಲು**

ಖಾದ್ರಿಪುರ ಬಾವಿಯಲ್ಲಿ ಬೆಳಗ್ಗೆ ವ್ಯಕ್ತಿಯೊಬ್ಬರ ಶವ ಪತ್ತೆಯಾಗಿದೆ. ಈ ಸಂಬಂಧ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬಾವಿಯಲ್ಲಿರುವ ಶವವನ್ನು ಕೆಜಿಎಫ್ ತಾಲ್ಲೂಕಿನ ಗೆನ್ನೇರಹಳ್ಳಿಯ ಸೋಮಶೇಖರ್ (40) ಎಂದು ಗುರುತಿಸಲಾಗಿದೆ.

ಈ ವ್ಯಕ್ತಿಯ ಶವವನ್ನು ದೊಡ್ಡ ಗಾತ್ರದ ಕಲ್ಲಿಗೆ ಹಗ್ಗದಿಂದ ಕಟ್ಟಿ ಬಾವಿಯಲ್ಲಿ ಬಿಸಾಡಿದಂತೆ ಕಂಡುಬಂದಿದೆ. 10 ದಿನಗಳ ಹಿಂದೆ ಈ ಘಟನೆ ನಡೆದಿರಬಹುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರವಿಶಂಕರ್, ಡಿವೈಎಸ್‌ಪಿ ಡಿ.ಸಿ.ನಂದಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಸತೀಶ್, ಸಬ್‌ಇನ್ಸ್‌ಪೆಕ್ಟರ್ ವಿಠಲ್ ವೈ. ತಳವಾರ್ ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಿದರು.

## ಸಿದ್ದರಾಮಯ್ಯ 5 ವರ್ಷ ಸಿ.ಎಂ ಆಗಿರಲಿ ಬಿಜೆಪಿ ಮುಖಂಡ ವರ್ತೂರು ಪ್ರಕಾಶ್

**• ಉದಯವಾಹಿನಿ ಕೋಲಾರ**

ಈಚೆಗಿನ ರಾಜಕೀಯ ಬೇಸರ ತರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಮೇಲೆ ಪ್ರಕರಣ ದಾಖಲು ಮಾಡಿದ್ದು ನನಗೆ ನೋವುಂಟು ಮಾಡಿದೆ. ಈಗ ನಡೆಯುತ್ತಿರುವ ಧರ್ಮ ಯುದ್ಧದಲ್ಲಿ ಸಿದ್ದರಾಮಯ್ಯ ಗೆಲ್ಲುತ್ತಾರೆ. ಹಾಗಂತ ನಾನೇನೂ ಕಾಂಗ್ರೆಸ್‌ಗೆ ಹೋಗಲ್ಲ. ಆದರೆ, ನಾನು ಜಾತಿ ಪ್ರೇಮಿ. ಸಿದ್ದರಾಮಯ್ಯ ಅವರಿಗೆ ಮುಡಾ ಪ್ರಕರಣದಲ್ಲಿ ಕ್ಲೀನ್ ಚಿಟ್ ಸಿಗಲಿದ್ದು, ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ' ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ವರ್ತೂರು ಪ್ರಕಾಶ್ ತಿಳಿಸಿದರು.

ನಗರದಲ್ಲಿ ನಡೆದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಅವರು ಬಿಜೆಪಿ ಹಾಗೂ ಜೆಡಿಎಸ್ ಮುಖಂಡರ ಸಮ್ಮುಖದಲ್ಲಿ ಅವರು ಸಿದ್ದರಾಮಯ್ಯ ಅವರನ್ನು ಕೊಂಡಾಡಿದರು. 'ಸಿದ್ದರಾಮಯ್ಯ ಅವರಿಗೆ ಸ್ವಂತ ಮನೆ ಇಲ್ಲ. ಇನ್ನು ನಿವೇಶನ ತಿನ್ನುತ್ತಾರಾ? ಅವರ ಅಣ್ಣತಮ್ಮಂದಿರು ಚಡ್ಡಿಯಲ್ಲಿ ಇರುತ್ತಾರೆ. ಸಿದ್ದರಾಮಯ್ಯ ಬಿಟ್ಟರೆ ಕಾಂಗ್ರೆಸ್ ಇಲ್ಲ. ಅವರಿಲ್ಲದಿದ್ದರೆ ಕಾಂಗ್ರೆಸ್ ಶೂನ್ಯ ಎಂದರು. ನಾನು ಯಾರಿಗೂ ಕೇರ್ ಮಾಡಲ್ಲ. ನನಗೆ ಬೇಕಿರುವುದು ಜಾತಿ ಮಾತ್ರ. ನನ್ನ ಜಮೀನು ಕೂಡ ವಕ್ಫ್ ಎಂದು ನಮೂದಾಗಿದೆ' ಎಂದು ಹೇಳಿದರು.

## ಕಾಲುಜಾರಿ ಬಿದ್ದು ತಂದೆ ಮಗಳು ಸಾವು

**• ಉದಯವಾಹಿನಿ ತುಮಕೂರು**

ಜಿಲ್ಲೆಯಲ್ಲಿ ಧಾರುಣ ಘಟನೆಯೊಂದು ನಡೆದಿದೆ. ಕರೆಗೆ ಕಾಲು ಜಾರಿ ಬಿದ್ದಂತ ಮಗಳನ್ನು ರಕ್ಷಣೆ ಮಾಡೋದಕ್ಕೆ ಇಳಿದಂತ ತಂದೆಯೂ ನೀರಲ್ಲಿ ಮುಳುಗಿ ಸಾವನ್ನಪ್ಪಿರುವಂತ ಘಟನೆ ನಡೆದಿದೆ. ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ತುಂಬಾಡಿ ಗ್ರಾಮಕ್ಕೆ ಬೆಂಗಳೂರಿನ ಶಿವಾಜಿನಗರದಿಂದ ಸಂಬಂಧಿಕರ ಮನೆಗೆ ಫಿರ್ದೋಸ್ ಹಾಗೂ ಮಗಳು ಆಯಿಜಾ ತೆರಳಿದ್ದರು. ತುಂಬಾಡಿಯಲ್ಲಿನ ಕೆರೆಯನ್ನು ನೋಡೋದಕ್ಕೆ ತೆರಳಿದ್ದಾಗ 6 ವರ್ಷದ ಆಯಿಜಾ ಕಾಲು ಜಾರಿ ಬಿದ್ದಿದ್ದಳು. ಮಗಳನ್ನು ರಕ್ಷಣೆ ಮಾಡುವುದಕ್ಕೆ ತಂದೆ ಫಿರ್ದೋಸ್ ಕೂಡ ನೀರಿಗೆ ಇಳಿದಿದ್ದರು. ಈ ವೇಳೆ ಕೆರೆಯ ನೀರು ಆಳವಿದ್ದ ಕಾರಣ, ಇಬ್ಬರೂ ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೊರಟಗೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವ್ಯಾಪಾರಿಗೆ 80 ಲಕ್ಷ ವಂಚನೆ

**• ಉದಯವಾಹಿನಿ ರಾಮನಗರ**

ಆನ್‌ಲೈನ್ ವಂಚಕರ ಬಲೆಗೆ ಸಿಲುಕಿದ ನಗರದ ವ್ಯಾಪಾರಿಯೊಬ್ಬರು ಬರೋಬ್ಬರಿ 80 ಲಕ್ಷ ರೂಪಾಯಿ ಕಳೆದುಕೊಂಡಿದ್ದಾರೆ. ಈ ಕುರಿತು ನಗರದ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ಕೂರಂ ಪಾಷಾ ವಂಚಕರ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡ ವ್ಯಾಪಾರಿ. ವಂಚಕರು ವ್ಯಾಪಾರಿಯ ಮೊಬೈಲ್ ನಂಬರ್ ಪಡೆದು ವಾಟ್ಸ್ ಆಪ್ ಗ್ರೂಪ್‌ಗೆ ಸೇರಿಸಿದ್ದರು.

ಅದರಲ್ಲಿ ಜೆರೋದಾ ಓಟಿಸಿ ಅಕೌಂಟ್ ಮಾಡಿಸಿದರು. ಅದರಲ್ಲಿ ಬಂದ ಸೂಚನೆ ಅನುಸರಿಸಿದ ವ್ಯಾಪಾರಿಯು ಟ್ರೇಡಿಂಗ್‌ಗಾಗಿ ವಂಚಕರು ತಿಳಿಸಿದ ವಿವಿಧ ಬ್ಯಾಂಕ್ ಅಕೌಂಟ್ ನಂಬರ್‌ಗಳಿಗೆ ಹಂತಹಂತವಾಗಿ 80,34,563 ಹಣ ಹಾಕಿದ್ದಾರೆ. ಕೊನೆಗೆ ಮೋಸ ಹೋಗಿರುವುದು ಗೊತ್ತಾಗಿ ವಂಚಕರ ವಿರುದ್ಧ ನಗರದ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ನಿರ್ವಹಣೆ ಇಲ್ಲದ ಕಂದಾಯ ಭವನ ಗೋಡೆಗಳಲ್ಲಿ ಗಿಡಗಳು ಬೆಳೆದು ಬಿರುಕು

**• ಉದಯವಾಹಿನಿ, ಶಿಡ್ಲಘಟ್ಟ**

ಬ್ರಿಟ್ರಿಷರ ಕಾಲದಲ್ಲಿ ನಿರ್ಮಾಣವಾದ ಶತಮಾನ ಕಂಡ ನಗರದ ಹೃದಯ ಭಾಗದಲ್ಲಿರುವ ಪಾರಂಪರಿಕ ಕಟ್ಟಡಕ್ಕೆ ಕಾಯಕಲ್ಪ ನೀಡುವ ಅಗತ್ಯವಿದೆ. ಸ್ವಾತಂತ್ರ್ಯ ಹೋರಾಟಕ್ಕೆ ಕಿಚ್ಚು ಹಚ್ಚಿ ಧ್ವಜ ಸತ್ಯಾಗ್ರಹ ಹೋರಾಟಕ್ಕೆ ಸಾಕ್ಷಿಯಾಗಿದ್ದ ಈ ಐತಿಹಾಸಿಕ ಕಟ್ಟಡವನ್ನು ಪಾರಂಪಾರಿಕ ತಾಣವಾಗಿ ಉಳಿಸುವ ಕೆಲಸ ಆಗಬೇಕಿದೆ. ಈ ಪುರಾತನ ಕಟ್ಟಡವನ್ನು 1917ರಲ್ಲಿ ಕಟ್ಟಲಾಗಿತ್ತು. ಇದು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ತಾಲ್ಲೂಕು ಆಡಳಿತ ಕಚೇರಿಯಾಗಿತ್ತು. ಸ್ವಾತಂತ್ರ್ಯಾ ನಂತರ ಇದೇ ಕಟ್ಟಡದ ಒಂದು ಭಾಗದಲ್ಲಿ ಪೋಲೀಸ್ ಸ್ಟೇಷನ್ ಮತ್ತು ಇನ್ನೊಂದು ಭಾಗದಲ್ಲಿ ತಾಲ್ಲೂಕು ಕಚೇರಿ ಕಾರ್ಯನಿರ್ವಹಿಸುತ್ತಿತ್ತು. ಹೊಸ ಕಟ್ಟಡಕ್ಕೆ ಪೋಲೀಸ್ ಸ್ಟೇಷನ್ ವರ್ಗಾವಣೆ ಅಯಿತು.

ಮಿನಿ ವಿಧಾನಸೌಧವಾದ ಮೇಲೆ ಆಡಳಿತ ಕಚೇರಿಯೂ ಅಲ್ಲಿಗೆ ಹೋಯಿತು. ಆಗ ಸ್ವಂತ ಕಟ್ಟಡವಿರದಿದ್ದರಿಂದ ನ್ಯಾಯವಾದಿಗಳ ವಶಕ್ಕೆ ಈ ಕಟ್ಟಡ ಬಂತು. ನ್ಯಾಯಾಲಯಕ್ಕೂ ಹೊಸ ಕಟ್ಟಡ ಬಂದ ನಂತರ ಇದೀಗ ಕಂದಾಯ ಭವನವಾಗಿದೆ.ಆದರೆ, ಈಗ ತಾಲ್ಲೂಕು ಆಡಳಿತದ ನಿರ್ಲಕ್ಷ್ಯದಿಂದ ಕಂದಾಯ ಭವನ ಅವಸಾನದ ಹಂಚಿಗೆ ತಲುಪಿದೆ. ಧ್ವಜ ಸತ್ಯಾಗ್ರಹ ಹೋರಾಟ ನಡೆಸುವಾಗ ಭಕ್ತರಹಳ್ಳಿಯ ಇಬ್ಬರು ಸ್ವಾತಂತ್ರ್ಯ ಹೋರಾಟಗಾರರು ಪ್ರಾಣ ತೆತ್ತಿದ್ದರು. ಅಂತಹ ವಿಶೇಷವಾದ ಈ ಕಟ್ಟಡ ಈಗ ನಿರ್ಲಕ್ಷ್ಯಕ್ಕೊಳಗಾಗಿದ್ದು ದೇಶಾಭಿಮಾನಿಗಳಿಗೆ ನೋವು ತಂದಿದೆ.


☛ ಉದಯವಾಹಿನಿ ಚಿತ್ರ


ಅಂತರಾಳದಿಂದ.. EDITORIAL

# ವಿಶ್ವಸಂಸ್ಥೆಯ ಸುಧಾರಣೆ ಸಾಧ್ಯವೇ?

ಹೊಲಗಳಲ್ಲಿ ಗದ್ದೆಗಳನ್ನು ರಕ್ಷಿಸಲು ಬೆರ್ಚಪ್ಪನನ್ನು ನಿಲ್ಲಿಸುವುದು ಸಾಮಾನ್ಯ. ಇವುಗಳಿಗೆ ಬೆದರಿ ಹಕ್ಕಿಗಳು ತಾವಾಗಿ ಸುಳಿಯದೇ ಇದ್ದರೆ ಸರಿ. ಆದರೆ ಹೆಚ್ಚಿನ ಸಂದರ್ಭದಲ್ಲಿ ಈ ಬೆರ್ಚಪ್ಪನ ತಲೆಯ ಮೇಲೆಯೇ ಹಕ್ಕಿಗಳು ಬಂದು ಕುಳಿತು ಹಿಕ್ಕೆ ಹಾಕುತ್ತಿರುತ್ತವೆ. ಕೆಟ್ಟ ದೃಷ್ಟಿ ಬೀಳದಿರಲಿ ಎನ್ನುವ ಕಾರಣಕ್ಕೂ ಈ ಬೆರ್ಚಪ್ಪಗಳನ್ನು ಬೇರೆ ಬೇರೆ ರೂಪಗಳಲ್ಲಿ ಜನರು ಬಳಸುತ್ತಾ ಬಂದಿದ್ದಾರೆ. ಜಾಗತಿಕ ನೆಲೆಯಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳುವ ಮಹೋನ್ನತ ಜವಾಬ್ದಾರಿ ಹೊತ್ತಿರುವ ವಿಶ್ವಸಂಸ್ಥೆಗೆ ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುತ್ತಿಲ್ಲ ಎನ್ನುವುದು ಜಗಜ್ಜಾಹೀರಾಗಿದೆ ಅದಕ್ಕೆ ಬೇಕಾಗುವಷ್ಟು ಸಂಪನ್ಮೂಲವಾಗಲಿ, ಸಾಧನಗಳಾಗಲಿ ಅದರ ಬಳಿ ಇಲ್ಲ ಎನ್ನುವುದು ಅದರ ಸ್ಥಾಪನೆಯ ದಿನದಿಂದಲೇ ಸಾಬೀತಾಗಿದೆ. ಪರಿಣಾಮವಾಗಿ ಅದು ಅಮೆರಿಕದಂತಹ ದೇಶದ ಸಂಪನ್ಮೂಲಗಳನ್ನು ಅವಲಂಬಿತವಾಗಿದೆ. ಈ ಶ್ರೀಮಂತ ದೇಶಗಳ ಮುಂದೆ ವಿಶ್ವಸಂಸ್ಥೆ ಹಲ್ಲಿಲ್ಲದ ಹುಲಿ. ಬರೇ ಘರ್ಜನೆಗಷ್ಟೇ ಸೀಮಿತ. ಉಕ್ರೇನ್ ವಿರುದ್ಧ ರಷ್ಯಾ ಮಾಡುತ್ತಿರುವ ಯುದ್ಧ ಅದರಿಂದ ಉದ್ಭವಿಸಿರುವ ಪರಮಾಣು ಉದ್ವಿಗ್ನತೆ ಮತ್ತು ಫೆಲೆಸ್ತೀನ್ ಮೇಲೆ ಇಸ್ರೇಲ್ ನಡೆಸುತ್ತಿರುವ ಭೀಕರ ಬಾಂಬ್ ದಾಳಿಗಳು ವಿಶ್ವಸಂಸ್ಥೆಯ ಮಿತಿಗಳನ್ನು ಮತ್ತೊಮ್ಮೆ ಜಾಹೀರು ಮಾಡಿವೆ. ಜಾಗತಿಕ ಶಾಂತಿಯನ್ನು ಕಾಯ್ದುಕೊಳ್ಳುವ ಹೊಣೆಯನ್ನು ವಿಶ್ವಸಂಸ್ಥೆಯ ಘಟಕವಾದ ಭದ್ರತಾ ಮಂಡಳಿ ಹೊತ್ತಿದೆ. ಆದರೆ, ಜಾಗತಿಕ ಬಿಕ್ಕಟ್ಟುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ವಿಫಲವಾಗಿದೆ ಎಂಬ ಟೀಕೆಗಳನ್ನು ಅದು ಎದುರಿಸುತ್ತಿದೆ. ಹಾಗಾಗಿ, ಭದ್ರತಾ ಮಂಡಳಿಯ ಪ್ರಾತಿನಿಧ್ಯ ಮತ್ತು ನ್ಯಾಯಪರತೆಯನ್ನು ಹೆಚ್ಚಿಸಲು ಅದಕ್ಕೆ ಸುಧಾರಣೆಗಳನ್ನು ತರಬೇಕು ಎಂಬ ಬಡ ಮತ್ತು ಹಿಂದುಳಿದ ದೇಶಗಳ ದೀರ್ಘಕಾಲೀನ ಕರೆಗಳು ಈಗ ಮತ್ತೆ ಮುನ್ನೆಲೆಗೆ ಬಂದಿವೆ.ಆದರೆ, ಭದ್ರತಾ ಮಂಡಳಿಯ ಪ್ರಾತಿನಿಧ್ಯ ಹೆಚ್ಚಬೇಕು ಎಂಬ ವಿಷಯದಲ್ಲಿ ಸಹಮತವಿದ್ದರೂ, ಅಗತ್ಯವಿರುವ ಸುಧಾರಣೆಗಳ ಸ್ವರೂಪದ ಬಗ್ಗೆ ಆ ದೇಶಗಳ ನಡುವೆ ಒಮ್ಮತವಿಲ್ಲ ಬ್ರೆಝಿಲ್, ಜರ್ಮನಿ, ಭಾರತ ಮತ್ತು ಜಪಾನ್ ದೇಶಗಳನ್ನು ಒಳಗೊಂಡ ಜಿ4 ದೇಶಗಳು, ಆಫ್ರಿಕಾ ಒಕ್ಕೂಟ, ಅಭಿವೃದ್ಧಿಶೀಲ ದೇಶಗಳ ಎಲ್.69 ಗುಂಪು ಹಾಗೂ ಇಟಲಿ, ಪಾಕಿಸ್ತಾನ, ಮೆಕ್ಸಿಕೊ ಮತ್ತು ದಕ್ಷಿಣ ಕೊರಿಯಾ ಮುಂತಾದ ದೇಶಗಳ ನೇತೃತ್ವದ ಯುನೈಟಿಂಗ್ ಫಾರ್ ಕನ್ಸೆನ್ಸಸ್ ಗುಂಪು ಭದ್ರತಾ ಮಂಡಳಿಯ ಸುಧಾರಣೆಗೆ ಸಲಹೆಗಳನ್ನು ನೀಡಿವೆ. ಭದ್ರತಾ ಮಂಡಳಿಯ ಸುಧಾರಣೆ ಎಂದರೆ, ಸದಸ್ಯತ್ವವನ್ನು ಇತರ ದೇಶಗಳಿಗೆ ವಿಸ್ತರಿಸುವುದು ಮಾತ್ರವಲ್ಲ, ನ್ಯಾಯಪರತೆ, ಪ್ರಾತಿನಿಧ್ಯ ಮತ್ತು ಉತ್ತರದಾಯಿತ್ವ ಮುಂತಾದ ತತ್ವಗಳನ್ನು ಅಳವಡಿಸಿಕೊಳ್ಳಲು ಸಂಸ್ಥೆಯನ್ನು ಪುನರ್‌ರೂಪಿಸುವುದೂ ಆಗಿದೆ ಅಂತರ್‌ರಾಷ್ಟ್ರೀಯ ಸಮುದಾಯವನ್ನು ತಳಸ್ತರದಲ್ಲಿ ಪ್ರತಿನಿಧಿಸುವ ಸುಧಾರಿತ ಭದ್ರತಾ ಮಂಡಳಿಯೊಂದು ಹೆಚ್ಚು ಪರಿಣಾಮಕಾರಿಯಾಗಿ ಶಾಂತಿಯನ್ನು ಎತ್ತಿಹಿಡಿಯಬಲ್ಲದು, ಜಾಗತಿಕ ಬೆದರಿಕೆಗಳನ್ನು ನಿಭಾಯಿಸಬಲ್ಲದು ಮತ್ತು ಜಾಗತಿಕ ಆಡಳಿತದಲ್ಲಿ ವಿಶ್ವಸಂಸ್ಥೆಯ ಪಾತ್ರವನ್ನು ಬಲವಾಗಿ ಸ್ಥಾಪಿಸಬಲ್ಲದು.1946ರಲ್ಲಿ ಸ್ಥಾಪನೆಯಾದ ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಐದು ಖಾಯಂ ಸದಸ್ಯರಿದ್ದಾರೆ– ಅಮೆರಿಕ, ಬ್ರಿಟನ್, ಫ್ರಾನ್ಸ್, ರಷ್ಯ ಮತ್ತು ಚೀನಾ. ಈ ದೇಶಗಳಿಗೆ ವೀಟೊ ಅಧಿಕಾರವಿದೆ. ಮಂಡಳಿಯಲ್ಲಿ 10 ತಾತ್ಕಾಲಿಕ ಸದಸ್ಯ ದೇಶಗಳಿವೆ. ಅವುಗಳನ್ನು ಎರಡು ವರ್ಷಗಳ ಅವಧಿಗೆ ಆರಿಸಲಾಗುತ್ತದೆ.ಇವು ಹಾಲಿ ಅಂತರ್ ರಾಷ್ಟ್ರೀಯ ಸಮುದಾಯವನ್ನು ಪ್ರತಿನಿಧಿಸುವುದಿಲ್ಲ ಎಂಬ ಟೀಕೆಗಳಿವೆ. ವಿಶ್ವಸಂಸ್ಥೆಯ ಸದಸ್ಯರ ಪೈಕಿ ಹೆಚ್ಚಿನ ದೇಶಗಳು ಆಫ್ರಿಕಾ, ಏಷ್ಯ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳಾದರೂ ಆ ಖಂಡಗಳಿಗೆ ಪ್ರಾತಿನಿಧ್ಯ ತೀರಾ ಕಡಿಮೆ ಇದೆ. ಇದು ಜಾಗತಿಕ ಸವಾಲುಗಳನ್ನು ನಿಭಾಯಿಸುವಲ್ಲಿ ಭದ್ರತಾ ಮಂಡಳಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಐದು ದೇಶಗಳು ಹೊಂದಿರುವ ವೀಟೊ ಅಧಿಕಾರವು ಟೀಕೆಗಳ ಕೇಂದ್ರ ಬಿಂದುವಾಗಿದೆ. ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗ ವೀಟೊ ಅಧಿಕಾರದ ಏಕಪಕ್ಷೀಯ ಬಳಕೆಯಿಂದಾಗಿ ಭದ್ರತಾ ಮಂಡಳಿಗೆ ಜಾಗತಿಕ ದರ್ಜೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಬಲಿಷ್ಠ ರಾಷ್ಟ್ರಗಳು ದುರ್ಬಲ ದೇಶಗಳ ಮೇಲೆ ದಾಳಿ ನಡೆಸಿದಾಗ ಮಧ್ಯಪ್ರವೇಶ ಮಾಡಲು ವಿಶ್ವಸಂಸ್ಥೆಗೆ ಸಾಧ್ಯವಾಗುತ್ತಿಲ್ಲ. ಉಕ್ರೇನ್‌ನಲ್ಲಿನ ತನ್ನ ಕೃತ್ಯಗಳನ್ನು ಖಂಡಿಸುವ ಭದ್ರತಾ ಮಂಡಳಿಯ ನಿರ್ಣಯಗಳಿಗೆ ರಷ್ಯ ವೀಟೊ ಚಲಾಯಿಸಿದ ಪರಿಣಾಮ, ಭದ್ರತಾ ಮಂಡಳಿ ಅಸಹಾಯಕವಾಯಿತು. ಅದೇ ರೀತಿ ಇಸ್ರೇಲನ್ನು ಖಂಡಿಸುವ ಭದ್ರತಾ ಮಂಡಳಿಯ ನಿರ್ಣಯಗಳಿಗೆ ಅಮೆರಿಕವು ಐತಿಹಾಸಿಕವಾಗಿ ವೀಟೊ ಚಲಾಯಿಸುತ್ತಾ ಬಂದಿದೆ. ಇದು ಇಸ್ರೇಲ್–ಫೆಲೆಸ್ತೀನ್ ಸಂಘರ್ಷವನ್ನು ನಿವಾರಿಸುವ ಪ್ರಯತ್ನಗಳಿಗೆ ಅಡ್ಡಿಯಾಗಿದೆ.ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಗಳಿಂದ ಜಗತ್ತಿನ ದೊಡ್ಡ ಭಾಗವನ್ನು ಹೊರಗಿಟ್ಟರೆ ಅದು ಸಮಗ್ರ ಪರಿಹಾರಗಳನ್ನು ರೂಪಿಸುವ ಭದ್ರತಾ ಮಂಡಳಿಯ ಸಾಮರ್ಥ್ಯವನ್ನು ಸಹಜವಾಗಿಯೇ ಕ್ಷೀಣಿಸುತ್ತದೆ. ಬ್ರೆಝಿಲ್, ಜರ್ಮನಿ, ಭಾರತ ಮತ್ತು ಜಪಾನ್ ದೇಶಗಳನ್ನು ಒಳಗೊಂಡ ಜಿ4 ಗುಂಪು ಖಾಯಂ ಮತ್ತು ತಾತ್ಕಾಲಿಕ ಎರಡೂ ಸ್ಥಾನಗಳಲ್ಲಿ ವಿಸ್ತರಣೆಯಾಗಬೇಕೆಂದು ಹೇಳುತ್ತದೆ. ಖಾಯಂ ಸದಸ್ಯತ್ವಕ್ಕೆ ತಾವೇ ಅಭ್ಯರ್ಥಿಗಳು ಎಂದು ಆ ದೇಶಗಳು ಹೇಳುತ್ತವೆ. ಆದರೆ, ಆ ದೇಶಗಳ ಪ್ರಾದೇಶಿಕ ಎದುರಾಳಿಗಳು ಮತ್ತು ಇತರ ಸದಸ್ಯ ದೇಶಗಳು ಅವುಗಳ ಪ್ರಸ್ತಾವವನ್ನು ವಿರೋಧಿಸುತ್ತವೆ. ಅಧಿಕಾರ ಸಮತೋಲನದಲ್ಲಿ ಏರುಪೇರು ಆಗಬಹುದು ಎನ್ನುವುದು ಎದುರಾಳಿ ದೇಶಗಳ ಆತಂಕವಾಗಿದೆ. ಆಫ್ರಿಕಾದ ದೇಶಗಳಿಗೆ ವೀಟೊ ಅಧಿಕಾರ ಇರುವ ಎರಡು ಖಾಯಂ ಸ್ಥಾನಗಳು ಮತ್ತು ಐದು ತಾತ್ಕಾಲಿಕ ಸ್ಥಾನಗಳು ಬೇಕೆಂದು ಆಫ್ರಿಕನ್ ಯೂನಿಯನ್ ಹೇಳುತ್ತದೆ. ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಕರಿಬಿಯನ್, ಏಷ್ಯ ಮತ್ತು ಪೆಸಿಫಿಕ್‌ನ ಅಭಿವೃದ್ಧಿಶೀಲ ದೇಶಗಳನ್ನು ಪ್ರತಿನಿಧಿಸುವ ಎಲ್.69 ಗುಂಪು, ಖಾಯಂ ಮತ್ತು ತಾತ್ಕಾಲಿಕ ಎರಡು ಸದಸ್ಯತ್ವಗಳನ್ನು ವಿಸ್ತರಿಸಬೇಕು ಹಾಗೂ ಸಣ್ಣ ದ್ವೀಪ ರಾಷ್ಟ್ರಗಳು ಮತ್ತು ಕಡಿಮೆ ಪ್ರಾತಿನಿಧ್ಯ ಇರುವ ದೇಶಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಒದಗಿಸಬೇಕು ಎಂದು ಒತ್ತಾಯಿಸಿದೆ.

> **ಸದ್ಯಕ್ಕೆ ಜಗತ್ತು ಮೂರನೇ ಮಹಾಯುದ್ಧದ ಕಡೆಗೆ ದಾಪುಗಾಲಿಡುತ್ತಿರುವ ಸಂದರ್ಭದಲ್ಲಿ ವಿಶ್ವಸಂಸ್ಥೆ ಈ ಬೆರ್ಚಪ್ಪನ ಪಾತ್ರಕ್ಕೆ ಸೀಮಿತವಾಗುತ್ತಿರುವುದು ನಿಜಕ್ಕೂ ಆತಂಕಕಾರಿಯಾಗಿದೆ. ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳ ಮುಂದೆ ವಿಶ್ವಸಂಸ್ಥೆಯ ಯಾವುದೇ ಎಚ್ಚರಿಕೆಗಳು, ಕಳವಳಗಳು ಬರೇ ಆಕ್ರಂದನದಂತೆ ಕೇಳುತ್ತವೆ. ಈ ಕಾರಣದಿಂದಲೇ ವಿಶ್ವ ಸಂಸ್ಥೆಯಲ್ಲಿ ಸುಧಾರಣೆಯಾಗಬೇಕು ಎನ್ನುವ ಕೂಗು ಬಲ ಪಡೆಯುತ್ತಿದೆ.**

# ರಾಮಾಯಣ



**ಸಗರ ಕುಮಾರರು ಕಪಿಲ ಮುನಿಯಿಂದ ಭಸ್ಮವಾದದ್ದು**

• ಹಿಂದಿನ ಸಂಚಿಕೆಯಿಂದ **26 ನೆಯ ಅಧ್ಯಾಯ**

ಆಮೇಲೆ ಬ್ರಹ್ಮದೇವನು ದೇವತೆಗಳ ವಾಕ್ಯವನ್ನು ಕೇಳಿ ' ಎಲೈ ದೇವತೆಗಳಿರಾ, ಈ ಭೂಮಿಯು ಪರಮಪುರುಷನಾದ ನಾರಾಯಣನ ಪತ್ನಿಯು ಆತನು ಇದಕ್ಕೆ ತಕ್ಕ ಉಪಾಯವನ್ನು ಮಾಡುವನು. ನಾರಾಯಣನು ಕಪಿಲಮುನೀಶ್ವರನ ಸ್ವರೂಪದಿಂದ ಪಾತಾಳಲೋಕದಲ್ಲಿದ್ದಾನೆ, ಈ ಜಗತ್ತಿಗೆ ಕರ್ತನಾದ ನಾರಾಯಣನು ನಮಗೆಲ್ಲರಿಗೂ ಕರ್ತನು. ಆತನ ಕೋಪಾಗ್ನಿಯಿಂದ ಸಗರಚಕ್ರವರ್ತಿಯ ಮಕ್ಕಳು ದಗ್ಧರಾಗುವರು ಎಂದು ಹೇಳಿದನು. ಆ ಮಾತನ್ನು ಕೇಳಿ ಸಮಸ್ತ ದೇವತೆಗಳೂ ತಮ್ಮ ತಮ್ಮ ಲೋಕಗಳಿಗೆ ಹೋದರು. ಇತ್ತ ಅಗ್ನಿಸಮಾನರೂ ಮಹಾಬಲವಂತರೂ ಮಹಾತ್ಮರೂ ಆದ ಸಗರಚಕ್ರವರ್ತಿಯ ಮಕ್ಕಳು ಅರವತ್ತು ಸಾವಿರಮಂದಿಯು ಎಲ್ಲಿಯೂ ಕುದುರೆಯನ್ನು ಕಾಣದೆ ಬೊಬ್ಬಿಡುತ್ತ ಭೂಮಿ ಯನ್ನು ಅಗೆದು ಪಾತಾಳಲೋಕವನ್ನು ಹೊಕ್ಕು ನಾನಾದಿಕ್ಕಿನಲ್ಲಿಯೂ ತಿರುಗಿ ಕುದುರೆಯನ್ನು ಕಾಣದೆ ತಮ್ಮ ತಂದೆಯಾದ ಸಗರಚಕ್ರವರ್ತಿಯ ಸಮೀಪಕ್ಕೆ ಬಂದು ನಮಸ್ಕರಿಸಿ ' ಎಲೈ ತಂದೆಯೇ, ಸಮಸ್ತ ಭೂಮಂಡಲವನ್ನೂ ಹುಡುಕಿದೆವು ; ನಮಗೆದುರಾಗಿ ಬಂದ ಬಲವಂತರಾದ ದೇವದಾನವ ಕಿನ್ನರ ಕಿಂಪುರುಷರನ್ನು ಗೆದ್ದು ನಾಶಪಡಿಸಿದೆವು ಎಲ್ಲಿಯೂ ಕುದುರೆಯನ್ನು ಕಾಣಲಿಲ್ಲ ; ಇನ್ನು ನಾವು ಮಾಡುವ ಕಾರವಾವುದು ' ಎಂದು ಬಿನ್ನಹಮಾಡಿದರು. ಸಗರಚಕ್ರವರ್ತಿಯು ಕೋಪ ಯುಕ್ತನಾಗಿ ಅವರನ್ನು ಕುರಿತು ಇನ್ನು ಭೂಮಿಯನ್ನು ನಾಲ್ಕುದಿಕ್ಕಿನಲ್ಲಿಯೂ ಅಗೆದು ಕುದುರೆ 4 ಯನ್ನು ಹಿಡಿದುಕೊಂಡು ಹೋದವನು ಎಲ್ಲಿದ್ದರೂ ಆತನನ್ನು ಹಿಡಿದು ಕಾವ್ಯವನ್ನು ಸಾಧಿಸಿರಿ' ಎಂದು ಆಜ್ಞಾಪಿಸಿದನು, ಸಗರಚಕ್ರವರ್ತಿಯ ಮಾತನ್ನು ಕೇಳಿ ಆ ಅರವತ್ತು ಸಾವಿರ ಮಕ್ಕಳೂ ಭೂಮಿಯನ್ನು ಬಗೆದು ಪಾತಾಳಲೋಕವನ್ನು ಪ್ರವೇಶಿಸಿ ಅಲ್ಲಿ ಪರ್ವತಕ್ಕೆ ಸಮಾನವಾಗಿ ಭೂಮಿಯನ್ನು ಧರಿಸಿಕೊಂಡಿದ್ದ ವಿರೂಪಾಕ್ಷ ಎಂಬ ಆನೆಯನ್ನು ಕಂಡು ಆಶ್ಚರ್ಯಪಟ್ಟರು. ಆ ಆನೆಯು ಎಂದಾದರೂ ಒಂದು

### ಬಾಲಕಾಂಡ 41ನೆಯ ಅಧ್ಯಾಯ

ಸಾರಿ ಅಮಾವಾಸ್ಯೆ ಅಲ್ಲವೆ ಪೂರ್ಣಿಮೆ ಎಂಬ ಪರ್ವಕಾಲದಲ್ಲಿ ಶಿರಸ್ಸನ್ನು ಕೊಡಹಿದರೆ ಆ ಸಮಯದಲ್ಲಿ ಭೂಕಂಪವಾಗುವುದು. ಅಂಥ ಆನೆಯನ್ನು ಪ್ರದಕ್ಷಿಣಮಾಡಿ ಅಭಿವಂದಿಸಿ ಸಗರಪುತ್ರರು ಮೂಡಣ ದಿಕ್ಕಿನಿಂದ ತೆಂಕಣ ದಿಕ್ಕಿಗೆ ಪಾತಾಳವನ್ನು ಹೊಕ್ಕು ಆ ದಿಕ್ಕನ್ನು ಧರಿಸಿಕೊಂಡಿದ್ದ ಮಹಾಪದ್ಮ ಎಂಬ ಆನೆಯನ್ನು ಕಂಡು ವಿಸ್ಮಯಂಬಟ್ಟು ಅದಕ್ಕೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಅಲ್ಲಿಂದ ಪಡುವಣ ದಿಕ್ಕಿಗೆ ಬಂದು ಸೌಮನಸ ಎಂಬ ಗಜವನ್ನು ಕಂಡು ಅದಕ್ಕೂ ಪ್ರದಕ್ಷಿಣ ಸಮಸ್ಕಾರಗಳನ್ನು ಮಾಡಿ ಯೋಗಕ್ಷೇಮವನ್ನು ಕೇಳಿ, ಅಲ್ಲಿಂದ ಬೀಳ್ಕೊಂಡು ಬಡಗಣ ದಿಕ್ಕಿಗೆ ಬಂದು ಅಲ್ಲಿದ್ದ ಭದ್ರ ಎಂಬ ದಿಗ್ಗಜವನ್ನು ಕಂಡು ಅದಕ್ಕೂ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, **ಮುಂದುವರಿಯುವುದು...**

# ಕೃಷ್ಣನ ತಂದೆ ತಾಯಿಯರು: ವಸುದೇವ, ದೇವಕಿ...!



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಕೃಷ್ಣನ ತಂದೆ ತಾಯಿಯರು ವಸುದೇವ ದೇವಕಿ. ಜಗ ದೊಡೆಯನಾದ ಪರಮಾತ್ಮನ ತಂದೆ ತಾಯಿಯಾದರೂ, ಸೆರೆ ಮನೆವಾಸ ಅನುಭವಿಸಿದರು. ಹುಟ್ಟಿದ ಮಕ್ಕಳನ್ನೆಲ್ಲ ಕಳೆದುಕೊಂಡು ಸಂಕಟ ಅನುಭವಿಸಿದರು. ಭಗವಂತ ಶ್ರೀ ಕೃಷ್ಣನೇ ಹುಟ್ಟಿದ ಕ್ಷಣವೇ ಹೆತ್ತ ಕಂದನನ್ನು ಗೋಕುಲದಲ್ಲಿ ಬಿಟ್ಟು ಮಗುವನ್ನು ಎತ್ತಿ ಆಡಿಸುವ ಸೌಭಾಗ್ಯ ಅವರಿಗೆ ಇಲ್ಲವಾಯಿತು. ಹೀಗೆಲ್ಲಾ ಆಗಲು ಕಾರಣ ಅವರ ಪೂರ್ವ ಜನ್ಮದ ಕರ್ಮಫಲ.ವಸುದೇವ ಮತ್ತು ದೇವಕಿ ಪೂರ್ವ ಜನ್ಮದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾದ ಕಶ್ಯಪ ಮಹರ್ಷಿ ಮತ್ತು ಅದಿತಿಯರಾಗಿದ್ದರು. ಇವರ ಮಕ್ಕಳು ವರುಣ ಮತ್ತು ಗರುಡ. ವರುಣನು ಸೂರ್ಯನಿಗೆ ಸಾರಥಿಯಾಗಿದ್ದನು ಹಾಗೂ ಬ್ರಹ್ಮನ ಅಷ್ಟದಿಕ್ಪಾಲಕರಲ್ಲಿ ಒಬ್ಬನಾಗಿ ಸಮುದ್ರದ ದೇವತೆಯಾಗಿದ್ದನು. ಒಮ್ಮೆ ಮಗನನ್ನು ನೋಡಬೇಕೆಂಬ ಆಸೆಯಾಗಿ ವರುಣನ ಮನೆಗೆ ಬಂದರು. ಅವನ ಮನೆಯಲ್ಲಿ ಬೇಕಾದಷ್ಟು ಹಸುಗಳಿದ್ದು ಅವು ಅಮೃತದಷ್ಟೇ ಸಿಹಿ ಯಾದ ಹಾಲನ್ನು ಯಥೇಚ್ಛವಾಗಿ ಕೊಡುತ್ತಿದ್ದವು. ಅವುಗಳನ್ನು ಬ್ರಹ್ಮನು ವರುಣನಿಗೆ ಕೊಟ್ಟಿದ್ದನು.

ಇದೆಲ್ಲ ತಿಳಿಯದ ಅದಿತಿ ಅಲ್ಲಿರುವ ಗೋ ಸಂಪತ್ತನ್ನು ನೋಡಿ ಮುದ್ದಾದ ಹಸುಗಳ ಮೇಲೆ ಆಸೆಯಾಯಿತು .ಅವಳು ಕಶ್ಯಪರಿಗೆ ಹೇಳಿದಳು ನಾವು ಈ ಹಸುಗಳನ್ನು ನಮ್ಮ ಮನೆಗೆ ತೆಗೆದುಕೊಂಡು ಹೋಗೋಣ ಎಂದು ಅದಕ್ಕೆ ಅವರು ನಮ್ಮ ಮನೆಯಲ್ಲಿ ಬೇಕಾದಷ್ಟು ಗೋ ಸಂಪತ್ತು ಇದೆಯಲ್ಲ ಇದು ಏಕೆ ಎಂದು ಕೇಳಿದಾಗ ಅದಿತಿ ಹೇಳಿದಳು ಇವುಗಳಷ್ಟು ಲಕ್ಷಣವಾದ, ಅಮೃತದಂಥ ಹಾಲು ಕೊಡುವ ಹಸುಗಳನ್ನು ನಾನು ನೋಡೇ ಇರಲಿಲ್ಲ. ವರುಣ ಏನು ಬೇರೆ ಅಲ್ಲ ನಮ್ಮ ಸ್ವಂತ ಮಗ ಆದುದರಿಂದ ಅವನನ್ನು ಕೇಳುವುದು ಬೇಡ ಹಸುಗಳನ್ನು ತೆಗೆದುಕೊಂಡು ಹೋಗೋಣ ಎಂದಳು. ಕಶ್ಯಪರಿಗೂ ಅದು ಸರಿ ಎನಿಸಿತು. ಒಂದು ದಿನ ವರುಣ ಮನೆಯಲ್ಲಿ ಇರಲಿಲ್ಲ. ಅದೇ ದಿನವೇ ಕಶ್ಯಪ ಮತ್ತು ಅದಿತಿಯರು ಅವನ ಮನೆಯಲ್ಲಿದ್ದ ಹಸುಗಳನ್ನೆಲ್ಲ ತೆಗೆದುಕೊಂಡು ತಮ್ಮ ಆಶ್ರಮಕ್ಕೆ ಬಂದರು. ಇತ್ತ ವರುಣ ಮನೆಗೆ ಬಂದು ನೋಡುತ್ತಾನೆ ಗೋವು ಗಳು ಇಲ್ಲದಿರುವದನ್ನು ಕಂಡು ಅವನಿಗೆ ಬೇಸರವಾಗುತ್ತದೆ. ಮತ್ತು ತನ್ನ ತಂದೆ- ತಾಯಿ ಯರೇ ಅವುಗಳನ್ನು ತೆಗೆದುಕೊಂಡು ಹೋದ ರೆಂದು ಅವನಿಗೆ ತಿಳಿಯುತ್ತದೆ.


> **ಪೂರ್ವ ಜನ್ಮದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾದ ಕಶ್ಯಪ ಮಹರ್ಷಿ**

ತಂದೆಯ ಹತ್ತಿರ ಬಂದು, ತಂದೆಯೇ ನನ್ನ ಮನೆಯಲ್ಲಿದ್ದ ವಿಶೇಷವಾದ ಗೋ ಸಂಪತ್ತು ನನ್ನದಲ್ಲ ನನಗೆ ಬ್ರಹ್ಮ ದೇವರು ಕೊಟ್ಟಿದ್ದು, ಅವುಗಳು ಇಲ್ಲದೆ ಹೋದರೆ ನನ್ನ ಯಜ್ಞ- ಯಾಗಗಳನ್ನು ಮಾಡಲು ಆಗುವುದಿಲ್ಲ ಅವುಗಳನ್ನು ಕೊಟ್ಟು ಬಿಡಿ ಎಂದು ನಮ್ರತೆಯಿಂದ ಕೇಳಿದನು.

ಆದರೆ ಆ ಸುಂದರವಾದ ಗೋ ಸಂಪತ್ತಿನ ಮೋಹಕ್ಕೆ ಒಳಗಾಗಿದ್ದ ಕಶ್ಯಪ ಮುನಿಗಳು ಅವುಗಳನ್ನು ಹಿಂತಿರುಗಿಸಲು ಒಪ್ಪಲಿಲ್ಲ. ವರುಣನು ಇಕ್ಕಟ್ಟಿಗೆ ಸಿಲುಕಿ ಕೊಂಡ ತಂದೆಯೊಡನೆ ಹಠ ಮಾಡಿ ವಾದಿಸುವುದು ಸಾಧ್ಯವಿಲ್ಲ, ಅವನು ಮಾಡಬೇಕಾದ ಧಾರ್ಮಿಕ ಕಾರ್ಯಗಳನ್ನು ನಿಲ್ಲಿಸುವಂತೆಯೂ ಇಲ್ಲ. ಏನು ಮಾಡುವುದೆಂದು ದಾರಿ ಕಾಣದೆ ಬ್ರಹ್ಮ ದೇವರ ಬಳಿ ಹೋಗಿ ಎಲ್ಲವನ್ನು ಹೇಳಿದ. ಬ್ರಹ್ಮನು ಕಶ್ಯಪರನ್ನು ಕರೆಸಿ, ನಿನ್ನಂತ ಋಷಿಮುನಿಗಳಿಗೆ ಇದು ಯೋಗ್ಯವಾದ ಕೆಲಸವಲ್ಲ ನೀನು ಮಾಡಿದ್ದು ತಪ್ಪು. ಯೋಗ್ಯನಾದ ಋಷಿ ಯಾಗಿರದ ಕಾರಣ ನಿನ್ನನ್ನು ಕ್ಷಮಿಸಲು ಸಾಧ್ಯವಿಲ್ಲ. ಆದ್ದರಿಂದ ನೀನು ಭೂಲೋಕದಲ್ಲಿ ಜನಿಸಿ ಕಣ್ಣೆದುರಿಗೆ ಆಗುವ ಅನ್ಯಾಯಗಳನ್ನೆಲ್ಲ ನೋಡಿ ಏನು ಮಾಡಲಾಗದ ಅಸಹಾಯಕನಾಗಿ ಒದ್ದಾಡುವಂತಾಗು ಎಂದು ಶಾಪ ಕೊಟ್ಟನು. ಆಗ ಕಶ್ಯಪರಿಗೆ ತಮ್ಮ ತಪ್ಪಿನ ಅರಿವಾಗಿ ತಾನು ಮಾಡಿದ್ದು ತಪ್ಪು ಎಂದು ಅರ್ಥವಾಗಿ, ಶಾಪ ವಿಮೋಚನೆಗಾಗಿ ಭಗವಂತನನ್ನು ಧ್ಯಾನ ಮಾಡಿದರು. ಅವರ ಪ್ರಾರ್ಥನೆಗೆ ಒಲಿದ ಭಗವಂತನು ಪ್ರತ್ಯಕ್ಷನಾಗಿ, ದಂಪತಿಗಳಾದ ನೀವಿಬ್ಬರೂ ಸೇರಿ ತಪ್ಪು ಮಾಡಿದ್ದೀರಿ ಕರ್ಮ ಫಲವನ್ನು ಅನುಭವಿಸ ಲೇಬೇಕು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಆದರೆ ನೀನು ದೊಡ್ಡ ತಪಸ್ವಿಯಾದ ಕಾರಣ ಭೂಲೋಕದಲ್ಲಿ ನೀನು ಜನಿಸಿದಾಗ, ಮುಂದೆ ದ್ವಾಪರದ ಶ್ರೀ ಕೃಷ್ಣನ ಅವತಾರದಲ್ಲಿ ನಿಮ್ಮ ಮಗನಾಗಿ ನಾನೇ ಜನಿಸಿ ನಿಮ್ಮನ್ನು ಬಂಧನದಿಂದ ಬಿಡುಗಡೆ ಮಾಡುತ್ತೇನೆ ಎಂದು ವರ ಕೊಟ್ಟನು ಈ ವರದಿಂದಾಗಿ ಕಶ್ಯಪ ಅದಿತಿಯರ ಮಗನಾಗಿ ಶ್ರೀ ಕೃಷ್ಣ ಜನಿಸಿದನು.

ವಸುದೇವ ದೇವಕಿಯರು ತಮ್ಮ ಕರ್ಮಫಲ ಕಳೆದುಕೊಳ್ಳುವುದಕ್ಕಾಗಿ ದುಷ್ಟ ಕಂಸನ ಕಾರಣದಿಂದ ಸೆರೆಯಲ್ಲಿದ್ದು ನಡೆಯುತ್ತಿದ್ದ ತಪ್ಪುಗಳನ್ನೆಲ್ಲ ಕಣ್ಣಿಂದ ನೋಡುತ್ತಾ ಏನು ಮಾಡಲಾಗದೆ ಕರುಳು ಕಿತ್ತು ಬರುವಂತಹ ಕಷ್ಟಗಳನ್ನು ಸಹಿಸಿಕೊಳ್ಳಬೇಕಾಯಿತು.

ಸಂಬಂಧಿಗಳೇ ಆಗಲಿ ಹೆತ್ತ ಮಕ್ಕಳೇ ಆಗಿರಲಿ ಇನ್ನೊಬ್ಬರ ಸಂಪತ್ತನ್ನು ಅಪಹರಿಸಿದರೆ ಅದರ ಕರ್ಮಫಲವನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು ಎಂಬುದಕ್ಕೆ ಇದೊಂದು ಉದಾಹರಣೆ ಯಾಗಿದೆ.



# ನಾದಜ್ಯೋತಿ ಕಾರ್ತೀಕ ಸಂಗೀತ ಸಂಭ್ರಮ

• ಉದಯವಾಹಿನಿ, ಬೆಂಗಳೂರು

ನಾಡಿನ ಪ್ರಸಿದ್ಧ ಸಂಗೀತ ಸಂಸ್ಥೆಯಾದ ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಮಲ್ಲೇಶ್ವರದ ಈಸ್ಟ್ ಪಾರ್ಕ್ ರಸ್ತೆಯಲ್ಲಿರುವ (ಅಂಚೆ ಕಚೇರಿ ಹತ್ತಿರ) ಶ್ರೀ ರಾಮ ಮಂದಿರದಲ್ಲಿ ನವೆಂಬರ್ 20 ರಿಂದ 24ರ ವರೆಗೆ ಕಾರ್ತೀಕ ಸಂಗೀತ ಸಂಭ್ರಮ, ಶ್ರೀ ಕನಕದಾಸರ ಜಯಂತಿ, ಕನ್ನಡ ರಾಜ್ಯೋತ್ಸವ ಮತ್ತು ಹರಿದಾಸ ಸಂಭ್ರಮ-2024ರ ಪ್ರಯುಕ್ತ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ ; ನವೆಂಬರ್ 20, ಬುಧವಾರ : 6 ಗಂಟೆಗೆ ಉದ್ಘಾಟನೆ ನಂತರ ಸುಗಮ ಸಂಗೀತ ಶ್ರಾವ್ಯ ಆಚಾರ್ಯ (ಗಾಯನ), ಪ್ರಮೋದ್ ಶ್ಯಾಮ್ (ಹಾರ್ಮೋನಿಯಂ), ಸುದತ್ತಾ ಎಲ್.ಎಸ್. (ತಬಲಾ). ಸಂಜೆ 6–00ಕ್ಕೆ. ನವೆಂಬರ್ 21, ಗುರುವಾರ ಶಶಾಂಕ್ ವಿ. ಚಿನ್ನ (ಕೊಳಲು), ಟಿ. ನಿಶಾಂತ್ (ಪಿಟೀಲು), ಕೃಷ್ಣ ವೇದಾಂತ (ಮೃದಂಗ). ಸಂಜೆ 6–00ಕ್ಕೆ. ನವೆಂಬರ್ 22, ಶುಕ್ರವಾರ : ಶೈಲಜಾ ಶ್ರೀನಾಥ್ (ವೀಣಾ ವಾದನ), ಪ್ರವೀಣ್ ಹರಿಹರನ್ (ಮೃದಂಗ), ಸತೀಶ್ ಗೌತಮ್ (ಘಟ). ಸಂಜೆ 6–00ಕ್ಕೆ ನವೆಂಬರ್ 23, ಶನಿವಾರ ನಾದಜ್ಯೋತಿ ಪುರಸ್ಕೃತ' ಡಾ. ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ (ಗಾಯನ), ಎಸ್.ಪಿ. ಅನಂತಪದ್ಮನಾಭ (ಪಿಟೀಲು), ಫಣೀಂದ್ರ ಭಾಸ್ಕರ್ (ಮೃದಂಗ), ಶ್ರೀನಿಧಿ ಕೌಂಡಿನ್ಯ (ಘಟ) ಸಂಜೆ 6–00ಕ್ಕೆ

ನವೆಂಬರ್ 24, ಭಾನುವಾರ : ಸಂಜೆ 5–00ಕ್ಕೆ ಹರಿದಾಸ ರೂಪಕ : ಹರಿದಾಸರು ಕಂಡ ಶ್ರೀಕೃಷ್ಣ ಡಾ|| ವಿನಾಯಕ ಆಚಾರ್ಯ (ನಿರೂಪಣೆ), ರಾವ್ ಆರ್. ಶರತ್ (ಗಾಯನ), ನಾಗರಾಜ್ ಮಂಡ್ಯಂ (ಪಿಟೀಲು), ಅಪ್ರಮೇಯ ಭಾರಧ್ವಾಜ್ (ಮೃದಂಗ). ನಂತರ ಸಂಧ್ಯಾ ಶ್ರೀನಾಥ್ ಮತ್ತು ವೃಂದದವರಿಂದ ಪುರಂದರದಾಸರ ನವರತ್ನ ಮಾಲಿಕೆ ಗೋಷ್ಠಿ ಗಾಯನ. ಚಂದ್ರಲಾ ಕಟ್ಟೆ (ಪಿಟೀಲು), ಶ್ರೀನಿವಾಸ್ ಅನಂತರಾಮಯ್ಯ (ಮೃದಂಗ)

ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಲ್ಲೂ ಸಂಗೀತಾಭಿಮಾನಿಗಳು ಹೆಚ್ಚಿನ ಸಂಖ್ಯೆ ಯಲ್ಲಿ ಭಾಗವಹಿಸಿ ಕಲಾವಿದರನ್ನು ಪ್ರೋತ್ಸಾಹಿಸಬೇಕೆಂದು ಸಂಸ್ಥೆಯ ಪದಾಧಿಕಾರಿ ಕಟ್ಟೆ ಸತ್ಯನಾರಾಯಣ ವಿನಂತಿಸಿದ್ದಾರೆ.



ಉದಯವಾಹಿನಿ ಚಿತ್ರ

**ಕನಕದಾಸರ ಜಯಂತಿ, ಕನ್ನಡ ರಾಜ್ಯೋತ್ಸವ**

# ಭಾರತ ರತ್ನ ಹಾಗೂ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ 107ನೇ ವರ್ಷದ ಜನ್ಮದಿನಾಚರಣೆ



ಕಲಾ ಸಾಹಿತ್ಯ
**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ , ವಿಮರ್ಶಕರು

• ಉದಯವಾಹಿನಿ, ವಿಶೇಷ

ಶ್ರೀಮತಿ ಇಂದಿರಾಗಾಂಧಿಯವರು 1917 ನವಂಬರ್ 19 ರಂದು ಅಲಹಾಬಾದಿನಲ್ಲಿ ಜನಿಸಿದರು.ತಂದೆ ಜವಾಹರ್ಲಾಲ್ ನೆಹರು ತಾಯಿ ಕಮಲ ನೆಹರು. ಪಂಡಿತ್ ಜವಾಹರ್ ಲಾಲ್ ನೆಹರು,ಜಿಎಲ್ ನಂದಾ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿಯವರ ನಂತರ ಭಾರತ ದೇಶದ ಪ್ರಧಾನಮಂತ್ರಿ ಹುದ್ದೆಯ ಅಧಿಕಾರ ಚುಕ್ಕಾಣಿಯನ್ನು ಹಿಡಿದು ಸುಮಾರು 14 ವರ್ಷಗಳ ಕಾಲ ಬಹಳ ಸಮರ್ಥವಾಗಿ ನಿರ್ವಹಿಸಿದ ಒಬ್ಬ ಧೀಮಂತ ಮಹಿಳೆ. ಅವರ ಅವಧಿಯಲ್ಲಿ ಅನೇಕ ಪ್ರಗತಿಪರ ಸಮಗ್ರ ಅಭಿವೃದ್ಧಿಗಳನ್ನು ಮಾಡಿರುವ ದಾಖಲೆಯಿದೆ. ಶ್ರೀಮತಿಯವರು ದೇಶದ ಸಮಗ್ರತೆಯ ಸರ್ವತೋಮುಖ ಅಭ್ಯುದಯಕ್ಕಾಗಿ, ನಿರಂತರವಾಗಿ ಶ್ರಮಿಸಿದ ರಾಷ್ಟ್ರನಾಯಕಿಯಾಗಿ ವಿಶ್ವದ ಗಮನ ಸೆಳೆದ ದಿಟ್ಟ ಮಹಿಳೆ. ಭಾರತ ಸರ್ಕಾರ ಇವರ ಸೇವೆಯನ್ನು ಪರಿಗಣಿಸಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಶ್ರೀಮತಿಯವರು ಅಕ್ಟೋಬರ್ 31, 1984 ರಂದು ತಮ್ಮ ಅಂಗರಕ್ಷಕರ ಕಡೆಯಿಂದ ಹುತಾತ್ಮರಾದರು.



ಅಂದು ಇಡೀ ವಿಶ್ವವೇ ಇಂದಿರಾಗಾಂಧಿಯವರ ಮರಣಕ್ಕಾಗಿ ಶೋಕಿಸಿತು. ಅವರ ಸ್ಮರಣಾರ್ಥ ಆ ದಿನವನ್ನು ಏಕತಾ ದಿನವನ್ನಾಗಿ ರಾಷ್ಟ್ರದಲ್ಲಿ ಆಚರಿಸಲಾಗುತ್ತಿದೆ.

ಇಂದು ಅವರ 107ನೇ ವರ್ಷದ ಜನ್ಮದಿನಾಚರಣೆಯ ದಿನವಾದ ಇಂದು ಸ್ಮರಿಸಿ, ನೆನೆಯುತ್ತಾ ಅವರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.

# ಮನಸೆಳೆದ ಭಕ್ತಿಪ್ರಧಾನ ಕೃತಿಗಳ ಸುಮನೋಹರ ನರ್ತನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಅಂದು 'ನಯನ' ರಂಗಮಂದಿರದ ವೇದಿಕೆಯ ಮೇಲೆ ಸುಂದರ ವೇಷಭೂಷಣ –ಅಲಂಕಾರಗಳಿಂದ ಕಂಗೊಳಿಸುತ್ತಿದ್ದ ಉತ್ಸಾಹೀ ಉದಯೋನ್ಮುಖ ನೃತ್ಯ ಕಲಾವಿದರು ಅಮಿತ ನೃತ್ಯ ಸಂಭ್ರಮದಿಂದ ನರ್ತಿಸಿ ಕಲಾರಸಿಕರ ಮೆಚ್ಚುಗೆ ಗಳಿಸಿದರು. ಅದು 'ಅಮೃತ ಕಲಾಮಂದಿರ'ದ ಹದಿನೈದನೆಯ ವಾರ್ಷಿಕೋತ್ಸವದ ಸಂದರ್ಭ. ನೃತ್ಯಕ್ಷೇತ್ರದಲ್ಲಿ ಹೆಸರಾಂತ ನಾಟ್ಯಗುರು ವಿದುಷಿ. ಹರಿಣಿ ಹರಿದಾಸ್, ತಮ್ಮ ವಿದ್ಯಾರ್ಥಿ ವೃಂದವನ್ನು ಬಹು ಬದ್ಧತೆಯಿಂದ, ಉತ್ತಮ ತರಬೇತಿ ನೀಡಿ ವಿವಿಧ ಭಕ್ತಿಪ್ರಧಾನ ಕೃತಿಗಳಿಗೆ, ತನ್ನ ನುರಿತ ನೃತ್ಯ ಸಂಯೋಜನೆಯ ರಂಗು ನೀಡಿ, ಅತ್ಯುತ್ಸಾಹದ ನೃತ್ಯ ಪ್ರದರ್ಶನ ಸಾಕಾರಗೊಳ್ಳಲು ಬೆಂಬಲವಾಗಿದ್ದರು. ವಯಸ್ಸಿನಲ್ಲಿ ತುಂಬಾ ಕಿರಿಯರಾದರೂ ಮಕ್ಕಳು, ಬಹು ಆಸಕ್ತಿಯಿಂದ ನಾಟ್ಯ ಕಲಿತು ಅಂಗಶುದ್ಧ, ಸುಂದರಾಭಿನಯದ ನರ್ತನದಿಂದ ತಮ್ಮ ಪ್ರತಿಭೆಯನ್ನು ಮೆರೆದದ್ದು ಮುದನೀಡಿತು. 'ಪ್ರಥಮ ಪೂಜಿತ ಗಣಪತಿ'ಯ ಶ್ಲೋಕಾರ್ಪಣೆಯಿಂದ ಶುಭಾರಂಭಗೊಂಡ ನೃತ್ಯ ಕಾರ್ಯಕ್ರಮದಲ್ಲಿ ಆಯ್ಕೆ ಮಾಡಿದ ಕೃತಿಗಳು ವೈವಿಧ್ಯಪೂರ್ಣವಾಗಿದ್ದವು. ಭಕ್ತಿರಸ ಪ್ರಧಾನ ಕೃತಿಗಳ ಸಾಲಿನಲ್ಲಿ ಸರಸ್ವತಿಯ ಸ್ತುತಿ, ಮತ್ತು 'ಹರಿ ಕುಣಿದ' 'ಕುಣಿದಾಡೋ ಕೃಷ್ಣ' ಮನಮೋಹಕ ಅಭಿನಯ– ಮನಸೆಳೆವ ಆಂಗಿಕಗಳಿಂದ ಇಷ್ಟವಾದವು. ಸಮೂಹ ನೃತ್ಯದಲ್ಲಿ ಕಲಾವಿದರ ನಡುವಿನ ಸಾಮರಸ್ಯ, ಲಯಬದ್ಧ ಚಲನೆ ನೃತ್ಯದ ಚೆಲುವನ್ನು ವೃದ್ಧಿಸಿದವು. ಪುಟ್ಟಕಲಾವಿದೆ ಕು. ಲೇಖನ, ಪುರಂದರ ದಾಸರು ರಚಿಸಿದ 'ಆಡಿದನೋ ರಂಗ ಅದ್ಭುತದಿಂದಲಿ.. ಕೃತಿಯಲ್ಲಿ ಶ್ರೀಕೃಷ್ಣನ ಸಾಹಸ ಗಾಥೆಯನ್ನು, ಕಣ್ಮನ ಸೆಳೆದ ಕಣ್ಣಿನ ಚಲನೆ– ರಮ್ಯ ನೃತ್ತಗಳ ಹಾಗೂ ಆಂಗಿಕಾಭಿನಯದ ಮೋಹಕತೆಯ ನರ್ತನದಿಂದ ಗಮನ ಸೆಳೆದಳು. ಬಾಲಪ್ರತಿಭೆಯಾದ ಇವಳು, ವಿವಿಧ ಸಂಚಾರಿಗಳ ಮೂಲಕ, ಬೆರಗು ಹುಟ್ಟಿಸಿದ ಯೋಗ ಭಂಗಿಗಳ ನೈಪುಣ್ಯತೆಯನ್ನು ಪ್ರದರ್ಶಿಸಿದಳು. ಮುಂದೆ– 'ತಂಬೂರಿ ಮೀಟಿದವ, ಭವಾಬ್ಧಿ ದಾಟಿದವ' ಸುಮನೋಹರ ಕೃತಿಗೆ ನರ್ತಿಸಿದ ಕಲಾವಿದೆಯರು ತಮ್ಮ ತನ್ಮಯತೆ ತುಂಬಿದ ಭಾವಾಭಿನಯದಲ್ಲಿ ನೋಡುಗರ ಮನಸ್ಸನ್ನು ಗೆದ್ದುಕೊಂಡರು. ಅನಂತರ– ಶಿವಪದ ( ರಾಗಮಾಲಿಕೆ ಮತ್ತು ಆದಿ ತಾಳ) 'ನಟನ ಮನೋಹರ ನಾಗಾಭರಣ'ನ ವಿಶಿಷ್ಟ ವ್ಯಕ್ತಿತ್ವವನ್ನು ಕಲಾವಿದೆಯರು ತಮ್ಮ ಪರಿಣಾಮಕಾರಿ ಅಭಿನಯದಲ್ಲಿ, ಹೆಜ್ಜೆ– ಗೆಜ್ಜೆಗಳ ಚೈತನ್ಯದಲ್ಲಿ ಉತ್ತಮ ಚಿತ್ರಣವನ್ನು ಕಟ್ಟಿಕೊಟ್ಟರು. ಶಿವ ವಿಷಕಂಠನಾದ ಪ್ರಸಂಗದ ಸಂಚಾರಿಯೊಂದಿಗೆ, ಲಯಾತ್ಮಕ ಕೊನ್ನಕೋಲುಗಳಿಗೆ ತಾಳ–ಲಯಬದ್ಧವಾಗಿ ನೃತ್ಯ ಝೇಂಕಾರ ಮಿಡಿದು, ಮಿಂಚಿನ ಸಂಚಾರದ ನೃತ್ತಗಳ ಸೊಗಸನ್ನು ಮೆರೆದರು. ವಿದುಷಿ. ಹರಿಣಿಯವರ ತಾಂಡವ ನಾಟ್ಯದ ನುರಿತ ನೃತ್ಯ ಸಂಯೋಜನೆ ಕಣ್ಮನ ಸೆಳೆದರೆ, ಜಿ. ಗುರು ಮೂರ್ತಿ ಅವರ ಶಕ್ತಿಯುತ ಕೃತಿಗೆ, ಬಾಲ ಸುಬ್ರಮಣ್ಯ ಶರ್ಮ ಅವರ ಸೊಗಸಾದ ಗಾಯನ ಅತ್ಯಂತ ಪ್ರಭಾವಶಾಲಿಯಾಗಿತ್ತು. ಸಪ್ತಸ್ವರಗಳೇ ಶಿವನ ಆಭರಣವಾಗಿ ಬೆರಗುಗೊಳಿಸಿದ ನೃತ್ಯ ಶೋಭಾಯಮನವಾಗಿತ್ತು. 'ಅಮೃತ ಕಲಾಮಂದಿರದ ಶಿಷ್ಯರು ಕೇವಲ ನೃತ್ಯದಲ್ಲಷ್ಟೇ ಪ್ರತಿಭಾನ್ವಿತರಲ್ಲದೆ ತಾವು ನಿಷ್ಠೆಯಿಂದ ಕಲಿತ, ತಮ್ಮ ಸುಶ್ರಾವ್ಯ ಸಂಗೀತದಿಂದಲೂ ರಂಜಿಸಿದ್ದು ವಾರ್ಷಿಕೋತ್ಸವದ ವಿಶೇಷವಾಗಿತ್ತು. ಗುರು–ಶಿಷ್ಯರಿಗೆಲ್ಲರಿಗೂ ಹಾರ್ದಿಕ ಅಭಿನಂದನೆಗಳು.

> **ಅನಂತರ– ಭಾಗ್ಯದ ಲಕ್ಷ್ಮಿಯನ್ನು ಭಕ್ತಿ–ಪ್ರೀತಿಯಿಂದ ಆಹ್ವಾನಿಸಿ, 'ಕಮಲದ ಮೊಗದೋಳೆ ...ಕಮಲದ ಕಣ್ಣೋಳೆ' ಎಂದು ಲಕ್ಷ್ಮಿಯ ಸೌದರ್ಯ– ಮಹತ್ವವನ್ನು ಕಲಾವಿದೆಯರು ತಮ್ಮ ಲಾಸ್ಯಪೂರ್ಣ ಆಂಗಿಕಾಭಿನಯದ ಮೂಲಕ ಬಣ್ಣಿಸಿದರು. ಮಹಿಷಾಸುರ ಮರ್ಧಿನಿಯ ಭಯಂಕರ ಸ್ವರೂಪ, ನೃತ್ತಗಳ ಮೆರುಗು ಸಂಚಾರಿ ಕಥನದೊಂದಿಗೆ ನಿರೂಪಿತವಾಯಿತು. 'ಅಯಗಿರಿ ನಂದಿನಿ ನಂದಿತಾ ಮೇದಿನಿ..' ಯ ಸಾಹಸ ಕಂಡು ಬೆರಗಾದ ದೇವತೆಗಳು, ದೇವಿಯನ್ನು ಕುರಿತು ಆಕೆಯ ಧೈರ್ಯ– ಸಾಹಸವನ್ನು ಕೊಂಡಾಡಿ, ಪ್ರಾರ್ಥಿಸಿದ್ದನ್ನು ಕಲಾವಿದೆಯರು ಭಕ್ತಿಪೂರ್ಣವಾಗಿ ಸುಂದರಾಭಿನಯದೊಂದಿಗೆ ಸಾಕ್ಷಾತ್ಕರಿಸಿದರು. ಅಂತ್ಯದ 'ಅಂಬಾ ಶಾಂಭವಿ' ಕುರಿತ ಮನನೀಯ ಕೃತಿಯನ್ನು ನರ್ತಕಿಯರು ಪರಿಣಾಮಕಾರಿಯಾಗಿ ನಿರೂಪಿಸಿದರು.**



ಸಾಮಾಜಿಕ ಕಳಕಳಿ
**ಹೆಚ್.ಎಸ್.ಪ್ರತಿಮಾ ಹಾಸನ್**
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

**ದಿನಕ್ಕೊಂದು ಮುಕ್ತಕ -28**

ಬದುಕಿನಲಿ ಬಲುನೊಂದು ಕೊರಗುತ್ತ ಕುಳಿತಿಹರು
ಕದಳಿ ವನದಲ್ಲಿ ಮಂಗಳಮುಖಿಯರು
ಸುದತಿಯರ ಬಂಧುಗಳು ಸೋದರರ ಸಂಕುಲಕೆ
ಮಧುರತೆಯ ಮಾತಾಡಿ ಲಕ್ಷ್ಮಿ ದೇವಿ......

ಈ ಮೇಲಿನ ಮುಕ್ತಕದಂತೆ ಬದುಕಿನಲ್ಲಿ ಬಹಳಷ್ಟು ನೋವನ್ನು ಅನುಭವಿಸುತ್ತಾ ಬಹಳಷ್ಟು ನೋವಿನಿಂದ ಖಿನ್ನತೆಗೆ ಒಳಗಾಗುವವರು ಮಂಗಳ ಮುಖಿಯರು . ಯಾವುದೇ ತಪ್ಪು ಮಾಡದಿದ್ದರೂ ಸಹ ಬಹಳಷ್ಟು ನೋವನ್ನು ಅನುಭವಿಸುವುದು ಎಷ್ಟು ಸರಿ ಹೇಳಿ? ದೇಹದ ಹಾರ್ಮೋನ್ ಗಳ ವ್ಯತ್ಯಾಸದಿಂದ ಆಗುವಂತಹ ಪರಿಣಾಮಕ್ಕೆ ಯಾರು ಹೊಣೆ ಮಂಗಳ ಮುಖಿಯರು, ತೃತೀಯಲಿಂಗರು, ಖೋಜಗಳು, ಗೇ, ಹೀಗೆ ಅವರನ್ನು ಕರೆಯುವುದು ಸರಿಯೇ? ಕದಳಿ ವನವೆಂದರೆ ಅವರದೇ ಆದಂತಹ ಒಂದು ಗುಂಪಿನ ಸಮುದಾಯವನ್ನು ಮಾಡಿಕೊಂಡು ವಾಸ ಮಾಡುವವರು. ಸುದತಿ ಎಂದರೆ ಸುಂದರವಾದ ಎಂದರ್ಥ, ಅವರದೇ ಆದಂತಹ ಸುಂದರವಾದ ದೇಹ ಸೌಂದರ್ಯವನ್ನು ಒಳಗೊಂಡಂತವರಲ್ಲಿ ಮಂಗಳ ಮುಖಿಯರು ಸೇರುತ್ತಾರೆ.



ಉದಯವಾಹಿನಿ ಚಿತ್ರ

# ಜಿಲ್ಲೆಗಳಲ್ಲಿ ಮತ್ತೆ ಭಾರೀ ಮಳೆ : IMD ಮುನ್ಸೂಚನೆ

• ಉದಯವಾಹಿನಿ, ಬೆಂಗಳೂರು



ರಾಜ್ಯದಲ್ಲಿ ನವೆಂಬರ್ 25 ರವರೆಗೆ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇಂದಿನಿಂದ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಚಿಕ್ಕಮಗಳೂರು, ಕೊಡಗು, ಹಾಸನ, ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ನವೆಂಬರ್ 18 ಮತ್ತು 19 ರಂದು ಮಳೆಯಾಗಲಿದೆ. ಇನ್ನು ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ಹಾಗೂ ಹಾವೇರಿ, ಬಳ್ಳಾರಿ, ರಾಮನಗರ, ಚಿತ್ರದುರ್ಗ, ವಿಜಯನಗರ, ಬೆಳಗಾವಿ, ಉತ್ತರ ಕನ್ನಡ, ಧಾರವಾಡ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

# ಪಿಎಂ ಕೇರ್ಸ್ ಫಂಡ್‌ನಲ್ಲೂ ದೊಡ್ಡ ಮಟ್ಟದ ಭ್ರಷ್ಟಾಚಾರ ಸಚಿವ ದಿನೇಶ್ ಗುಂಡೂರಾವ್ ಆರೋಪ

• ಉದಯವಾಹಿನಿ, ಬೆಂಗಳೂರು

ಕೋವಿಡ್ ವೇಳೆ ಪಿಎಂ ಕೇರ್ಸ್ ಫಂಡ್ ನಿಂದ ಬಂದ ವೆಂಟಿಲೇಟರ್ ಕೂಡ ಗುಣಮಟ್ಟದ್ದಲ್ಲ. ಅನೇಕ ಕಡೆಗೆ ಈ ವೆಂಟಿಲೇಟರ್ ಬಳಕೆ ಮಾಡಲು ಆಗದೆ ಹಾಗೆ ಇಡಲಾಗಿದೆ.

ಪಿಎಂ ಕೇರ್ಸ್ ಫಂಡ್ ಹೇಗೆ ದುರ್ಬಳಕೆ ಆಗಿದೆ ಎಂಬುದು ದೊಡ್ಡ ವಿಷಯ. ಪಿಎಂ ಕೇರ್ಸ್ ಫಂಡ್ ನಲ್ಲೂ ಕೂಡ ದೊಡ್ಡ ಮಟ್ಟದ ಭ್ರಷ್ಟಾಚಾರ ನಡೆದಿದೆ. ಎಲ್ಲದರ ಬಗ್ಗೆಯೂ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕಿದೆ ಎಂದು ಬೆಂಗಳೂರಲ್ಲಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಕೋವಿಡ್ ವೇಳೆ ವೆಂಟಿಲೇಟರ್ ಖರೀದಿಯಲ್ಲೂ ಅವ್ಯವಹಾರ ನಡೆದಿದೆ. ನ್ಯಾ. ಮೈಕಲ್ ಡಿ ಕುನಹ ನೀಡಿರುವ ವರದಿಯಲ್ಲಿ ಹಲವು ಅಂಶಗಳು ಬಹಿರಂಗವಾಗಿವೆ. ಈ ವರದಿಯಲ್ಲಿ ಗಾಬರಿ ಹುಟ್ಟಿಸುವಂತಹ ಅಂಶಗಳು ದಾಖಲಾಗಿವೆ. ಬಿಜೆಪಿ ಸರ್ಕಾರ ಯಾವ ರೀತಿ ಲೂಟಿ ಮಾಡಿದೆ ಅನ್ನೋದು ಎದ್ದು ಕಾಣುತ್ತದೆ. ವರದಿಯ ಅಂಶಗಳು ತಾರ್ಕಿಕ ಅಂತ್ಯ ಕಾಣಬೇಕು ಎನ್ನುವುದು ನಮ್ಮ ಉದ್ದೇಶ. ಅಂದಿನ ಸಚಿವರು ಸಿಎಂ ಒಪ್ಪಿಗೆ ಇಲ್ಲದೆ ಇಂತಹ ನಿರ್ಧಾರಗಳು ಆಗಲ್ಲ. ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆ ಆಗುವ ಕೆಲಸ ಮಾಡಬೇಕಿದೆ.



ರಾಜ್ಯದ ಆರೋಗ್ಯ ಕೇಂದ್ರಗಳಲ್ಲಿ ಔಷಧಿಗಳ ಕೊರತೆ ಇಲ್ಲ. ನಮ್ಮ ಸರ್ಕಾರ ಬಂದ ಆರಂಭದಲ್ಲಿ ಕೇವಲ 40% ಔಷಧ ಮಾತ್ರ ಸಿಗುತ್ತಿತ್ತು. ಉಳಿದ ಔಷಧಗಳನ್ನು ಆಸ್ಪತ್ರೆಗಳಲ್ಲಿ ಖರೀದಿ ಮಾಡಲಾಗುತ್ತಿತ್ತು. ಈಗ 75 ಪರ್ಸೆಂಟ್ ವೈದಿಕೆ ಸರಬರಾಜು ನಿಗಮದಿಂದಲೇ ಔಷಧ ಪೂರೈಕೆಯಾಗುತ್ತಿದೆ. ತಾಂತ್ರಿಕ ಕಾರಣದಿಂದ ಟೆಂಡರ್ ವಿಳಂಬವಾಗಿದೆ ಎಂದು ತಿಳಿಸಿದರು.

> **ಈ ವರ್ಷವೂ ಈಡೆಂಟ್ ಪ್ರಕಾರವೇ ಔಷಧಿ ಖರೀದಿಗೆ ವ್ಯವಸ್ಥೆ ಮಾಡಲಾಗಿದೆ ಸದ್ಯ ಆರೋಗ್ಯ ಕೇಂದ್ರಗಳಲ್ಲಿ ಸಾಕಷ್ಟು ಪ್ರಮಾಣದ ಔಷಧ ಇದೆ ಯಾವ ಔಷಧ ಇಲ್ಲವೋ ಅದನ್ನು ಸ್ಥಳೀಯವಾಗಿ ಖರೀದಿಸಲು ಸೂಚಿಸಲಾಗಿದೆ ಎಂದು ಬೆಂಗಳೂರಿನಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ.

**ವೃಷಭ** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡ ಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯೆಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ಮಿಥುನ** ಸಂಘರ್ಷವು ನಿಮ್ಮ ಅನಾರೋಗ್ಯವನ್ನು ಇನ್ನಷ್ಟು ಹಾಳುಮಾಡಬಹುದಾದ್ದರಿಂದ ಅದನ್ನು ತಪ್ಪಿಸಿ. ನಿಮ್ಮ ಮೂಲಕ ಹಣವನ್ನು ಉಳಿಸಲು ಮಾಡಲಾಗಿರುವ ಪ್ರಯತ್ನವು ಇಂದು ವಿಫಲವಾಗಬಹುದು.

**ಕರ್ಕಾಟಕ** ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಇಂದು ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು.

**ಸಿಂಹ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ. ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ. ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

**ಕನ್ಯಾ** ಆರೋಗ್ಯದ ಆರೈಕೆ ಮಾಡಿಕೊಳ್ಳಬೇಕು. ಯಾವುದೇ ದೀರ್ಘಕಾಲೀನ ಹೂಡಿಕೆಗಳನ್ನು ತಪ್ಪಿಸಿ ಮತ್ತು ನಿಮ್ಮ ಸ್ನೇಹಿತರ ಜೊತೆ ಕೆಲವು ಆಹ್ಲಾದಕರ ಕ್ಷಣಗಳನ್ನು ಕಳೆಯಲು ಪ್ರಯತ್ನಿಸಿ.

**ತುಲಾ** ನಿಮ್ಮ ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆ ಪ್ರಯೋಜನಕಾರಿ ಎಂದು ಸಾಬೀತಾಗುತ್ತದೆ.

**ವೃಶ್ಚಿಕ** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ಇಂದು ವ್ಯಾಪಾರದಲ್ಲಿ ಉತ್ತಮ ಲಾಭವನ್ನು ಗಳಿಸುವ ಸಾಧ್ಯತೆ ಇದೆ.

**ಧನಸ್ಸು** ಯೋಗ ಮತ್ತು ಧ್ಯಾನ ನೀವು ಒಳ್ಳೆಯ ದೇಹರಚನೆ ಕಾಯ್ದುಕೊಳ್ಳಲು ಮತ್ತು ಮಾನಸಿಕವಾಗಿ ಸಧೃಢವಾಗಿರಲು ಸಹಾಯ ಮಾಡುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ.

**ಮಕರ** ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ. ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು.

**ಕುಂಭ** ನಿಮ್ಮ ದೇಹದ ಪುನಃಶ್ಚೇತನಕ್ಕಾಗಿ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳದಿದ್ದರೆ ನೀವು ಆಯಾಸ ಹಾಗೂ ನಿರಾಸೆಯಲ್ಲಿ ಸಿಲುಕುತ್ತೀರಿ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ.

**ಮೀನ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ.

# ನಾನು ಯಾವತ್ತೂ ಸಹಕಾರಿ ಚಳವಳಿ ಮತ್ತು ಸಹಕಾರಿ ತತ್ವದ ಪರ

## ಕೋ ಆಪರೇಟೀವ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ಉದ್ಯೋಗದಲ್ಲಿ ಮೀಸಲು: ಸಿಎಂ ಸಿದ್ದರಾಮಯ್ಯ ಘೋಷಣೆ

• ಉದಯವಾಹಿನಿ ಬಾಗಲಕೋಟೆ

ಕೋಆಪರೇಟೀವ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ಉದ್ಯೋಗದಲ್ಲಿ ಮೀಸಲಾತಿ ತರುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಆಯೋಜಿಸಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ನಾನು ಯಾವತ್ತೂ ಸಹಕಾರಿ ಚಳವಳಿ ಮತ್ತು ಸಹಕಾರಿ ತತ್ವದ ಪರವಾಗಿ ಇರುವವನು.

ಈ ಕಾರಣಕ್ಕೆ ಸಹಕಾರ ಇಲಾಖೆಯ ನೇಮಕಾತಿಗಳಲ್ಲಿ ಕೋಆಪರೇಟೀವ್ ಮ್ಯಾನೇಜ್ ಮೆಂಟ್ ಪದವಿ, ಡಿಪ್ಲೊಮೋ ಪಡೆದವರಿಗೆ ಮೀಸಲಾತಿ ನೀಡುವ ಪರವಾಗಿದ್ದೀನಿ. ರಾಜ್ಯದಲ್ಲಿ ಸಹಕಾರಿ ಚಳವಳಿ 1904 ರಲ್ಲೇ ಅಂದರೆ ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಗಿತ್ತು. 1905 ರಲ್ಲಿ ಸಹಕಾರಿ ನಿಯಮಗಳು ಜಾರಿಗೆ ಬಂದವು.

ಸ್ವಾತಂತ್ರ್ಯ ನಂತರ ನೆಹರೂ ಅವರು ದೇಶದ ಪ್ರಧಾನಿಯಾಗಿ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಬೆಂಬಲ ಮತ್ತು ಪ್ರೋತ್ಸಾಹ ಕೊಟ್ಟಿದ್ದರಿಂದ ಸಹಕಾರಿ ಚಳವಳಿ ದೇಶವ್ಯಾಪಿ ವ್ಯಾಪಿಸಲು ನೆರವಾಯಿತು ಎಂದರು.

ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಹೆಚ್ಚೆಚ್ಚು ಸಹಕಾರಿ ಚಳವಳಿಯಲ್ಲಿ ತೊಡಗಿಸಿಕೊಳ್ಳಬೇಕು. ನಾನು ಮುಖ್ಯಮಂತ್ರಿಯಾಗಿದ್ದಾಗ ಸಹಕಾರ ಸಂಘಗಳಿಗೆ ಈ ಸಮುದಾಯದ ಯುವಕ / ಯುವತಿಯರನ್ನು ಉಚಿತವಾಗಿ ಸದಸ್ಯರನ್ನಾಗಿ ಮಾಡಿದ್ದೆ. ಈಗಲೂ ಇದು ಮುಂದುವರೆಯಬೇಕು. ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು ಮತ್ತು ಇವರಿಂದ ಹೆಚ್ಚೆಚ್ಚು ಹಾಲನ್ನು ಖರೀದಿಸಬೇಕು. ಸಹಕಾರ ಸಂಘಗಳ ಹಾಲಿಗೆ ಮಾರುಕಟ್ಟೆ ವಿಸ್ತರಿಸಬೇಕು.

ಚನ್ನಪಟ್ಟಣ ತಾಲ್ಲೂಕೊಂದರಲ್ಲೇ 3 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ. ಈ ಹಾಲಿಗೆ 31 ರೂ ಅಂದರೆ 3 ಲಕ್ಷ ಲೀಟರ್ ಗೆ ಕೋಟಿ ರೂಪಾಯಿ ಆಗ್ತದೆ. ಇದು ಆರ್ಥಿಕತೆಗೂ ಹೆಚ್ಚಿನ ಕೊಡುಗೆ ನೀಡಿದಂತಾಗುತ್ತದೆ ಎಂದು ಹೇಳಿದ್ದಾರೆ.


ಹಾಲು ಉತ್ಪಾದಕರಿಗೆ ಅನುಕೂಲ ಮಾಡುವ ಉದ್ದೇಶದಿಂದಲೇ ನಮ್ಮ ಸರ್ಕಾರ ಕ್ಷೀರಭಾಗ್ಯ ಆರಂಭಿಸಿತು. ಲೀಟರ್ ಹಾಲಿಗೆ 5 ರೂ ಪ್ರೋತ್ಸಾಹಧನ ನೀಡುವುದನ್ನು ನಮ್ಮ ಅವಧಿಯಲ್ಲಿ ಆರಂಭಿಸಲಾಯಿತು.

ರೈತರ ಕೈಯಲ್ಲೇ ಹಾಲು ಉತ್ಪಾದಕ ಸಂಘಗಳು ಇರಬೇಕು ಎನ್ನುವ ಉದ್ದೇಶದಿಂದ ಡೈರಿಗಳನ್ನು ರೈತರಿಗೇ ನೀಡುವ ತೀರ್ಮಾನ ಮಾಡಿದೆವು. ಈ ಅಧಿಕಾರ ವಿಕೇಂದ್ರೀಕರಣದಿಂದ ಗ್ರಾಮೀಣ ಆರ್ಥಿಕತೆ ಗಟ್ಟಿಯಾಯಿತು.

ಇದೇ ಮಹಾತ್ಮಗಾಂಧಿಯವರ ಗ್ರಾಮ ಸ್ವರಾಜ್ಯದ ಆಶಯವೂ ಆಗಿದೆ. ಪಂಚಾಯ್ತಿ, ಸೊಸೈಟಿ, ಶಾಲೆ ಈ ಮೂರೂ ಪ್ರತೀ ಗ್ರಾಮಗಳಲ್ಲಿ ಇರಲೇಬೇಕು. ಆಗಲೇ ಗ್ರಾಮಗಳ ಪ್ರಗತಿ ಸಾಧ್ಯ ಎನ್ನುವುದು ಮಹಾತ್ಮ ಗಾಂಧಿಯವರ ಆಶಯವಾಗಿತ್ತು.

ರಾಜೀವ್ ಗಾಂಧಿಯವರು ಸಂವಿಧಾನಕ್ಕೆ ತಿದ್ದುಪಡಿ ತಂದು ಅಧಿಕಾರ ವಿಕೇಂದ್ರೀಕರಣ ಜಾರಿ ಮಾಡಿ ಮಹಿಳೆಯರು, ಹಿಂದುಳಿದವರು, ದಲಿತರ ಕೈಗೆ ಅಧಿಕಾರ ಸಿಗುವಂತೆ ಮಾಡಿದರು. ಸಮಾನತೆಯ ಸಮಾಜ ನಿರ್ಮಾಣ ಆಗಬೇಕು ಎನ್ನುವ ಆಶಯದಿಂದ ಸಮಾಜದ ಎಲ್ಲಾ ವರ್ಗದವರಿಗೆ ಆರ್ಥಿಕ ಶಕ್ತಿ ನೀಡುವ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ರೂಪಿಸಿ ಜಾರಿ ಮಾಡಿದೆ.

**ಅಖಿಲ ಭಾರತ ಸಹಕಾರ ಸಪ್ತಾಹ**



> ರೈತರ ಬಗ್ಗೆ ಬಿಜೆಪಿ ಭಾಷಣ ಮಾತ್ರ ಚೆನ್ನಾಗಿ ಮಾಡುತ್ತದೆ. ಬರೀ ಭಾಷಣದಿಂದ ರೈತರ ಬದುಕನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ. ಆದ್ದರಿಂದ ನಬಾರ್ಡ್‌ನಿಂದ ನಮಗೆ ಆದ ಅನ್ಯಾಯವನ್ನು ಪ್ರತಿಯೊಬ್ಬರು ಪ್ರತಿಭಟಿಸಬೇಕು. 2013 ರಲ್ಲಿ 8,165 ಕೋಟಿ ರೈತರ ಸಾಲವನ್ನು ನಾನು ಮೊದಲು ಬಾರಿ ಮುಖ್ಯಮಂತ್ರಿಯಾಗಿ ಮನ್ನಾ ಮಾಡಿದ್ದೆ. ಇದರಿಂದ ಸಹಸ್ರಾರು ರೈತರ ಬದುಕಿಗೆ ನೆರವಾಯಿತು. ಸಹಕಾರ ಮಹಾಮಂಡಳದ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರದ ನೆರವು ನೀಡಬೇಕು ಎನ್ನುವ ಬೇಡಿಕೆ ಇದೆ. ಈ ಬೇಡಿಕೆಯನ್ನೂ ಈಡೇರಿಸಲಾಗುವುದು -ಸಿಎಂ ಸಿದ್ದರಾಮಯ್ಯ

### ನಮ್ಮ ರೈತರಿಗೆ ಆದ ಬಹಳ ದೊಡ್ಡ ಅನ್ಯಾಯ

ಸಹಕಾರ ಕ್ಷೇತ್ರ ರಾಜ್ಯ ವ್ಯಾಪ್ತಿಗೆ ಸೇರಿದ್ದು. ಆದರೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರದಲ್ಲಿ ಸಹಕಾರ ಇಲಾಖೆ ಆರಂಭಿಸಿದರು. ಇದಕ್ಕೆ ಅಮಿತ್ ಶಾ ಅವರೇ ಸಚಿವರು. ಇದು ಕೇಂದ್ರದ ವ್ಯಾಪ್ತಿಗೆ ಬರುವ ವಿಷಯ ಅಲ್ಲ. ಇದರಿಂದಾಗಿ ನಮಗೆ ನಬಾರ್ಡ್‌ನಿಂದ ಬರುವ ರೈತರ ಪಾಲಿನ ನೆರವು ಕಡಿತಗೊಂಡಿದೆ. ಒಮ್ಮೆಲೇ 58% ನಬಾರ್ಡ್ ನೆರವು ಕಡಿತಗೊಂಡಿದೆ. ಇದು ನಮ್ಮ ರೈತರಿಗೆ ಆದ ಬಹಳ ದೊಡ್ಡ ಅನ್ಯಾಯ.

# ಖಂಡ್ರೆಯವರ ಸಮಯ ಪಡೆದು ಭೇಟಿಯಾಗದ ಸಿದ್ದಸಿರಿ ಹೋರಾಟಗಾರರು

• ಉದಯವಾಹಿನಿ, ಚಿಂಚೋಳಿ

ಸಿದ್ಧಸಿರಿ ಕಾರ್ಖಾನೆ ಹೋರಾಟಗಾರರ ನಿರಂತರ ಮನವಿ ಮೇರೆಗೆ ಐದು ಗಂಟೆಗೆ ಚಿಂಚೋಳಿಯ ಸಿದ್ಧಸಿರಿ ಕಾರ್ಖಾನೆ ಹೋರಾಟಗಾರರೊಂದಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿ ಮಾಡಿ ಮಾತನಾಡಲು ಚಿಂಚೋಳಿ ಕಾಂಗ್ರೆಸ್ ಮುಖಂಡರಾದ ಶರಣು ಪಾಟೀಲ್,ಅಬ್ದುಲ್ ಬಾಷೀದ್, ಲಕ್ಷ್ಮಣ ಅವುಂಟಿ, ನಾಗೇಶ ಗುಣಾಜಿ, ಶಬ್ಬೀರ್ ಅಹೇಮದ್, ಸಂತೋಷ ಗುತ್ತೇದಾರ, ಜಗನ್ನಾಥ ಗುತ್ತೇದಾರ ಸೇರಿದಂತೆ ಹಲವು ನಾಯಕರು ಸೇರಿ ವೇದಿಕೆ ಕಲ್ಪಿಸಲಾಗಿತ್ತು ಆದರೆ ರೈತ ಮುಖಂಡರು ಈಶ್ವರ ಖಂಡ್ರೆ ಅವರೊಂದಿಗೆ ಭೇಟಿಯಾಗಲು ನಿರಾಕರಿಸಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ಶರಣುಪಾಟೀಲ ಮೋತಕಪಳ್ಳಿ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು,ಧರಣಿ ಸತ್ಯಾಗ್ರಹ ಪ್ರಾರಂಭವಾಗಿನಿಂದ ಹಲವು ಬಾರಿ ಇದೆ ಹೋರಾಟಗಾರರು ಈಶ್ವರ ಖಂಡ್ರೆ, ಭೇಟಿಗೆ ವೇದಿಕೆ ಕಲ್ಪಿಸಿ ಎಂದು ಮನವಿ ಮಾಡಿದ ಕಾರಣ ಮನವಿಗೆ ಸ್ಪಂದಿಸಿದ ಖಂಡ್ರೆ, ಅವರು ರೈತ ನಾಯಕರೊಂದಿಗೆ ಭೇಟಿ ಮಾಡಿ ಚರ್ಚಿಸಲು ಸಮಯ ಕೊಟ್ಟಿದ್ದರೆ ವಿನಃ ಅವರಾಗಿ ನಿಮ್ಮನ್ನು ಕರೆದಿರಲಿಲ್ಲ ಹೋರಾಟಗಾರರು ಬದ್ಧತೆಯಿಂದ ಮಾತನಾಡಬೇಕು.

ಸಚಿವರ ಭೇಟಿಗೆ ವೇದಿಕೆ ಕಲ್ಪಿಸಿದಾಗ ನಿರಾಕರಿಸಿರುವುದು ಗಮನಿಸಿದರೆ ಹೋರಾಟಗಾರರಲ್ಲೇ ಗೊಂದಲ ಇರುವುದು ಸ್ಪಷ್ಟವಾಗುತ್ತದೆ,ಈ ಹೋರಾಟಗಾರರು ಎಲ್ಲಿಗೆ ಹೋಗಿ ಯಾರೊಂದಿಗಾದರೂ ಮಾತನಾಡಬೇಕಾದರೆ ಸಿದ್ಧಸಿರಿ ಕಾರ್ಖಾನೆಯ ಆಡಳಿತ ಮಂಡಳಿಯ ಅನುಮತಿಬೇಕು. ಇವರು ಸಿದ್ಧಸಿರಿ ಕಾರ್ಖಾನೆಯ ಪ್ರಾಯೋಜಿತ ಹೋರಾಟಗಾರರಾಗಿದ್ದಾರೆ, ತಾಂತ್ರಿಕ ಸಮಸ್ಯೆ ಅನ್ನೋ ವಿಷಯ ಗೊತ್ತಿದ್ದೂ ಇವರು ಹೋರಾಟ ಮಾಡುತ್ತಿದ್ದಾರೆ ಅಂದರೆ ಇವರು ಪ್ರಾಯೋಜಿತ ಹೋರಾಟಗಾರರಲ್ಲದೆ ಮತ್ತೇನು? ಎಂದು ಪ್ರಶ್ನಿಸಿದರು. ಈ ಪ್ರಾಯೋಜಿತ ಹೋರಾಟಗಾರರ ಮಧ್ಯದಲ್ಲಿಯೇ ಯಾವ ವಿಷಯದ ಬಗ್ಗೆ ಹೋರಟ ಮಾಡಬೇಕು ಹಾಗೂ ಯಾವ ದಾರಿಯಲ್ಲಿ ಪರಿಹಾರ ಕಾಣಬೇಕು ಅನ್ನುವಲ್ಲಿ ಭಿನ್ನಾಭಿಪ್ರಾಯವಿದೆ,ಇವರಿಗೆ ಸರ್ವೋಚ್ಚ ನ್ಯಾಯಾಲಯದ ಮೇಲೆ ವಿಶ್ವಾಸ ಇಲ್ಲ,ಜಿಲ್ಲಾ ಆಡಳಿತ ಮೇಲೆ ವಿಶ್ವಾಸ ಇಲ್ಲ,ಈ ಹೋರಾಟಗಾರರಿಗೆ ರೈತರ ಕಬ್ಬು ಸಾಗಾಟ ಆಗುವುದು ಬೇಕಾಗಿಲ್ಲ, ಇವರಿಗೆ ಬೇಕಾಗಿರುವುದು ಸಿದ್ಧಸಿರಿ ಕಾರ್ಖಾನೆ ಪ್ರಾರಂಭವಾಗುವುದು ಮಾತ್ರ ಎಂಬುವುದು ಆಗಿದೆ. ಈ ಹೋರಾಟಗಾರರು ಬಸವನಗೌಡ ಪಾಟೀಲ ಯತ್ನಾಳ್ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಅಷ್ಟೇ,ಇಷ್ಟು ದಿನಗಳು ಕಳೆದರು ಒಂದು ದಿನವು ಹೋರಾಟದ ವೇದಿಕೆ ಕಡೆ ಬರದಯಿರುವ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ರೈತರನ್ನು ದಾರಿ ತಪ್ಪಿಸುವ ಈ ಪ್ರಾಯೋಜಿತ ಹೋರಾಟಗಾರರನ್ನು ತಯ್ಯಾರು ಮಾಡಿ ಹೋರಾಟಕ್ಕೆ ಹಚ್ಚಿ ಮಜಾ ನೋಡುತ್ತಿದ್ದಾರೆ.



**ಶರಣು ಪಾಟೀಲ್ ಆಕ್ರೋಶ**

> ತಾಲೂಕಿನ ರೈತರು ಈ ಪ್ರಯೋಜಿತ ಹೋರಾಟಗಾರರ ಮಾತಿಗೆ ಮನ್ನಣೆ ಕೊಡದೆ ಈಗಾಗಲೇ ಜಿಲ್ಲಾಧಿಕಾರಿಗಳ ಆದೇಶದಂತೆ ತಾಲ್ಲೂಕಿನ ಪ್ರತಿ ಹಳ್ಳಿಯ ಎಲ್ಲಾ ರೈತರ ಕಬ್ಬು ಜಿಲ್ಲಾಧಿಕಾರಿಗಳ ಆದೇಶದಲ್ಲಿರುವಂತೆ ಸಂಬಂಧಿಸಿದ ಕಾರ್ಖಾನೆಯವರು ಕಬ್ಬು ಖರೀದಿ ಮಾಡುವರು ತಾಲ್ಲೂಕಿನ ರೈತರು ಯಾವುದೇ ಕಾರಣಕ್ಕೂ ಹೆದರಬೇಕಾಗಿಲ್ಲ ನಿಮ್ಮೊಂದಿಗೆ ನಾವಿದ್ದೇವೆ -ಶರಣುಪಾಟೀಲ ಮೋತಕಪಳ್ಳಿ

# ತಹಶೀಲ್ದಾರ್ ಕಚೇರಿಯಲ್ಲಿ ರುದ್ರೇಶ್ ಆತ್ಮಹತ್ಯೆಗೆ


## ಬಿಗ್ ಟ್ವಿಸ್ಟ್: ಅನಾಮಧೇಯ ಪತ್ರ ಪತ್ತೆ

• ಉದಯವಾಹಿನಿ ಬೆಳಗಾವಿ

ಜಿಲ್ಲೆಯಲ್ಲಿ ತಹಶೀಲ್ದಾರ್ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕ ರುದ್ರೇಶ್ ಆತ್ಮಹತ್ಯೆ ಕೇಸ್‌ಗೆ ಬಿಗ್ ಟ್ವಿಸ್ಟ್ ಸಿಕ್ಕಿದೆ. ಇದೀಗ ಪ್ರಕರಣ ಸಂಬಂಧ ಅನಾಮಧೇಯ ಪತ್ರವೊಂದು ಪತ್ತೆಯಾಗಿದೆ. ಅದರಲ್ಲಿ ಇದು ಆತ್ಮಹತ್ಯೆ ಅಲ್ಲ. ಇದು ಕೊಲೆ. ಈ ಕೇಸ್ ಮುಚ್ಚಿ ಹಾಕಬಾರದು. ಸತ್ತವರಿಗೆ ನ್ಯಾಯ ಸಿಗಬೇಕು ಎಂಬುದಾಗಿ ಆಗ್ರಹಿಸಲಾಗಿದೆ.

ಈ ಸಂಬಂಧ ಬೆಳಗಾವಿಯ ಪೊಲೀಸ್ ಕಮೀಷನರ್, ಜಿಲ್ಲಾಧಿಕಾರಿ, ಪ್ರಾದೇಶಿಕ ಆಯುಕ್ತರಿಗೆ, ರಾಜ್ಯಪಾಲರಿಗೂ ಪತ್ರವನ್ನು ಅಡ್ರೆಸ್ ಮಾಡಲಾಗಿದೆ. ಅದರಲ್ಲಿ ಬೆಳಗಾವಿ ತಹಶೀಲ್ದಾರ ಕಚೇರಿಯ ಕ್ಲಾರ್ಕ್ ರುದ್ರಣ್ಣ ಯಡವಣ್ಣನವರ ಇವರ ಕೊಲೆಗೆ ತಹಶೀಲ್ದಾರ ಜೀಪ ಗಾಡಿ ಡ್ರೈವರನಾದ ಯಲ್ಲಪ್ಪ ಬಡಸದ ಇವನೇ ಮೂಲ ಸೂತ್ರದಾರ. ಅದು ಸೂಸೈಡ ಅಲ್ಲ. ಯಲ್ಲಪ್ಪನಿಗೆ ವಿಚಾರಣೆ ಮಾಡಿದರೇ ಕೊಲೆ ರಹಸ್ಯ ಹೊರ ಬರುತ್ತದೆ ಎಂದಿದ್ದಾರೆ.

ಇನ್ನೂ ಯಲ್ಲಪ್ಪನ ಹೆಂಡತಿಯು ಅನೈತಿಕ ಸಂಬಂಧ ಇಟ್ಟುಕೊಂಡು ಅವನ ಎಲ್ಲಾ ದುಡ್ಡು ಹೊಡದಿರುತ್ತಾಳೆ. ಸತ್ತವನಿಗೆ ನ್ಯಾಯ ಸಿಗಬೇಕು. ಕೇಸ್ ಮುಚ್ಚಿ ಹಾಕಬಾರದು ಎಂಬುದಾಗಿ ಆಗ್ರಹಿಸಿದ್ದಾರೆ.



ಉದಯವಾಹಿನಿ ಚಿತ್ರ

**ಇದು ಆತ್ಮಹತ್ಯೆ ಅಲ್ಲ, ಇದು ಕೊಲೆ ಈ ಕೇಸ್ ಮುಚ್ಚಿ ಹಾಕಬಾರದು**

# ಕಾರು ಕೆರೆಗೆ ಬಿದ್ದು ಅತ್ತೆ-ಸೊಸೆ ಸ್ಥಳದಲ್ಲೇ ಸಾವು, ಮತ್ತಿಬ್ಬರು ಪ್ರಾಣಾಪಾಯದಿಂದ ಪಾರು

• ಉದಯವಾಹಿನಿ, ಚಿತ್ರದುರ್ಗ

ಇಲ್ಲಿನ ಬೊಮ್ಮನಕಟ್ಟೆ ಬಳಿಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಕೆರೆಗೆ ಬಿದ್ದ ಪರಿಣಾಮ ಇಬ್ಬರು ನೀರಲ್ಲಿ ಮುಳುಗಿ ಸಾವನ್ನಪ್ಪಿದ್ರೇ, ಮತ್ತಿಬ್ಬರು ಪ್ರಾಣಾಪಾಯದಿಂದ ಪಾರಾಗಿರುವಂತ ಘಟನೆ ನಡೆದಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಬಳಿಯ ಬೊಮ್ಮನಕಟ್ಟೆ ಬಳಿಯಲ್ಲಿ ಈ ದುರಂತ ಸಂಭವಿಸಿದೆ.

ಮೃತರನ್ನು ಶಿವಗಂಗಾದ ಅತ್ತೆ ರತ್ನಮ್ಮ ಹಾಗೂ ಸೊಸೆ ಅನಿತಾ ಎಂಬುದಾಗಿ ಗುರುತಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಶಿವಗಂಗಾದವರು ಇವರೆಂಬುದು ತಿಳಿದು ಬಂದಿದೆ. ಮಂಜುನಾಥ್ ಹಾಗೂ ಮಂಜಮ್ಮ ಎಂಬುವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿನಲ್ಲಿ ಹೊಸದುರ್ಗ ದಿಂದ ಹೊಳಲ್ಕೆರೆಗೆ ತೆರಳುತ್ತಿದ್ದಂತ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ. ಈ ಸಂಬಂಧ ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವೃದ್ಧೆ ಮೇಲೆ ಅತ್ಯಾಚಾರ ಎಸಗಿದ ಅಪರಿಚಿತ

• ಉದಯವಾಹಿನಿ, ಚಿಂಚೋಳಿ

ಅಪರಿಚಿತ ವ್ಯಕ್ತಿಯೊಬ್ಬ ವೃದ್ಧೆ ಮೇಲೆ ಅತ್ಯಾಚಾರ ಎಸಗಿ ಪರಾರಿಯಾದ ಘಟನೆ ಚಂದ್ರಂಪಳ್ಳಿಯಲ್ಲಿ ನಡೆದಿದೆ. ಊರೂರು ಅಲೆಯುತ್ತಿದ್ದ ತಾಲ್ಲೂಕಿನ ಐನೋಳ್ಳಿ ಗ್ರಾಮದ ವ್ಯಕ್ತಿಯೊಬ್ಬ ರಾತ್ರಿ ಮನೆ ಹೊಕ್ಕು ವೃದ್ಧೆಯ ಮೇಲೆ ಅತ್ಯಾಚಾರ ಎಸಗಿ ಪರಾರಿಯಾಗಿದ್ದಾನೆ. ವೃದ್ಧೆಯನ್ನು ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಎಂಎಲ್‌ಸಿ ಆಧರಿಸಿ ಚಿಂಚೋಳಿ ಠಾಣೆಯ ಪೊಲೀಸರು ಸಂತ್ರಸ್ತೆಯ ಹೇಳಿಕೆ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ಹೊಸ ಕಟ್ಟಡಕ್ಕೆ ಜಿಲ್ಲಾಡಳಿತ ಕಚೇರಿ ಸ್ಥಳಾಂತರ

• ಉದಯವಾಹಿನಿ, ರಾಯಚೂರು

ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆಯ ದಿನ ಕಲಬುರಗಿಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ರಾಯಚೂರು ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಲು ತೀರ್ಮಾನ ಕೈಗೊಂಡ ನಂತರ ಜಿಲ್ಲೆಯಲ್ಲಿ ಸರ್ಕಾರಿ ಚಟುವಟಿಕೆಗಳು ಬಿರುಸಿನಿಂದ ಸಾಗಿವೆ. ನನೆಗುದಿಗೆ ಬಿದ್ದಿದ್ದ ಯೋಜನೆಗಳೂ ಮರುಜೀವ ಪಡೆದುಕೊಳ್ಳುತ್ತಿವೆ.

ಜಿಲ್ಲಾಡಳಿತವು ಅಧಿಕಾರಿಗಳ ಜಿಲ್ಲಾ ಮಟ್ಟದ ಸಭೆ ನಡೆಸಿ ರಾಯಚೂರು ನಗರ ಯೋಜನಾ ಪ್ರದೇಶವನ್ನು (ಎಲ್.ಪಿ.ಎ) ವಿಸ್ತರಿಸಲು ಯೋಜನೆ ರೂಪಿಸಿದೆ. ಇನ್ನು ರಾಯಚೂರು ನಗರ ವ್ಯಾಪ್ತಿಗೆ 25 ಗ್ರಾಮಗಳನ್ನು ಸೇರಿಸಿಕೊಳ್ಳಲು ಸಕಲ ಸಿದ್ಧತೆ ಮಾಡಿಕೊಂಡಿದೆ. ನಗರ ವಿಸ್ತಾರ ಹೆಚ್ಚಾಗಿದ್ದರೂ ಜಿಲ್ಲಾಧಿಕಾರಿ ಕಚೇರಿಗಳು ಚಿಕ್ಕದಾದ ಕೊಠಡಿಗಳಲ್ಲಿ ನಡೆಯುತ್ತಿವೆ. ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಕಿರಿದಾದ ಜಾಗದಲ್ಲಿ ಕಾರ್ಯನಿರ್ವಹಿಸುವುದು ಕಷ್ಟವಾಗುತ್ತಿದೆ.



ಉದಯವಾಹಿನಿ ಚಿತ್ರ

ಆವರಣ ಸಮತಟ್ಟು ಇಲ್ಲದ ಕಾರಣ ವಾಹನಗಳ ನಿಲುಗಡೆಗೂ ಜಾಗವಿಲ್ಲದಂತಾಗಿದೆ.


ಹೀಗಾಗಿ ಜಿಲ್ಲಾಡಳಿತ ಯಕ್ಲಾಸಪುರದ ಬಳಿ ಹೊಸದಾಗಿ ನಿರ್ಮಿಸಿದ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲು ಭರದ ಸಿದ್ಧತೆ ನಡೆಸಿದೆ. ಜಿಲ್ಲಾಧಿಕಾರಿ ಹೊಸ ಕಚೇರಿ ಕಟ್ಟಡ ಹಳೆಯ ಕಚೇರಿಯಿಂದ ಕೇವಲ 2 ಕಿ.ಮೀ ಅಂತರದಲ್ಲಿ ಇದೆ. ಸಂಚಾರ ಸುಗಮಗೊಳಿಸುವ ದಿಸೆಯಲ್ಲಿ ಲಿಂಗ ಸುಗೂರು ರಸ್ತೆಯಿಂದ ಡ್ಯಾಡಿ ಕಾಲೊನಿ ಮಾರ್ಗವಾಗಿ ಯಕ್ಲಾಸಪುರ ವರೆಗೂ ದ್ವಿಪಥ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕಾಮಗಾರಿ ಮಂದಗತಿಯಲ್ಲಿ ಸಾಗಿದ್ದು, ಮಾರ್ಚ್ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

# ಜನರನ್ನು ತಿದ್ದುವ ಗುಣಗಾನ ಹೊಂದಿದ್ದ ಶ್ರೀ ಕನಕದಾಸರ ವಚನಗಳು

• ಉದಯವಾಹಿನಿ, ಸಿಂಧನೂರು

ನಗರದ ತಾಲ್ಲೂಕು ಆಡಳಿತ ವತಿಯಿಂದ ತಾಲ್ಲೂಕು ಕಛೇರಿ ಹಾಗೂ ಕನಕ ಸರ್ಕಲ್ ನಲ್ಲಿ ಕನಕದಾಸಸರು ಭಾವಚಿತ್ರಕ್ಕೆ ಮಾಲಾರ್ಪಣೆ ಪೂಜೆ ಭಕ್ತಶ್ರೇಷ್ಠ ಕವಿ ಶ್ರೀ ಕನಕದಾಸರ 537ನೇ ಜಯಂತಿ ಆಚರಣೆ ಮಾಡಲಾಯಿತು.

ನಂತರ ಮಾತನಾಡಿದ ತಾಲ್ಲೂಕು ದಂಡಾಧಿಕಾರಿ ಅರುಣ್ ಕುಮಾರ್ ಎಚ್ ದೇಸಾಯಿ ಅವರು ಶ್ರೀ ಕನಕದಾಸರು ತನ್ನ ಭಕ್ತಿ ಮೂಲಕ ಶ್ರೀ ಕೃಷ್ಣ ದೇವರನ್ನು ಕಂಡವರು ಶ್ರೇಷ್ಠ ಭಕ್ತ ಕನಕದಾಸರು ತಮ್ಮ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲಯನೇನಾದರೂ ಬಲ್ಲಿರಿ ಎಂದು ಇಡೀ ದೇಶಕ್ಕೆ ಸಾರಿರುವ ಮಹಾನ್ ಕವಿ ಭಕ್ತ ಕನಕದಾಸರು ಇವತ್ತು ನಮ್ಮೆಲ್ಲರಿಗೂ ಮಹತ್ವದ ದಿನವಾಗಿದೆ ಈಗಾಗಿ ಆದರ್ಶ ತತ್ವಗಳನ್ನು ಅವರು ಮಾರ್ಗದರ್ಶನ ನಾವೆಲ್ಲರೂ ಮೈಗೂಡಿಸಿ ಕೊಂಡು ಸಾಗಬೇಕಾಗಿದೆ ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

ನಂತರ ಮಾಜಿ ಸಂಸದರು ಕೆ ವಿರೂಪಾಕ್ಷಪ್ಪ ಅವರು ಶ್ರೇಷ್ಠ ಕನಕದಾಸರು ಆದರ್ಶ. ತತ್ವಗಳು ಸಾಧನೆಗಳು ಒಂದು ಕಾಲಕ್ಕೂ ಸೀಮಿತವಾಗಿದೆ ಸಾರ್ವಕಾಲಿಕ ಶ್ರೇಷ್ಠ ಕವಿ ದಾಸರು ವಂಚನೆಗಳ ಜೀವಂತವಾಗಿ ಎಂದು ಹೇಳಿದರು. ಎಂಎಲ್ಸಿ ಬಸನಗೌಡ ಬಾದರ್ಲಿ ಹಾಗೂ ಮಾಜಿ ಸಚಿವ ವೆಂಕಟರಾವ್ ನಾಡಗೌಡ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ. ಸಮಾಜದ ತಾಲ್ಲೂಕು ಅಧ್ಯಕ್ಷ ಭೀಮಣ್ಣ. ಕಾರ್ಯದರ್ಶಿ ಕಿಚ್ಚ ಸುರೇಶ ಅಮರೇಶ್ ಕುರಿಕಾರ .ಎಚ್ ಎನ್ ಬಡಿಗೇರ. ಅಮರೇಶಪ್ಪ ಮೈಲಾರಿ. ವೆಂಕೋಬ ನಾಯಕ್ ಏಳು ಕುರಿ ಮಲ್ಲಪ್ಪ. ಮಲ್ಲಪ್ಪ ಮಾಡಿಗೇರಿ ಖಾಜಿ ಮಲಿಕ್.ಸೈಯದ್ ಆಸೀಫ್ ಪೌರಾಯುಕ್ತ ಮಂಜುನಾಥ ಗುಂಡೂರ, ನಗರ ಠಾಣೆಯ ಪಿಎಸ್‌ಐ ದುರುಗಪ್ಪ ಡೊಳ್ಳಿನ, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಹಿರೇಮಠ. ಗಂಗಣ್ಣ ಡಿಸ್. ಲಕ್ಷ್ಮಣ ಭೋವಿ ಶ್ರೀನಿವಾಸ್ ವೈ.ರಾಮಣ್ಣ ಯಾದವ್. ಲಿಂಗಪ್ಪ .ಮಲ್ಲಪ್ಪ ಯಾದವ್ ವೆಂಕಟೇಶ್ ಬಾದರ್ಲಿ. ಸೇರಿದಂತೆ ಇತರರು ಉಪಸ್ಥಿತರಿದ್ದರು.

> ಶ್ರೀ ಕನಕದಾಸರು ತಮ್ಮ ವಚನಗಳ ಮೂಲಕ ಮೂಢನಂಬಿಕೆಗಳನ್ನು ದೂರು ಮಾಡಿದರು. ಯುವ ಪೀಳಿಗೆಯನ್ನು ಸರಿದಾರಿಯಲ್ಲಿ ನಡೆಸುವ ವಚನಗಳಿಂದ ತಿದ್ದುವುದು ಅವರು ಗುಣಗಾನ ಆಗಿತ್ತು -ಹಂಪನಗೌಡ ಬಾದರ್ಲಿ, ಶಾಸಕ

# ಬರದ ನಾಡಿನಲ್ಲಿ ಮನೆ ಮಾಡಿದ ಜಲ ಸಂಭ್ರಮ

• ಉದಯವಾಹಿನಿ, ಜಗಳೂರು

ರಾಜ್ಯದಲ್ಲೇ ಅತ್ಯಂತ ಹಿಂದುಳಿದ, ಶಾಶ್ವತ ಬರಪೀಡಿತ ತಾಲ್ಲೂಕು ಎಂಬ ಹಣೆಪಟ್ಟಿ ಹೊಂದಿದ್ದ ಜಗಳೂರು ತಾಲ್ಲೂಕಿನ ಎಲ್ಲೆಡೆ ಈಗ ನೀರಿನ ಕಲರವ ಕೇಳಿ ಬರುತ್ತಿದೆ. ಐದಾರು ದಶಕಗಳಿಂದ ಹನಿ ನೀರಿಲ್ಲದೇ ಬರಿದಾಗಿದ್ದ ಬಹುತೇಕ ಕೆರೆಗಳು ಇದೀಗ ಕೋಡಿ ಹರಿಯುತ್ತಿದ್ದು, ಜಲಸಂಭ್ರಮ ಮನೆಮಾಡಿದೆ.

ರಾಜ್ಯದಲ್ಲೇ ಮೊದಲ ದೊಡ್ಡ ಏತನೀರಾವರಿ ಯೋಜನೆ ಎನಿಸಿರುವ, ತುಂಗಭದ್ರಾ ನದಿಯಿಂದ ಜಗಳೂರು ವಿಧಾನಸಭಾ ಕ್ಷೇತ್ರದ 57 ಕೆರೆಗಳನ್ನು ತುಂಬಿಸುವ 660 ಕೋಟಿ ವೆಚ್ಚದ ಯೋಜನೆ ಸಂಪೂರ್ಣ ಯಶಸ್ವಿಯಾಗಿದೆ.

57 ಕೆರೆಗಳ ಪೈಕಿ 25 ದೊಡ್ಡ ಕೆರೆಗಳು ತುಂಬಿ ಕೋಡಿ ಹರಿದಿದ್ದು, 20ಕ್ಕೂ ಹೆಚ್ಚು ಕೆರೆಗಳಲ್ಲಿ ಶೇ 70ರಷ್ಟು ನೀರು ಸಂಗ್ರಹವಾಗಿದೆ. 57 ಕೆರೆಗಳ ಪೈಕಿ 45 ಕೆರೆಗಳಿಗೆ ಪೈಪ್ ಲೈನ್ ಸಂಪರ್ಕ ಕಲ್ಪಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದಾಗಿ 12 ಕೆರೆಗಳಿಗೆ ಪಪ್ ಲೈನ್ ಸಂಪರ್ಕ ಕಲ್ಪಿಸುವುದು ವಿಳಂಬವಾಗಿದೆ. ಮುಂದಿನ ಒಂದೆರೆಡು ತಿಂಗಳಲ್ಲಿ ಎಲ್ಲಾ ಕೆರೆಗಳಿಗೆ ನೀರು ಹರಿಸುವ ದಿಸೆಯಲ್ಲಿ ನೀರಾವರಿ ಇಲಾಖೆ ಅಧಿಕಾರಿಗಳು ಶ್ರಮಿಸುತ್ತಿದ್ದಾರೆ.

1960ರ ದಶಕದಿಂದ ಜಗಳೂರು ತಾಲ್ಲೂಕಿಗೆ ನೀರಾವರಿ ಯೋಜನೆ ಜಾರಿಗೊಳಿಸಬೇಕು ಎಂಬ ಬೇಡಿಕೆ ಇದ್ದರೂ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ 5 ದಶಕ ಕಳೆದರೂ ಬೇಡಿಕೆ ನನೆಗುದಿಗೆ ಬಿದ್ದಿತ್ತು. 2018ರಲ್ಲಿ ಜಗಳೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆ ಸಂದರ್ಭದಲ್ಲಿ ಸಿರಿಗೆರೆ ಶ್ರೀಗಳ ಒತ್ತಡದ ಫಲವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಯೋಜನೆ ಘೋಷಿಸಿ ಅನುದಾನ ನೀಡಿದ್ದರು. ನಂತರ ಬಂದ ಸರ್ಕಾರಗಳ ಸಹಕಾರ ಮತ್ತು ಅಂದು ಶಾಸಕರಾಗಿದ್ದ ಎಚ್.ಪಿ. ರಾಜೇಶ್, ಎಸ್.ವಿ. ರಾಮಚಂದ್ರ ಹಾಗೂ ಹಾಲಿ ಶಾಸಕ ಬಿ. ದೇವೇಂದ್ರಪ್ಪ ಅವರ ನಿರಂತರ ಶ್ರಮದಿಂದಾಗಿ ಕನಸಿನ ಗಂಟು ಎನಿಸಿದ್ದ ಮಹತ್ವದ 57 ಕೆರೆ ತುಂಬಿಸುವ ಯೋಜನೆ ಸಾಕಾರಗೊಂಡಿದೆ.

# ಸಂತ ಕನಕದಾಸ ಜಯಂತ್ಯುತ್ಸವ

## • ಕುಲ ಕುಲ ಕುಲವೆಂದು ಬಡಿದಾಡದಿರಿ: ಅಪ್ಪಾಜಿ ನಾಡಗೌಡ

• ಉದಯವಾಹಿನಿ ಮುದ್ದೇಬಿಹಾಳ

ಎಲ್ಲಾ ಶರಣರು ಸಂತರು ದೇವರನ್ನು ಸಾಕ್ಷಾತ್ಕಾರಿಸಿಕೊಂಡಿದ್ದರು ಕಾರಣ ಅವರಲ್ಲಿ ಯಾವ ಸ್ವಾರ್ಥ ಮೇಲು ಕೀಳು ಇರಲಿಲ್ಲ ಹೀಗಾಗಿ ದೇವರೇ ಅವರಿಗೆ ಸಾಕ್ಷರತೆವಾಗಿ ಮಾನವ ಕಲ್ಯಾಣಕ್ಕಾಗಿ ಮಾರ್ಗದರ್ಶನ ಮಾಡುತ್ತಿದ್ದರು ಆದರೆ ನಮ್ಮಲ್ಲಿ ಸ್ವಾರ್ಥ ಮೇಲು ಕೀಳು ಭಾವ ತುಂಬಿದ ಕಾರಣ ದೇವರನ್ನು ಕಾಣಲು ಸಾಧ್ಯವಿಲ್ಲವೆಂದು ಕೆಎಸ್ ಡಿ ನಿಗಮದ ಅಧ್ಯಕ್ಷ ಶಾಸಕ ಸಿ.ಎಸ್ ನಾಡಗೌಡ ಅಪ್ಪಾಜಿ ಹೇಳಿದರು ಸೋಮುವಾರ ತಹಶೀಲ್ದಾರ ಕಚೇರಿ ಸಭಾ ಭವನದಲ್ಲಿ ತಾಲ್ಲೂಕ ಆಡಳಿತದಿಂದ ಹಮ್ಮಿಕೊಂಡ ಸಂತ ಶ್ರೇಷ್ಟ ಕನಕದಾಸರ ಜಯಂತೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು.

ಕನಕದಾಸರು ಕುಲ ಕುಲವೆಂದು ಬಡದಾಡದಿರಿ ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ ಎಂದಿದ್ದಾರೆ ಮಾಡುವ ವೃತ್ತಿಯಿಂದ ಜಾತಿ ಬಂತು ವಿನಃ ದೇವರು ಸೃಷ್ಟಿಸಿದ್ದು ಹೆಣ್ಣು ಗಂಡು ಮಾತ್ರವೇ ಬದಲಾದ ಜೀವನ ಶೈಲಿ ಆಯ್ಕೆ ಮಾಡಿಕೊಂಡ ವೃತ್ತಿ ಜಾತಿಯಾಗಿ ಪರಿವರ್ತನೆಯಾಗಿದೆ ಒಗ್ಗಟ್ಟು ತಡೆಯವುದನ್ನು ಬಿಟ್ಟು ಒಡಕುಮಾಡವುದು ಬಿಡಬೇಕು ಎಂದರು. ವಿಶೇಷ ಉಪನ್ಯಾಸವನ್ನು ಉಪನ್ಯಾಸಕ ಪರಶುರಾಮ ಚೌಡಿಕೇರ ನೀಡಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ ಬಲರಾಮ ಕಟ್ಟಿಮನಿ, ತಾಪಂ ಇಒ ಎನ್ ಎಸ್ ಮಸಳಿ, ಬಿಇಒ ಬಿಎಸ್ ಸಾವಳಗಿ, ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ , ತಾಲ್ಲೂಕ ಕುರಬರ ಸಂಘದ ಅಧ್ಯಕ್ಷ ಎಂ ಎನ್ ಮದರಿ, ಕೃಷಿ ಇಲಾಖೆಯ ಎಸ್ ಡಿ ಬಾವಿಕಟ್ಟಿ, ಸಮಾಜ ಕಲ್ಯಾಣ ಇಲಾಖೆಯ ವಿ ಜಿ ಮಠ, ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಪುರಸಭೆ ಸದಸ್ಯರಾದ ಸಹನಾ ಬಡಿಗೇರ, ಪ್ರತಿಭಾ ಅಂಗಡಗೇರಿ, ಭಾರತಿ ಪಾಟೀಲ್, ಸಂಗಮ್ಮ ದೇವರಳ್ಳಿ, ಗುರು ತಾರನಾಳ, ಬಾಪುರಾವ ದೇಸಾಯಿ, ಬಿ ಕೆ ಬಿರಾದಾರ,ಮಲಕೇಂದ್ರಗೌಡ ಪಾಟೀಲ್,ಸತೀಶ ತಿವಾರಿ, ಸಂತೋಷ ನಾಯ್ಕೋಡಿ ಸಂಗಣ್ಣ ಮೇಲಿನಮನಿ,ಆರ್ ಎಸ್ ಹಿರೇಗೌಡರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಮಾಜದ ಭಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು ಶಿಕ್ಷಕ ಗುಂಡು ಚವ್ಹಾಣ ನಿರೂಪಿಸಿ ವಂದಿಸಿದರು

**ಶಾಸಕರ ಆರೋಗ್ಯದಲ್ಲಿ ಏರುಪೇರು;** ಕನಕದಾಸ ಜಯಂತಿಯಲ್ಲಿ ಭಾಗವಹಿಸಿದ್ದ ಶಾಸಕ ಸಿ.ಎಸ್ ನಾಡಗೌಡರ ಆರೋಗ್ಯದಲ್ಲಿ ಏರುಪೇರಾಗಿ ಕೆಲ ಸಮಯ ಆತಂಕವನ್ನು ಉಂಟುಮಾಡಿತ್ತು ನಿತ್ಯ ಸೇವಿಸುವ ಮಾತ್ರೆ ತೆಗೆದುಕೊಳ್ಳದ ಕಾರಣ ಶಾಸಕರಿಗೆ ಸ್ವಲ್ಪ ತಲೆಸುತ್ತು ಬಂದಂತಾಗಿತ್ತು ಮಾತ್ರೆ ತೆಗೆದುಕೊಂಡ ನಂತರ ಚೇತರಿಕೆ ಕಂಡು ಬಂತು ಕಾರ್ಯಕ್ರಮದಿಂದ ತೆರಳಿದ ಶಾಸಕರನ್ನು ವೈದ್ಯರು ಪರೀಕ್ಷಿಸಿದ್ದು ಆರೋಗ್ಯವಾಗಿದ್ದಾರೆ.



ಉದಯವಾಹಿನಿ ಚಿತ್ರ

**ತಪ್ಪು ಮಾಡಿದಾಗ ಟೀಕೆ ಮಾಡುವ ಅಧಿಕಾರವಿದೆ**

> ಅಮೇರಿಕದ ಅಧ್ಯಕ್ಷ ಟ್ರಂಪ್ ಅವರ ಮೂಲವೃತ್ತಿ ಕ್ಷೌರಿಕವೃತ್ತಿಯಾಗಿತ್ತು ಯಾರಲ್ಲಿ ಬೆಳಯುವ ಸಾಮರ್ಥ್ಯ ವಿಶ್ವಾಸವಿದೆ ಅವರು ಎಲ್ಲಿ ಬೇಕಾದರೂ ತಲುಪಬಹುದು, ನರೇಂದ್ರ ಮೋದಿಯವರರು ಬೇರೆ ಪಕ್ಷದಲ್ಲಿ ಇರಬಹುದು ಅವರು ಸಾಮಾನ್ಯ ಪರಿವಾರದಲ್ಲಿ ಹುಟ್ಟಿ ಇಂದು ಅತಿಹೆಚ್ಚು ಜನಸಂಖ್ಯೆಯುಳ್ಳ ದೇಶದ ಪ್ರಧಾನಿಯಾಗಿದ್ದಾರೆ ರಾಜಕಾರಣ ಬೇರೆ ಅವರು ನಮ್ಮ ಪ್ರಧಾನಿ ಹೌದು ಒಳ್ಳೆಯ ಕೆಲಸ ಮಾಡಿದಾಗ ಹೊಗಳಬೇಕು ತಪ್ಪು ಮಾಡಿದಾಗ ಟೀಕೆ ಮಾಡುವ ಅಧಿಕಾರವಿದೆ , ಅಂಬೇಡ್ಕರ್ ಅವರು ಬೀದಿ ದೀಪದಲ್ಲಿ ಓದಿ ದೇಶಕ್ಕೆ ಸಂವಿಧಾನ ನೀಡಿದ್ದಾರೆ – ಸಿ.ಎಸ್ ನಾಡಗೌಡ, ಶಾಸಕರು

# ಶಾಲಾ ಮಕ್ಕಳ ಸುರಕ್ಷತೆಗೆ ಇರಲಿ ಆದ್ಯತೆ

• ಉದಯವಾಹಿನಿ, ಉಡುಪಿ

ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಚಾಲಕರು ಅನುಸರಿಸಬೇಕಾದ ಹಲವಾರು ಮಾನದಂಡಗಳಿದ್ದರೂ ನಗರದಲ್ಲಿ ಕೆಲವರು ಅವುಗಳನ್ನು ಉಲ್ಲಂಘಿಸುತ್ತಿದ್ದಾರೆಂಬ ಆರೋಪಗಳು ಪದೇ ಪದೇ ಕೇಳಿ ಬರುತ್ತಲೇ ಇವೆ. ನಗರದಲ್ಲಿ ದಿನನಿತ್ಯ ನೂರಾರು ಶಾಲಾ ವಾಹನಗಳು ಓಡಾಟ ನಡೆಸುತ್ತವೆ.

ಜೊತೆಗೆ ಆಟೊ, ವ್ಯಾನ್, ಟೆಂಪೊ ಟ್ರಾವೆಲರ್, ಮಿನಿ ಬಸ್‌ಗಳಲ್ಲಿಯೂ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಮಕ್ಕಳನ್ನು ಕರೆದೊಯ್ಯುವ ವಾಹನಗಳು ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂಬ ಸೂಚನೆಗಳಿದ್ದರೂ, ಇಂತಹ ವಾಹನಗಳು ಅಪಘಾತಕ್ಕೆ ಒಳಗಾದಾಗ ಮಕ್ಕಳ ಸುರಕ್ಷತೆಯ ಪ್ರಶ್ನೆಗಳು ಕಾಡುತ್ತವೆ. ಈಚೆಗೆ ಮಣಿಪಾಲ ಸಮೀಪದ ಕೆಳ ಪರ್ಕಳದ ಬಳಿ ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ರಿಕ್ಷಾವೊಂದು ಪಲ್ಟಿಯಾಗಿ ಮೂವರು ವಿದ್ಯಾರ್ಥಿಗಳು ಗಾಯಗೊಂಡಿದ್ದರು.

ಅತಿ ವೇಗದಿಂದಾಗಿ ಇಂತಹ ಅಪಘಾತಗಳು ಸಂಭವಿಸುತ್ತಿವೆ ಎಂಬ ಆರೋಪಗಳು ಕೂಡ ಸಾರ್ವಜನಿಕ ವಲಯದಿಂದ ಕೇಳಿ ಬರುತ್ತಲೇ ಇವೆ. ಕೆಲವು ಅಪರೂಪದ ಪ್ರಕರಣಗಳಲ್ಲಿ ಚಾಲಕ ಮದ್ಯಪಾನ ಮಾಡಿರುವ ಕುರಿತೂ ಆರೋಪಗಳು ಕೇಳಿ ಬಂದಿವೆ. ಏಕಮುಖ ಸಂಚಾರವಿರುವ ರಸ್ತೆಗಳಲ್ಲೂ ವಿರುದ್ಧ ದಿಕ್ಕಿನಿಂದ ಶಾಲಾ ವಾಹನಗಳನ್ನು ಚಲಾಯಿಸಿಕೊಂಡು ಬರುವ ಪ್ರಸಂಗಗಳೂ ನಗರದ ಕೆಲವೆಡೆ ನಡೆದಿವೆ ಎನ್ನುತ್ತಾರೆ ಸಾರ್ವಜನಿಕರು. ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚು ಮಕ್ಕಳನ್ನು ಕೂರಿಸಬಾರದು, ಶಾಲಾ ವಾಹನಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ, ಜಿಪಿಎಸ್ ಕಡ್ಡಾಯವಾಗಿ ಅಳವಡಿಸಬೇಕೆಂಬ ನಿಯಮವಿದೆ. ಶಾಲಾ ಮಕ್ಕಳನ್ನು ಕರೆದೊಯ್ಯುವಾಗ ಮತ್ತು ಮತ್ತೆ ಮನೆಗೆ ಬಿಡುವಾಗ ಸಹಾಯಕರೊಬ್ಬರು ಇರಬೇಕು ಎಂಬ ಸೂಚನೆಗಳಿದ್ದರೂ ಕೆಲವೆಡೆ ಇವುಗಳು ಪಾಲನೆಯಾಗುತ್ತಿಲ್ಲ ಎಂಬ ಆರೋಪಗಳು ಕೂಡ ಕೇಳಿ ಬರುತ್ತಿವೆ. ಶಾಲಾ ವಾಹನಗಳ ನೋಂದಣಿ ಪ್ರಮಾಣ ಪತ್ರದ ಜೊತೆಗೆ ಫಿಟ್‌ನೆಸ್ ಸರ್ಟಿಫಿಕೆಟ್ ಕೂಡಾ ಕಡ್ಡಾಯ. 15 ವರ್ಷ ಅವಧಿ ಮೀರಿದ ವಾಹನಗಳನ್ನು ಬಳಸಬಾರದು, ವಿಮೆ ಮಾಡಿಸಿರಬೇಕು, ಚಾಲಕರ ಹಿನ್ನೆಲೆ ಅರಿತಿರಬೇಕು ಎಂಬ ಸೂಚನೆಯೂ ಇದೆ.

ಶಾಲಾ ಮಕ್ಕಳನ್ನು ಕರೆದೊಯ್ಯುವ ಎಲ್ಲಾ ವಾಹನಗಳನ್ನು ಸಂಬಂಧಪಟ್ಟವರು ತಪಾಸಣೆ ಮಾಡಬೇಕು. ನಿಯಮ ಮೀರಿರುವುದು ಕಂಡು ಬಂದರೆ ಅಂತಹ ಚಾಲಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪಾಲಕರು ಆಗ್ರಹಿಸಿದ್ದಾರೆ.

'ಪ್ರಕರಣ ದಾಖಲಿಸಲಾಗುವುದು'ಶಾಲೆಯವರ ಅಧೀನದಲ್ಲಿರುವ ಬಸ್‌ಗಳ ಚಾಲಕರು ನಿಯಮ ಮೀರಿದ್ದು ಕಂಡು ಬಂದರೆ ಶಾಲೆಯವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.



ಉದಯವಾಹಿನಿ ಚಿತ್ರ

**ಚಾಲಕರ ಮೇಲೆ ಬೇಕಿದೆ ನಿಗಾ**

> ಶಾಲಾ ಮಕ್ಕಳನ್ನು ಕರೆದೊಯ್ಯುವ ರಿಕ್ಷಾಶಾಲಾ ವಾಹನಗಳನ್ನು ಅತಿ ವೇಗ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡುವುದು ಕಂಡುಬಂದರೆ ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ನಿಯಮಗಳ ಗಂಭೀರ ಉಲ್ಲಂಘನೆ ಕಂಡು ಬಂದರೆ ಚಾಲಕರ ಚಾಲನಾ ಪರವಾನಗಿ ಅಥವಾ ಆರ್‌ಸಿಯನ್ನು ಅಮಾನತುಗೊಳಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಶಿಫಾರಸು ಮಾಡಲಾಗುವುದು. ನಿಯಮ ಉಲ್ಲಂಘನೆಯ ಪ್ರಕರಣಗಳಲ್ಲಿ ಚಾಲಕರ ವಿರುದ್ಧ ಕ್ರಮ ಕೈಗೊಂಡರೆ ಆ ವಿಚಾರವನ್ನು ಸಂಬಂಧಪಟ್ಟ ಶಾಲೆಗಳ ಅಧಿಕಾರಿಗಳ ಗಮನಕ್ಕೆ ತರಲಾಗುವುದು -ಡಾ.ಅರುಣ್ ಕೆ , ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

# ಅಮೆರಿಕಗೆ ಭೇಟಿ ನೀಡುವ ವಿದೇಶಿಗರ ಪೈಕಿ ಭಾರತೀಯರಿಗೆ 2ನೇ ಸ್ಥಾನ

## ಅಮೆರಿಕಕ್ಕೆ ಆಗಮಿಸುತ್ತಿರುವ ವಿದೇಶಿಗರ ಪೈಕಿ 2ನೇ ಅತಿ ಹೆಚ್ಚು ಮಂದಿ ಭಾರತೀಯರು, ಶೇ. 32ರಷ್ಟು ಪ್ರಯಾಣಿಕರ ಹೆಚ್ಚಳ

**ವಾಷಿಂಗ್ಟನ್:** ಅಮೆರಿಕಕ್ಕೆ ಆಗಮಿಸುತ್ತಿರುವ ವಿದೇಶಿಗರ ಪೈಕಿ 2ನೇ ಅತಿ ಹೆಚ್ಚು ಮಂದಿ ಭಾರತೀಯರಾಗಿದ್ದಾರೆ. ಇನ್ನು ಅಮೆರಿಕಗೆ ಭೇಟಿ ನೀಡುವ ಭಾರತೀಯರ ಸಂಖ್ಯೆಯು ಕೂಡ ವಾರ್ಷಿಕ ಶೇಕಡಾ 27 ರಷ್ಟು ಹೆಚ್ಚಳವಾಗಿದೆ. ಈ ಪೈಕಿ ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳ ವೀಸಾ ಪ್ರಮಾಣವೇ ಹೆಚ್ಚಿದೆ. ಇತ್ತೀಚೆಗೆ ಯುಎಸ್ ನ್ಯಾಷನಲ್ ಟ್ರಾವೆಲ್ ಮತ್ತು ಟೂರಿಸಂ ಆಫೀಸ್ (ಎನ್‌ಟಿಟಿಒ) ಪ್ರಕಟಿಸಿದ ಅಂಕಿ ಅಂಶಗಳ ಪ್ರಕಾರ, 2024 ಜನವರಿ ಮತ್ತು ಮೇ ನಡುವೆ ಯುಎಸ್‌ಗೆ ಪ್ರಯಾಣಿಸುವ 2ನೇ ಅತಿದೊಡ್ಡ ದೇಶವಾಗಿದೆ. ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿ ಭಾರತೀಯರು ಅಮೆರಿಕಗೆ ಭೇಟಿ ನೀಡಿದ್ದಾರೆ. ಈ ಮೂಲಕ ಟೂರಿಸಂಗೆ ಭಾರತೀಯರೇ ದೊಡ್ಡ



**ಹಿಂದಿನ ವರ್ಷಗಳಿಗಿಂತ ಶೇ 27 ರಷ್ಟು ಹೆಚ್ಚಳ**

ಮಾರುಕಟ್ಟೆ ಒದಗಿಸಿದ್ದಾರೆ.

**ಭಾರತೀಯರಿಗೆ 2ನೇ ಸ್ಥಾನ:** 2024 ರ ಮೇ ಒಂದೇ ತಿಂಗಳಲ್ಲಿ 2,63,150 ಮಂದಿ ಭಾರತದಿಂದ ಅಮೆರಿಕಕ್ಕೆ ಆಗಮಿಸಿದ್ದಾರೆ. 2023 ಮೇ ನಲ್ಲಿ 1,99,364 ಆಗಮಿಸಿದ್ದರು. ಈ ಮೂಲಕ ಒಂದೇ ವರ್ಷದಲ್ಲಿ ಶೇಕಡಾ 32 ರಷ್ಟು ಪ್ರಯಾಣಿಕರ ಹೆಚ್ಚಳವಾಗಿದೆ. ಈ ತಿಂಗಳಲ್ಲಿಯೇ ಅಮೆರಿಕಗೆ ಭೇಟಿ ನೀಡುವ ಭಾರತೀಯರ ಸಂಖ್ಯೆ 2ನೇ ಸ್ಥಾನಕ್ಕೆ ಪಡೆದುಕೊಂಡಿತ್ತು.

**ವಾರ್ಷಿಕ ಶೇ. 27 ರಷ್ಟು ಹೆಚ್ಚಳ**

**ಅಮೆರಿಕಕ್ಕೆ ಭೇಟಿ ನೀಡುವ ವಿದೇಶಿಗರಲ್ಲಿ ಭಾರತೀಯರು 2 ನೇ ಅತಿ ಹೆಚ್ಚು ಮಂದಿ. ಈ ಬಗ್ಗೆ ಯುಎಸ್ ನ್ಯಾಷನಲ್ ಟ್ರಾವೆಲ್ ಮತ್ತು ಟೂರಿಸಂ ಆಫೀಸ್ ಮಾಹಿತಿ ಬಿಡುಗಡೆ ಮಾಡಿದೆ. ಭಾರತೀಯರ ಸಂಖ್ಯೆಯು ಕೂಡ ವಾರ್ಷಿಕ ಶೇಕಡಾ 27 ರಷ್ಟು ಹೆಚ್ಚಳ ಆಗಿದೆ. ಈ ಬಗ್ಗೆ ವಿವರ ಇಲ್ಲಿದೆ.**

**ಭಾರತೀಯ ಪ್ರವಾಸಿಗರ ಸಂಖ್ಯೆ ಶೇಕಡಾ 37 ರಷ್ಟು ಹೆಚ್ಚಳ:** 2024 ರಲ್ಲಿ ಜನವರಿ ಮತ್ತು ಮೇ ನಡುವೆ ಒಟ್ಟಾರೆಯಾಗಿ 8,82,404 ಮಂದಿ ಭಾರೀಯರು ಆಗಮಿಸಿದ್ದಾರೆ. ಯುನೈಟೆಡ್ ಕಿಂಗ್‌ಡಮ್ ನಂತರ

- **2024 ರ ಮೇ ಒಂದೇ ತಿಂಗಳಲ್ಲಿ 2,63,150 ಮಂದಿ ಭಾರತದಿಂದ ಅಮೆರಿಕಕ್ಕೆ ಆಗಮಿಸಿದ್ದಾರೆ.**
- **ಉದ್ಯಮಿಗಳು ಹಾಗೂ ವಿದ್ಯಾರ್ಥಿಗಳ ವೀಸಾ ಬಳಕೆಯೇ ಹೆಚ್ಚಳ.**

ಭಾರತೀಯರು ಎರಡನೇ ಸ್ಥಾನದಲ್ಲಿದೆ. ಇನ್ನು 2023 ರ ಜನವರಿಯಿಂದ ಮೇ ನಡುವೆ 6,43,270 ಭಾರತೀಯ ಆಗಮಿಸಿದ್ದರು. ಇದಕ್ಕೆ ಹೋಲಿಸಿದರೆ ಶೇಕಡಾ 37.2 ರಷ್ಟು ಹೆಚ್ಚಳವಾಗಿದೆ. ಇದ ರೊಂದಿಗೆ ಅಮೆರಿಕಕ್ಕೆ ಕೆನಡಾ ಮತ್ತು ಮೆಕ್ಸಿಕೋ, ಯುನಿಟೆಡ್ ಕಿಂಗ್‌ಡಮ್ ಬಳಿಕ ಅತಿ ಹೆಚ್ಚು ವಿದೇಶಿ ಸಂದರ್ಶಕರು ಭಾರತದವರು ಎನ್ನಲಾಗಿದೆ. ಇನ್ನು ಭಾರತದಲ್ಲಿರುವ ಅಮೆರಿಕ ರಾಯಭಾರಿ ಕಚೇರಿ ಯು ಅಮೆರಿಕ ವೀಸಾ ಪ್ರಕ್ರಿಯೆಯನ್ನು ಮತ್ತಷ್ಟು ಸರಳ ಮಾಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವ ಭರವಸೆಯನ್ನು ನೀಡಿದೆ. ಇನ್ನು ಇತರ ರಾಷ್ಟ್ರಗಳ ಕಾನ್ಸುಲೇಟ್‌ಗಳ ಮೂಲಕ ಯುಎಸ್ ಪ್ರವಾಸಿ ವೀಸಾಗಳಿಗೆ ಅರ್ಜಿ ಸಲ್ಲಿಸುವ ಆಯ್ಕೆಯನ್ನು ಭಾರತ ತೀಯರಿಗೆ ನೀಡಲಾಗಿದೆ. ಇದರಿಂದ ಬಾಕಿ ಇರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಕ್ರಮವಹಿಸಲಾಗಿದೆ. ಒಟ್ಟಾರೆಯಾಗಿ ಅಮೆರಿಕ ಪ್ರವಾಸೋದ್ಯಮಕ್ಕೆ ಪ್ರಮುಖ ಮಾರುಕಟ್ಟೆಯಾಗಿ ಭಾರತ ರೂಪುಗೊಂಡಿದೆ. ವ್ಯಾಪಾರ ಉದ್ಯಮಗಳ ಅಭಿವೃದ್ಧಿಗೆ ಭಾರತೀಯರ ಕೊಡುಗೆಯು ಹೆಚ್ಚಿದೆ. ಭಾರತೀಯ ಪ್ರವಾಸೋದ್ಯಮ ಮಾರುಕಟ್ಟೆಯಲ್ಲಿ ಭಾರತೀಯರಿಗೆ ಪಾಲುದಾರಿಕೆಯನ್ನು ಹೆಚ್ಚಿಸಲಾಗುತ್ತಿದೆ.

ಈ ಮೂಲಕ ಭಾರತೀಯ ಪ್ರವಾಸಿಗರಿಗೆ ಮತ್ತಷ್ಟು ಅತ್ಯುತ್ತಮ ಯೋಜನೆಯನ್ನು ರೂಪಿಸಲು ಅಗತ್ಯ ಕ್ರಮವನ್ನು ನ್ಯಾಷನಲ್ ಟ್ರಾವೆಲ್, ಟೂರಿಸಂ ಆಫೀಸ್ ಮುಂದಾಗುತ್ತಿದೆ.

# ಪ್ರಧಾನಿಗೆ ಅದ್ದೂರಿ ಸ್ವಾಗತ

**ರಿಯೊ ಡಿ ಜನೈರೋ:** ಮೂರು ದೇಶಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ನೈಜೀರಿಯಾ ಪ್ರವಾಸ ಯಶಸ್ವಿ ಬೆನ್ನಲ್ಲೇ 19ನೇ ಜಿ-20 ಶೃಂಗಸಭೆಯಲ್ಲಿ ಭಾಗಿಯಾಗಲು ಬ್ರೆಜಿಲ್‌ನ ರಿಯೋ ಡಿ ಜನೈರೋಗೆ ಆಗಮಿಸಿದ್ದ ಅದ್ದೂರಿ ಸ್ವಾಗತ ಸಿಕ್ಕಿದೆ. ಬ್ರೆಜಿಲ್‌ನಲ್ಲಿರುವ ಭಾರತೀಯ ವಲಸಿಗರು ಸೇರಿದಂತೆ ಹಿರಿಯ ಅಧಿಕಾರಿಗಳು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅದ್ದೂರಿಯಾಗಿ ಬರಮಾಡಿಕೊಂಡರು. ಈ ವೇಳೆ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಹೊಟೇಲ್‌ನ ಹೊರಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು ನೆರೆದಿದ್ದರು. ರಿಯೊ ಡಿ ಜನೈರೊದ ಹೋಟೆಲ್ ಮುಂಬಾಗದಲ್ಲಿ ಭಾರತೀಯ ವಲಸಿಗರ ಸದ ಸ್ಯರಿಂದ ಆತ್ಮೀಯ ಸ್ವಾಗತ ನೀಡಿದ್ದರು.

ಬ್ರೆಜಿಲ್‌ನ ವೈದಿಕ ಪಂಡಿತರು ಅವರ ಮುಂದೆ ವೇದ ಮಂತ್ರಗಳನ್ನು ಪಠಿಸಿ ಪ್ರಧಾನಿಗೆ ಸ್ವಾಗತ ಕೋರಿದರು.




**ವಿಶ್ವನಾಯಕರೊಂದಿಗೆ ಚರ್ಚೆ:** 19ನೇ ಜಿ-20 ಶೃಂಗಸಭೆಯಲ್ಲಿ ಭಾಗಿಯಾಗಲು ಬ್ರೆಜಿಲ್‌ನ ರಿಯೋ ಡಿ ಜನೈರೋಗೆ ಆಗಮಿಸಿದ್ದೇನೆ. ಶೃಂಗ ಸಭೆಯ ವೇಲೆ ಜಾಗತಿಕ ನಾಯಕರೊಂದಿಗೆ ಚರ್ಚೆ ನಡೆಸಲು ಎದುರು ನೋಡುತ್ತಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ರಿಯೋ ಡಿ ಜನೈರೋಗೆ ಬಂದಿಳಿಯುತ್ತಿದ್ದಂತೆ ಅಲ್ಲಿ ಸಿಕ್ಕ ಅಭೂತ ಪೂರ್ವ ಸ್ವಾಗತದ ಬೆನ್ನಲ್ಲೇ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಈ ವಿಷಯ ತಿಳಿಸಿದ್ದಾರೆ. ರಿಯೊ ಡಿ ಜನೈರೊಗೆ ಆಗಮಿಸಿದ ನಂತರ ಭಾರತೀಯ ಸಮುದಾಯದಿಂದ ಆತ್ಮೀಯ ಮತ್ತು ಉತ್ಸಾಹಭರಿತ ಸ್ವಾಗತ ಮತ್ತಷ್ಟು ಹುಮ್ಮಸ್ಸು ಮತ್ತು ಸ್ಫೂರ್ತಿ ತರಿಸಿದೆ. ಭಾರತೀಯರ ಶಕ್ತಿ ಖಂಡಗಳಾದ್ಯಂತ ನಮ್ಮನ್ನು ಬಂಧಿಸುವ ವಾತ್ಸಲ್ಯವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ.

> **ವಿವಿಧ ವಿಶ್ವ ನಾಯಕರೊಂದಿಗೆ ಶೃಂಗಸಭೆಯ ಚರ್ಚೆಗಳು ಮತ್ತು ಫಲಪ್ರದ ಮಾತುಕತೆ ನಡೆಸಲು ಉತ್ಸುಕವಾಗಿದ್ದೇನೆ. ಜಗತ್ತಿನ ಪ್ರಮುಖ ನಾಯಕರ ಜೊತೆಗೆ ಚರ್ಚೆ ನಡೆಸಲು ಎದುರು ನೋಡುತ್ತಿದ್ದೇನೆ**
> 
> **- ನರೇಂದ್ರ ಮೋದಿ, ಪ್ರಧಾನಿ**

# ಏಷ್ಯನ್ ಚೆಸ್ ಚಾಂಪಿಯನ್‌ಶಿಪ್ ಸಮರ್ಥ್‌ಗೆ ಬೆಳ್ಳಿ

**ಕಿರ್ಗಿಸ್ತಾನ:** ಬಿಶ್ಕೆಕ್‌ನಲ್ಲಿ ನಡೆದ 2ನೇ ಏಷ್ಯನ್ ಚೆಸ್ ಚಾಂಪಿಯನ್ಶಿಪ್ 2024 ವಿಕಲಾಂಗ ವಿಭಾಗದಲ್ಲಿ ಹೊನ್ನಾವರದ ಸಮರ್ಥ ಜಗದೀಶ ರಾವ್ ಅವರು ಬೆಳ್ಳಿ ಪದಕ ಗಳಿಸಿದ್ದಾರೆ. ಸಮರ್ಥ ಅವರು ಈವರೆಗೆ ಅಂತರರಾಷ್ಟ್ರೀಯ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ 1 ಚಿನ್ನ, 3 ಬೆಳ್ಳಿ, 3 ಕಂಚಿನ ಪದಕಗಳನ್ನು ಗಳಿಸಿದ್ದಾರೆ. ಇವರು ಮೈಸೂರಿನ ಅಜಿತ್ ಎಂ.ಪಿ ಅವರ ಶಿಷ್ಯರಾಗಿದ್ದಾರೆ.

ಚೆಸ್ ಫೆಡರೇಶನ್ ಫಾರ್ ಫಿಸಿಕಲಿ ಡಿಸೇಬಲ್ಡ್ ಇಂಡಿಯಾದ ಇತಿಹಾಸದಲ್ಲಿ ಇದು ಐತಿಹಾಸಿಕ ಸಂಗತಿಯಾಗಿದೆ. ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾದ ಹಣಕಾಸು ನೆರವು ಮತ್ತು ಆಲ್ ಇಂಡಿಯಾ ಚೆಸ್ ಫೆಡರೇಶನ್, ಪಿ.ಸಿ.ಐ.ನ ಸಹಕಾರದೊಂದಿಗೆ 8 ವಿಕಲಾಂಗ ಚೆಸ್ ಆಟಗಾರರು, 8 ಸಹಾಯಕರು, ತರಬೇತುದಾರರು, ತಂಡ ವ್ಯವಸ್ಥಾಪಕರು ಮತ್ತು ಹೆಡ್ ಆಫ್ ಡೆಲಿಗೇಟ್ಸ್ ಅವರನ್ನು 2ನೇ ಏಷ್ಯನ್ ಚೆಸ್ ಚಾಂಪಿಯನ್‌ಷಿಪ್ 2024ಗೆ ಕಳುಹಿಸಲಾಯಿತು.



**ಓಪನ್ ವರ್ಗ:** ವೆಂಕಟ ಕೃಷ್ಣ ಕಾರ್ತಿಕ್ ವಿಜಯವಾಡ 6/9 ಚಿನ್ನ, ಸಮರ್ಥ ಜೆ ರಾವ್ ಕರ್ನಾಟಕ 6/9 ಬೆಳ್ಳಿ

**ಜೂನಿಯರ್ಸ್:** ಜಿನಾಯ್ ಅಂಕಿತ್‌ಭಾಯ್ ಶಾಹ್ ಗುಜರಾತ್ 4.5/9 ಬೆಳ್ಳಿ, ಆದಿತ್ಯ ಅಸಾರಾಂ ಫುಲೆ ಮಹಾರಾಷ್ಟ್ರ 4.5/9 ಕಂಚು

**ಹುಡುಗಿಯರು:** ಶೆರಾನ್ ರೇಚೆಲ್ ಅಬಿ ತಮಿಳುನಾಡು 3.5/9 ಚಿನ್ನ, ದುರ್ಕಾಸ್ರಿ ಮಾರುತಯ್ಯ ತ.ನಾಡು 5/9)

**ಮಹಿಳೆಯರು:** ಎಜಿಲರಸಿ ಗೋಪಾಲಕೃಷ್ಣ, ಕರ್ನಾಟಕ 6/9 ಅತ್ಯುತ್ತಮ ಆನ್ರೇಟೆಡ್ ಆಟಗಾರ್ತಿ.

# ವಾಯು ಗುಣಮಟ್ಟ ಕುಸಿತ ದೆಹಲಿಯಲ್ಲಿ ಶಾಲೆಗಳು ಬಂದ್

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯ ವಾತಾವರಣ ಉಸಿರುಗಟ್ಟಿಸುವಂತಾಗಿದ್ದು, ಸದ್ಯ ವಾಯು ಗುಣಮಟ್ಟ ತೀವ್ರ ಕುಸಿತ ಕಂಡಿದ್ದು, ಈ ನಡುವೆ ಇಂದಿನಿಂದ ಗ್ರೇಡೆಡ್ ರೆಸ್ಪಾನ್ಸ್ ಆಕ್ಷನ್ ಪ್ಲಾನ್ ಜಾರಿಗೊಳಿಸಲಾಗಿದೆ.

10 ಮತ್ತು 12 ನೇ ತರಗತಿಗಳನ್ನು ಹೊರತುಪಡಿಸಿ, ದೆಹಲಿಯಲ್ಲಿ ಎಲ್ಲಾ ಶಾಲೆಗಳನ್ನು ಬಂದ್ ಮಾಡಲು ಆದೇಶಿಸಲಾಗಿದೆ. ಹಾಗೇ ಸರ್ಕಾರಿ ಮತ್ತು ಖಾಸಗಿ ಕಚೇರಿಗಳಿಗೆ ಮನೆಯಿಂದಲೇ ಕೆಲಸ ಮಾಡಲು ಸೂಚಿಸಲಾಗಿದೆ.

ಸರಾಸರಿ 24 ಗಂಟೆಗಳ ವಾಯು ಗುಣಮಟ್ಟ ಸೂಚ್ಯಂಕ ನಿನ್ನೆ ಸಂಜೆ 7 ಗಂಟೆ ವೇಳೆಗೆ 457ಕ್ಕೆ ಏರಿದ್ದು, ದೆಹಲಿಯಲ್ಲಿನ ಗಾಳಿಯ ಗುಣಮಟ್ಟವು ಇನ್ನಷ್ಟು ಕುಸಿದಿದೆ ಮತ್ತು 'ತೀವ್ರಕ್ಕಿಂತ ಹೆಚ್ಚು' ವರ್ಗವನ್ನು ಉಲ್ಲಂಘಿಸಿದೆ. ಈ ಋತುವಿನಲ್ಲಿ ಮೊದಲ ಬಾರಿಗೆ ನವದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಾಳಿಯ ಗುಣಮಟ್ಟವು 'ತೀವ್ರ' ವರ್ಗಕ್ಕೆ ಕುಸಿದ ನಂತರ ಕಳೆದ ಬುಧವಾರದಿಂದ ಎರಡನೇ ಬಾರಿಗೆ 'ತೀವ್ರಕ್ಕಿಂತ ಹೆಚ್ಚಿನ' ಮಾರ್ಕ್ ನ್ನು ಉಲ್ಲಂಘಿಸಿದೆ. ದೆಹಲಿಯ ಎಲ್ಲಾ ಸ್ಟೇಷನ್‌ಗಳು 400 ಕ್ಕಿಂತ ಹೆಚ್ಚು ಸೂಚ್ಯಂಕ ಅನ್ನು ದಾಖಲಿಸಿವೆ. ಬವಾನಾ (490), ಅಶೋಕ್ ವಿಹಾರ್ (487) ಮತ್ತು ವಜೀರ್‌ಪುರ (483) ಸಂಜೆ 7 ಗಂಟೆಯ ವೇಳೆಗೆ ಹೆಚ್ಚು ಕಲುಷಿತಗೊಂಡಿವೆ.



**ನೆಲಸಮ ಕಾರ್ಯ ನಿಷೇಧ**

**ಜಿಆರ್‌ಎಪಿ-4 ಅನುಷ್ಠಾನದ ನಂತರ ಟ್ರಕ್‌ಗಳು, ಲೋಡರ್‌ಗಳು ಮತ್ತು ಇತರ ಭಾರೀ ವಾಹನಗಳು ದೆಹಲಿಗೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ. ಆದಾಗ್ಯೂ, ಅಗತ್ಯ ವಸ್ತುಗಳನ್ನು ಪೂರೈಸುವ ವಾಹನಗಳಿಗೆ ಪ್ರವೇಶವನ್ನು ಅನುಮತಿಸಲಾಗಿದೆ. ಎಲ್ಲಾ ರೀತಿಯ ನಿರ್ಮಾಣ ಮತ್ತು ನೆಲಸಮ ಕಾರ್ಯಗಳನ್ನು ನಿಷೇಧಿಸಲಾಗಿದೆ.**

# ಡೀಪ್‌ಫೇಕ್ ಅವಾಂತರ: ವಿದ್ಯಾರ್ಥಿಗಳ ನಗ್ನ ವಿಡಿಯೋ ಪ್ರಸಾರ

**ಸಿಂಗಾಪುರ:** ಜಗತ್ತಿನಾದ್ಯಂತ ಡೀಪ್ ಫೇಕ್ ಅವಾಂತರ ಹೆಚ್ಚಾಗುತ್ತಿದೆ. ಅದರಲ್ಲಿಯೂ ಸಿಂಗಾಪುರದ ಸ್ಪೋರ್ಟ್ಸ್ ಸ್ಕೂಲ್ ವಿದ್ಯಾರ್ಥಿಗಳ ನಗ್ನ ವಿಡಿಯೋ ಮತ್ತು ಫೋಟೋಗಳನ್ನು ಸಹ ಪಾಠಿಗಳು ಸೃಷ್ಟಿಸಿ ಪ್ರಸಾರ ಮಾಡುತ್ತಿರುವುದು ವಿದ್ಯಾರ್ಥಿ ಸಮುದಾಯದಲ್ಲಿ ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ. ಯಾರದೇ ದೇಹಕ್ಕೆ ಇನ್ಯಾರದೋ ತಲೆ ಅಂಟಿಸಿ ವಿಡಿಯೋಗಳನ್ನು ಸೃಷ್ಟಿ ಮಾಡುತ್ತಿದ್ದಾರೆ. ಅದರಲ್ಲೂ ಸೆಲೆಬ್ರಿಟಿಗಳು, ಚಿತ್ರ ತಾರೆಯರಿಗೆ ಈ ರೀತಿಯ ಅನುಭವ ಆಗುತ್ತಿತ್ತು., ಇದೀಗ ಶಾಲಾ ವಿದ್ಯಾರ್ಥಿಗಳಿಗೂ ಡೀಪ್ ಫೇಕ್ ಕಾಟ ಆರಂಭಿಸಿದೆ.

ಡೀಪ್‌ಫೇಕ್‌ಗಳ ಮೂಲಕ ದೃಶ್ಯ ಮತ್ತು ಆಡಿಯೊ ವಿಷಯವನ್ನು ಬದ ಲಾಯಿಸಲು ಕೃತಕ ಬುದ್ಧಿಮತ್ತೆ ತಂತ್ರಗಳನ್ನು ಬಳಸಿ ರಚಿಸಲಾಗಿದೆ.



> **16 ವರ್ಷಕ್ಕಿಂತ ಕಡಿಮೆ ವಯಸ್ಸಿನ ವ್ಯಕ್ತಿಯ ಮುಖದೊಂದಿಗೆ ಡೀಪ್‌ಫೇಕ್ ಅಶ್ಲೀಲತೆ ವಿಡಿಯೋ ಮತ್ತು ಫೋಟೋ ಹಾಕಿದರೆ ಅಪರಾಧ ಕಾಯ್ದೆ 377ರ ಅಡಿಯಲಕ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಮತ್ತು ದಂಡ ಅಥವಾ ಲಾಠಿ ಪ್ರಹಾರದ ಸಾಧ್ಯತೆಯೊಂದಿಗೆ 10 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ಹೊಂದಿದೆ ಎಂದು ಹೇಳಿದ್ದಾರೆ**

ಇದು ಇತ್ತೀಚಿನ ಮತ್ತು ತೀವ್ರಗೊಳ್ಳುತ್ತಿರುವ ಉಪದ್ರವವಾಗಿದೆ. ಹೆಣ್ಣುಮಕ್ಕಳು ಆತಂಕಕ್ಕೆ ಒಳಗಾಗುವಂತೆ ಮಾಡಿದೆ. ವಕೀಲರ ಪ್ರಕಾರ, ಇಂತಹ ಡೀಪ್ ಫೇಕ್ ವಿಡಿಯೋ ಮತ್ತು ಫೋಟೋಗಳನ್ನು ಒಳಗೊಂಡಿರುವ ಕಾಯಿದೆಗಳು ದಂಡ ಸಂಹಿತೆಯ ಅಡಿಯಲ್ಲಿ ಅಪರಾಧಗಳಾಗಿರಬಹುದು ಹೀಗಾಗಿ ಈ ರೀತಿ ಕೃತ್ಯ ಎಸಗುವ ಮಂದಿ ಎಚ್ಚರವಾಗಿರಿ ಇಲ್ಲದಿದ್ದರೆ ಸಮಸ್ಯೆ ಎದುರಿಸಬೇಕಾದೀತು ಎಂದು ಎಚ್ಚರಿಸಿದ್ದಾರೆ.

ಈ ರೀತಿಯ ಅಪರಾಧಗಳು ಗಂಭೀರದ ಮತ್ತು ಬಂಧಿಸಬಹುದಾದ ಅಪರಾಧಗಳಾಗಿರುವುದರಿಂದ, ಪೊಲೀಸರು ತನಿಖೆ ನಡೆಸುತ್ತಾರೆ ಮತ್ತು ಅಪರಾಧಿ ಕಂಡುಹಿಡಿಯಬಹುದಾದರೆ, ಈ ವಿಷಯ ರಾಜ್ಯ ಕಾನೂನು ಕ್ರಮಕ್ಕೆ ಕಾರಣವಾಗಬಹುದು ಎಂದು ಇನ್ವಿಕ್ಟಸ್ ಕಾನೂನಿನ ನಿರ್ದೇಶಕ ಕೋರಿ ವಾಂಗ್ ಎಚ್ಚರಿಕೆ ನೀಡಿದ್ದಾರೆ.

ಸಿಂಗಾಪುರದಲ್ಲಿ 13 ರಿಂದ 18 ವರ್ಷ ವಯಸ್ಸಿನ ಸಿಂಗಾಪುರ ಸ್ಪೋರ್ಟ್ಸ್ ಸ್ಕೂಲ್‌ನಿಂದ ಸಂತ್ರಸ್ಥರಿಗೆ ಅನ್ವಯಿಸಬಹುದಾದ ದಂಡ ಸಂಹಿತೆಯ ಅಡಿಯಲ್ಲಿ ನಿರ್ದಿಷ್ಟ ವಿಭಾಗಗಳ ಬಗ್ಗೆ ಮಾಹಿತಿ ನೀಡಿದ್ದು ಈ ಬಗ್ಗೆ ಎಚ್ಚರದಿಂದ ಇರುವುದು ಒಳಿತು ಎಂದು ತಿಳಿಸಿದ್ದಾರೆ.

# ಮಹಾಚುನಾವಣೆ: ಬಿಜೆಪಿ ವಿರುದ್ಧ ರಾಹುಲ್ ವಾಗ್ದಾಳಿ

**ಮುಂಬೈ:** ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಪ್ರಚಾರದ ಕೊನೆಯ ದಿನವಾದ ಸೋಮವಾರ ಬಿಜೆಪಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ. ಮಹಾರಾಷ್ಟ್ರ ಚುನಾವಣೆಯು ಬಡವರು, ಕೆಲವು ಕೋಟ್ಯಾಧಿಪತಿಗಳ ನಡುವಿನ ಚುನಾವಣೆಯಾಗಿದೆ. ಬಿಲಿಯನೇರ್‌ಗಳು ಮುಂಬೈನಲ್ಲಿ ಭೂಮಿಯನ್ನು ಪಡೆಯಲು ಸಂಚು ರೂಪಿಸಿದ್ದಾರೆ. ಸುಮಾರು 1 ಲಕ್ಷ ಕೋಟಿ ವ್ಯವಹಾರಕ್ಕೆ ಸಿದ್ಧತೆ ನಡೆದಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಮಹಾರಾಷ್ಟ್ರದ ರೈತರು, ಬಡವರು ಮತ್ತು ನಿರುದ್ಯೋಗಿಗಳಿಗೆ ಸಹಾಯ ಮಾಡುವುದು ಕಾಂಗ್ರೆಸ್ ಪಕ್ಷದ ಚಿಂತನೆಯಾಗಿದೆ. ಹಣದುಬ್ಬರ ಮತ್ತು ನಿರುದ್ಯೋಗ ರಾಜ್ಯದ ಪ್ರಮುಖ ಸಮಸ್ಯೆಗಳಾಗಿವೆ ಎಂದಿದ್ದಾರೆ.

ಮುಂಬೈನ ಬಿಕೆಸಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಹುಲ್ ಗಾಂಧಿ ಅವರು ಅದಾನಿ ಧಾರಾವಿ ಮರು ಅಭಿವೃದ್ಧಿ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರಿಂದಾಗಿ ಅದಾನಿ ಕಂಪನಿಗೆ ದೊಡ್ಡ ಯೋಜನೆಗಳು ಸಿಕ್ಕಿವೆ ಎಂದು ಮತ್ತೊಮ್ಮೆ ಆರೋಪಿಸಿದ್ದಾರೆ.

ಇವುಗಳಲ್ಲಿ ಧಾರಾವಿಯೂ ಸೇರಿದೆ. ಒಗ್ಗಟ್ಟಾಗಿದ್ದರೆ ನಾವು ಸುರಕ್ಷಿತವಾಗಿರುತ್ತೇವೆ ಎಂಬ ಪ್ರಧಾನಿ ಮೋದಿಯವರ ಹೇಳಿಕೆಗೂ ರಾಹುಲ್ ಗಾಂಧಿ ತೀವ್ರ ಟೀಕಾಪ್ರಹಾರ ನಡೆಸಿದ್ದಾರೆ. ಮುಂಬೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ




**ಅದಾನಿ ಕಂಪನಿಗೆ ದೊಡ್ಡ ಯೋಜನೆಗಳು ಸಿಕ್ಕಿವೆ**

**ಕಾಂಗ್ರೆಸ್ ನಾಯಕ ರಾಹುಲ್:** ರಾಹುಲ್ ಗಾಂಧಿ, ನರೇಂದ್ರ ಮೋದಿಯವರ ಘೋಷವಾಕ್ಯ ನಾವು ಒಟ್ಟಿಗೆ ಇದ್ದರೆ ನಾವು ಸುರಕ್ಷಿತವಾಗಿರುತ್ತೇವೆ ಪೋಸ್ಟರ್ ತೋರಿಸಿ ಇಲ್ಲಿ ಎದ್ದಿರುವ ಪ್ರಶ್ನೆ ಏನೆಂದರೆ ಯಾರು ಸುರಕ್ಷಿತರು ಎಂಬುವುದು ಇದಕ್ಕೆ ಉತ್ತರ- ಒಬ್ಬರು ನರೇಂದ್ರ ಮೋದಿ,ಅಮಿತ್ ಶಾ ಮೊತ್ತಬ್ಬರು ಅದಾನಿ. ಯಾರು ಸುರಕ್ಷಿತರು ಎಂಬ ಪ್ರಶ್ನೆ ಕಾಡುತ್ತಿದೆ ಧಾರಾವಿಯ ಭವಿಷ್ಯ ಸುರಕ್ಷಿತವಾಗಿಲ್ಲ. ಒಬ್ಬ ವ್ಯಕ್ತಿಯ ಸಲುವಾಗಿ ಧಾರಾವಿಯನ್ನು ನಾಶ ಮಾಡಲಾಗುತ್ತಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಎಂವಿಎ ಸರ್ಕಾರ ರಚನೆಯಾದರೆ ಮಹಾರಾಷ್ಟ್ರದಲ್ಲಿ ಜಾತಿ ಗಣತಿ ನಡೆಯಲಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಬಿಜೆಪಿಯವರು ಜನರು ಗಮನ ಬೇರೆಡೆ ಸೆಳೆಯುವಲ್ಲಿ ನಿಪುಣರು. ಅವರಿಗೆ ಸಮಸ್ಯೆಗಳ ರಾಜಕಾರಣ ಬೇಕು. ಮಹಾರಾಷ್ಟ್ರದಿಂದ ಇತರ ರಾಜ್ಯಗಳಿಗೆ ಎಂಟು ದೊಡ್ಡ ಕೈಗಾರಿಕೆಗಳ ವಲಸೆ ಮತ್ತು ಐದು ಲಕ್ಷ ಯುವಕರ ಉದ್ಯೋಗ ನಷ್ಟದ ಬಗ್ಗೆ ರಾಹುಲ್ ಗಾಂಧಿ ಬಿಜೆಪಿಯನ್ನು ಗುರಿಯಾಗಿಸಿದ್ದಾರೆ.

ರಾಹುಲ್ ಗಾಂಧಿ , ಎಂವಿಎ ಸರಕಾರ ರಚನೆಯಾದರೆ ಮಹಿಳೆಯರಿಗೆ ಪ್ರತಿ ತಿಂಗಳು 3000 ರೂ. ಮಹಿಳೆಯರಿಗೆ ಉಚಿತ ಬಸ್ ಸೌಲಭ್ಯ ಸಿಗಲಿದೆ. 3 ಲಕ್ಷದವರೆಗಿನ ರೈತರ ಸಾಲ ಮನ್ನಾ ಮಾಡಲಾಗುವುದು. ಸೋಯಾಬೀನ್ ಪ್ರತಿ ಕ್ವಿಂಟಲ್‌ಗೆ 7 ಸಾವಿರ ರೂ.ಗೆ ಖರೀದಿಸಲಾಗುವುದು. ಈರುಳ್ಳಿ ರೈತರಿಗೆ ನ್ಯಾಯಬೆಲೆ ಸಮಿತಿ ಇರುತ್ತದೆ. ಹತ್ತಿಗೆ ನ್ಯಾಯಯುತ ಎಂಎಸ್‌ಪಿ ಇರಲಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

**2.5 ಲಕ್ಷ ಸರ್ಕಾರಿ ಉದ್ಯೋಗ**

**ಪ್ರಧಾನಿ ಮೋದಿ ಜಾತಿ ಗಣತಿ ನಡೆಸಲು ಬಯಸುವುದಿಲ್ಲ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಎಂವಿಎ ಸರ್ಕಾರ ರಚನೆಯಾದರೆ ಮಹಾರಾಷ್ಟ್ರದಲ್ಲಿ ಜಾತಿ ಗಣತಿ ನಡೆಯಲಿದೆ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ರಾಜ್ಯದ ನಿರುದ್ಯೋಗಿಗಳಿಗೆ 25 ಲಕ್ಷ ರೂ.ವರೆಗೆ ಆರೋಗ್ಯ ವಿಮೆ ಜೊತೆಗೆ ಪ್ರತಿ ತಿಂಗಳು 4000 ರೂ. ಎಂವಿಎ ಸರ್ಕಾರವು 2.5 ಲಕ್ಷ ಸರ್ಕಾರಿ ಉದ್ಯೋಗಗಳನ್ನು ಒದಗಿಸಲಿದೆ ಎನ್ನುವ ಭರವಸೆ ನೀಡಿದ್ದಾರೆ.**

# ಗಾಜಾ ವಸತಿ ಕಟ್ಟಡಗಳ ಮೇಲೆ ಇಸ್ರೇಲ್ ದಾಳಿ

**ಬೈರುತ್:** ಉತ್ತರ ಗಾಜಾದ ಬೀಟ್ ಲಾಹಿಯಾದಲ್ಲಿ ಐದು ಅಂತಸ್ತಿನ ವಸತಿ ಕಟ್ಟಡದ ಮೇಲೆ ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 34 ಜನರನ್ನು ಹತ್ಯೆ ಮಾಡಿದೆ ಎಂದು ಸ್ಥಳೀಯ ನಾಗರಿಕ ರಕ್ಷಣಾ ಸಂಸ್ಥೆ ಹೇಳಿದೆ. ಸತ್ತವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ. ಡಜನ್ ಗಟ್ಟಲೆ ಜನರು ಅವಶೇಷಗಳಡಿಯಲ್ಲಿ ಸಿಲುಕಿರುವ ಸಾಧ್ಯತೆ ಇದ್ದು ಅವರನ್ನು ರಕ್ಷಣೆ ಮಾಡುವ ಕೆಲಸ ಬರದಿಂದ ಸಾಗಿದೆ ಎಂದು ತಿಳಿಸಿದೆ. ಈ ನಡುವೆ ಕಟ್ಟಡದಲ್ಲಿ ಸಿಲುಕಿ ಗಾಯಗೊಂಡಿದ್ದ 7 ಮಂದಿಯನ್ನು ರಕ್ಷಿಸಿ ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇನ್ನಷ್ಟು ಜನರು ಸಿಲುಕಿರುವ ಸಾಧ್ಯತೆ ಹಿನ್ನೆಲೆಯಲ್ಲಿ ಅವರ ರಕ್ಷಣಾ ಕಾರ್ಯ ಮುಂದುವರಿದಿದೆ ಎಂದು ತಿಳಿಸಲಾಗಿದೆ. ಹಮಾಸ್ ಮರು ಸಂಘಟನೆ ತಡೆಯುವ ಪ್ರಯತ್ನದಲ್ಲಿ ಬೀಟ್ ಲಾಹಿಯಾ ಸೇರಿದಂತೆ ಉತ್ತರ ಗಾಜಾದಲ್ಲಿನ ಉಗ್ರಗಾಮಿ ಗುರಿಗಳ ಮೇಲೆ ದಾಳಿ ನಡೆಸುತ್ತಿದೆ ಎಂದು ಇಸ್ರೇಲಿ ಮಿಲಿಟರಿ ಹೇಳಿದೆ.

ಮಧ್ಯ ಗಾಜಾದಲ್ಲಿ ನಿರಾಶ್ರಿತರ ಶಿಬಿರಗಳ ಮೇಲೆ ಮೂರು ಪ್ರತ್ಯೇಕ ದಾಳಿಗಳು 15 ಜನರನ್ನು ಕೊಂದಿವೆ, ಆದರೆ ದಕ್ಷಿಣದಲ್ಲಿ ರಫಾದ ಮೇಲೆ ಇಸ್ರೇಲಿ ಡ್ರೋನ್ ದಾಳಿಯಲ್ಲಿ ಐದು ಮಂದಿ ಸಾವನ್ನಪ್ಪಿದ್ದಾರೆ ಎಂದು ನಾಗರಿಕ ರಕ್ಷಣೆ ಸೇರಿಸಲಾಗಿದೆ. ನಿರಂತರ ಗುಂಡಿನ ದಾಳಿ ಮತ್ತು ಫಿರಂಗಿ ಶೆಲ್ ದಾಳಿಯಿಂದಾಗಿ ಹೆಚ್ಚು ಗಾಯಾಳುಗಳನ್ನು ರಕ್ಷಿಸುವ ಸಾಧ್ಯತೆಗಳು ಕಡಿಮೆಯಾಗುತ್ತಿವೆ ಎಂದು ನಾಗರಿಕ ರಕ್ಷಣಾ ವಕ್ತಾರ ಮಹ್ಮದ್ ಬಸ್ಸಾಲ್ ಹೇಳಿದ್ದಾರೆ. ಉತ್ತರ ಗಾಜಾದಲ್ಲಿ ಇಸ್ರೇಲ್‌ನ ನೆಲದ ಆಕ್ರಮಣದಿಂದ ಕಳೆದ ಐದು ವಾರಗಳಲ್ಲಿ 130,000 ಜನರನ್ನು ಸ್ಥಳಾಂತರಿಸಿದೆ. ವಿಶ್ವಸಂಸ್ಥೆ ಜಬಾಲಿಯಾ, ಬೀಟ್ ಲಾಹಿಯಾ ಮತ್ತು ಬೀಟ್ ಹನೌನ್ ಪಟ್ಟಣಗಳಲ್ಲಿ ಕ್ಷೀಣಿಸುತ್ತಿರುವ ನೀರು ಮತ್ತು ಆಹಾರದ ಪೂರೈಕೆಯೊಂದಿಗೆ 75,000 ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ತಿಳಿಸಿದೆ.

ಕಳೆದ ವಾರ, ಜಬಾಲಿಯಾದಲ್ಲಿ ಮನೆಯೊಂದರ ಮೇಲೆ ನಡೆದ ಮುಷ್ಕರದಲ್ಲಿ 13 ಮಕ್ಕಳು ಸೇರಿದಂತೆ ಕನಿಷ್ಠ 25 ಜನರು ಸಾವನ್ನಪ್ಪಿದ್ದರು. ಗಾಜಾ ನಗರದಲ್ಲಿ, ಇನ್ನೂ ಐವರು ಕೊಲ್ಲಲ್ಪಟ್ಟಿದ್ದರು. ಇದೀಗ ಮತ್ತೆ ದಾಳಿ ನಡೆದು 34ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ.

**34 ಮಂದಿ ಸಾವು**


**ಬೀಟ್ ಲಾಹಿಯಾದಲ್ಲಿನ ವಸತಿ ಕಟ್ಟಡದಲ್ಲಿ ಉಳಿದಿರುವುದು ಅವಶೇಷಗಳ ರಾಶಿಯಾಗಿದ್ದು, ಮುರಿದ ಕಾಂಕ್ರೀಟ್ ಮತ್ತು ತಿರುಚಿದ ಲೋಹದ ಮೊನಚಾದ ಚೂರುಗಳು ಅವಶೇಷಗಳಿಂದ ಹೊರಬರುತ್ತವೆ. ಇಸ್ರೇಲಿ ಮಿಲಿಟರಿ ಉತ್ತರ ಗಾಜಾದಲ್ಲಿ ಆಕ್ರಮಣ ಮುಂದುವರಿಸಿದೆ. ಜಬಾಲಿಯಾದಲ್ಲಿ ಪ್ರಾರಂಭವಾಗಿ ಬೀಟ್ ಲಾಹಿಯಾಕ್ಕೆ ವಿಸ್ತರಿಸಿದೆ. ''ಪ್ರದೇಶದಲ್ಲಿ ಭಯೋತ್ಪಾದಕ ಗುರಿಗಳು'' ಎಂದು ಕರೆಯುವ ಮೇಲೆ ರಾತ್ರೋರಾತ್ರಿ ಹಲವಾರು ದಾಳಿ ನಡೆಯುತ್ತಿದ್ದು ಈ ಭಾಗದ ಜನರು ಹಿಡಿ ಜೀವ ಕೈಯಲ್ಲಿಡಿದು ಬದುಕು ಪರಿಸ್ಥಿತಿ ನಿರ್ಮಾಣವಾಗಿದೆ.**

# ಬ್ರಿಟನ್‌ನಲ್ಲಿ ಕಾರಿನ ಡಿಕ್ಕಿಯೊಳಗೆ ಭಾರತ ಮೂಲದ ಮಹಿಳೆಯ ಶವ

## ಗಂಡ ಪಂಕಜ್ ಲಂಬಾ ಮೇಲೆ ಪೊಲೀಸರ ಅನುಮಾನ, ದೇಶ ಬಿಟ್ಟು ಪಲಾಯನ ಮಾಡಿರುವ ಶಂಕೆ

**ಲಂಡನ್:** ಲಂಡನ್‌ನ ಪೂರ್ವ ಭಾಗದಲ್ಲಿ ಕಾರಿನ ಡಿಕ್ಕಿಯೊಳಗೆ ಭಾರತ ಮೂಲದ 24 ವರ್ಷದ ಮಹಿಳೆಯ ಶವ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಿಟನ್ ಪೊಲೀಸರು ಆಕೆಯ ಪತಿಗಾಗಿ ಶೋಧ ನಡೆಸಿದ್ದಾರೆ. ಕೆಲವು ದಿನಗಳ ಹಿಂದೆ ಹರ್ಷಿತಾ ಬ್ರೆಲ್ಲಾ ಅವರನ್ನು ಹತ್ಯೆ ಮಾಡಿ, ಶವವನ್ನು ಕಾರಿನ ಡಿಕ್ಕಿಯಲ್ಲಿ ಇರಿಸಲಾಗಿತ್ತು. ಹೆಂಡತಿಯನ್ನು ಕೊಂದ ಬಳಿಕ ಆಕೆಯ ಭಾರತ ಮೂಲದ ಪತಿ ದೇಶದಿಂದ ಪಲಾಯನ ಮಾಡಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ.

ಮೃತ ಹರ್ಷಿತಾ ಅವರ ಪತಿ ಪಂಕಜ್ ಲಂಬಾ ಚಿತ್ರವನ್ನು ಪೊಲೀಸರು ಬಿಡುಗಡೆ ಮಾಡಿದ್ದು, ಈ ಪ್ರಕರಣದಲ್ಲಿ 60ಕ್ಕೂ ಹೆಚ್ಚು ಪತ್ತೇದಾರರು ಕೆಲಸ ಮಾಡುತ್ತಿದ್ದಾರೆ ಎಂದು ನಾರ್ಥಂಪ್ಟನ್‌ಶೈರ್ ಪೊಲೀಸ್ ವಿಭಾಗದ ಮುಖ್ಯ ಇನ್ಸ್‌ಪೆಕ್ಟರ್ ಪೌಲ್ ಕ್ಯಾಶ್ ತಿಳಿಸಿದ್ದಾರೆ. ಆರೋಪಿ ಕುರಿತು ಯಾವುದೇ ಸುಳಿವು ಇದ್ದರೆ ಮಾಹಿತಿ ನೀಡುವಂತೆ ಅವರು ಮನವಿ ಮಾಡಿದ್ದಾರೆ.



**ಪರಾರಿಯಾದ ಪತಿಗಾಗಿ ಹುಡುಕಾಟ**

ಹರ್ಷಿತಾ ಅವರನ್ನು ನಾರ್ಥಂಪ್ಟನ್‌ಶೈರ್‌ನಲ್ಲಿ ಈ ತಿಂಗಳ ಆರಂಭದಲ್ಲಿ ಆಕೆಯ ಗಂಡ ಪಂಕಜ್ ಲಂಬಾ ಹತ್ಯೆ ಮಾಡಿದ್ದಾರೆ ಎಂಬ ಶಂಕೆಯು ನಮ್ಮ ತನಿಖೆಯಿಂದ ಉಂಟಾಗಿದೆ ಎಂದು ಅವರು ಹೇಳಿದ್ದಾರೆ. ಹರ್ಷಿತಾ ಅವರ ದೇಹವನ್ನು ಕಾರಿನಲ್ಲಿ ನಾರ್ಥಂಪ್ಟನ್‌ಶೈರ್‌ನಿಂದ ಇಲ್‌ಫೋರ್ಡ್‌ಗೆ ಲಂಬಾ ಸಾಗಿಸಿದ್ದಾನೆ ಎನ್ನುವುದು ನಮ್ಮ ಅನುಮಾನ. ಆತ ಈಗ ದೇಶ ಬಿಟ್ಟು ಪರಾರಿಯಾಗಿರಬಹುದು... ಈ ಪ್ರಕರಣದಲ್ಲಿ 60ಕ್ಕೂ ಹೆಚ್ಚು ಡಿಟೆಕ್ಟೀವ್‌ಗಳು ಕೆಲಸ ಮಾಡುತ್ತಿದ್ದಾರೆ. ಮನೆ ಮನೆಗೆ ಹೋಗಿ ಪರಿಶೀಲನೆ, ವಸ್ತುಗಳ ಶೋಧ, ಸಿಸಿಟಿವಿ ಕ್ಯಾಮೆರಾಗಳು ಮತ್ತು ಸ್ವಯಂಚಾಲಿತ ನಂಬರ್ ಪ್ಲೇಟ್ ಪತ್ತೆ (ಎಎನ್‌ಪಿಆರ್) ಸೇರಿದಂತೆ ಎಲ್ಲಾ ಬಗೆಯ ತನಿಖೆಗಳನ್ನು ನಡೆಸುತ್ತಿದ್ದೇವೆ.

ಹರ್ಷಿತಾ ಅವರಿಗೆ ನ್ಯಾಯ ದೊರಕಿಸಲು, ನಿಜಕ್ಕೂ ಏನು ನಡೆಯಿತು ಎಂಬುದನ್ನು ನಿಖರವಾಗಿ ತಿಳಿಯಲು ಮಾಹಿತಿಗಳನ್ನು ಕ್ರೋಢೀಕರಿಸಲು ಸಹಾಯಕ್ಕಾಗಿ ಮನವಿ ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

**ದೇಶ ಬಿಟ್ಟು ಪಲಾಯನ**

**ಬ್ರಿಟನ್‌ನ ನಾರ್ಥಂಪ್ಟನ್‌ಶೈರ್‌ನಲ್ಲಿ ವಾಸಿಸುತ್ತಿದ್ದ ಭಾರತ ಮೂಲದ 24 ವರ್ಷದ ಮಹಿಳೆ ಹರ್ಷಿತಾ ಬ್ರೆಲ್ಲಾ ಅವರನ್ನು ಹತ್ಯೆ ಮಾಡಲಾಗಿದೆ. ಅವರ ಶವ ಪೂರ್ವ ಲಂಡನ್‌ನ ಇಲ್‌ಫೋರ್ಡ್ ನಲ್ಲಿ ನಿಲ್ಲಿಸಿದ್ದ ಕಾರಿನ ಡಿಕ್ಕಿಯಲ್ಲಿ ಸಿಕ್ಕಿದೆ. ಪತಿ ಪಂಕಜ್ ಲಂಬಾನೇ ಆಕೆಯನ್ನು ಕೊಂದು ದೇಶ ಬಿಟ್ಟು ಪಲಾಯನ ಮಾಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.**

- **ಬ್ರಿಟನ್‌ನ ನಾರ್ಥಂಪ್ಟನ್‌ಶೈರ್‌ನ ಸ್ಕೆಗ್ನೆಸ್ ವಾಲ್ಕ್‌ನಲ್ಲಿ ವಾಸವಾಗಿದ್ದ ಹರ್ಷಿತಾ ಬ್ರೆಲ್ಲಾ ಹತ್ಯೆ**
- **ಇಲ್ಫೋರ್ಡ್‌ನ ಬ್ರಿಸ್ಬೇನ್ ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ಕಾರಿನ ಡಿಕ್ಕಿಯಲ್ಲಿ ಮಹಿಳೆಯ ಶವ ಪತ್ತೆ**

**ರಸ್ತೆ ಬದಿಯಲ್ಲಿ ಕಾರು:** ಹರ್ಷಿತಾ ಅವರ ಕ್ಷೇಮಕ್ಕೆ ತೊಂದರೆ ಉಂಟಾಗಿದೆ ಎಂದು ಕಳೆದ ಬುಧವಾರ ಕರೆ ಬಂದಿದ್ದು, ಕೂಡಲೇ ನಾರ್ಥಂಪ್ಟನ್‌ಶೈರ್‌ನ ಸ್ಕೆಗ್ನೆಸ್ ವಾಲ್ಕ್‌ನಲ್ಲಿನ ಅವರ ಮನೆಗೆ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು.

ಮನೆಯಲ್ಲಿ ಯಾವುದೇ ಸ್ಪಂದನೆ ಬಾರದ ಹಿನ್ನೆಲೆಯಲ್ಲಿ ಪೊಲೀಸರು ಕಾಣೆ ಯಾದ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ಗುರುವಾರ ನಸುಕಿನಲ್ಲಿ ಪೂರ್ವ ಲಂಡನ್‌ನ ಇಲ್‌ಫೋರ್ಡ್ ಪ್ರದೇಶದ ಬ್ರಿಸ್ಬೇನ್ ರಸ್ತೆಯಲ್ಲಿ ನಿಂತಿದ್ದ ವಾಹನವೊಂದರ ಡಿಕ್ಕಿಯಲ್ಲಿ ಹರ್ಷಿತಾ ಮೃತದೇಹ ಪತ್ತೆಯಾಗಿತ್ತು. ಹರ್ಷಿತಾ ಅವರನ್ನು ಪರಿಚಿತರೇ ಹತ್ಯೆ ಮಾಡಿದ್ದಾರೆ ಎಂದು ಬಲವಾಗಿ ನಂಬಿದ್ದರೂ, ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಮಿನಿ ನ್ಯೂಸ್

## ರಿಕ್ಷಾ ಚಾಲು ಮಾಡಿದ ಮಗು ಗೋಡೆಗೆ ಡಿಕ್ಕಿ ಹೊಡೆದು ಸಾವು

**ಬಲ್ಲಿಯಾ:** ಎರಡು ವರ್ಷದ ಮಗುವೊಂದು ಆಕಸ್ಮಿಕವಾಗಿ ಚಾಲು ಮಾಡಿದ ಇ-ರಿಕ್ಷಾವೊಂದು ಗೋಡೆಗೆ ಡಿಕ್ಕಿಯಾಗಿದೆ. ಪರಿಣಾಮ ಮಗು ಸಾವಿಗೀಡಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ. ಮುಕುಂದಪುರ ಗ್ರಾಮದ ಯಶ್ ಪಾಂಡೆ ತನ್ನ ಮನೆಯ ಹೊರಗೆ ಆಟವಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಸ್ಥಳದಲ್ಲಿ ನಿಲ್ಲಿಸಿದ್ದ ಇ-ರಿಕ್ಷಾದ ಕೀಲಿ ಇಗ್ನಿಷನ್‌ನಲ್ಲಿಯೇ ಉಳಿದಿತ್ತು. ಮಗು ವಾಹನವನ್ನು ಆಕಸ್ಮಿಕವಾಗಿ ಸ್ಟಾರ್ಟ್ ಮಾಡಿದ್ದು, ನಿಯಂತ್ರಣ ತಪ್ಪಿ ಪಕ್ಕದ ಮನೆಯ ಗೋಡೆಗೆ ಡಿಕ್ಕಿ ಹೊಡೆದಿದೆ ಎಂದು ಪೋಷಕರು ತಿಳಿಸಿದ್ದಾರೆ.

ಘಟನೆಯಲ್ಲಿ ಮಗುವಿಗೆ ತೀವ್ರ ಗಾಯಗಳಾಗಿದ್ದು, ಕೂಡಲೇ ಮನಿಯಾರ್ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಆದರೆ ದಾರಿ ಮಧ್ಯೆಯೇ ಮಗು ಸಾವಿಗೀಡಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಮಗೆ ಯಾವುದೇ ಔಪಚಾರಿಕ ದೂರು ಬಂದಿಲ್ಲ ಎಂದು ಸ್ಟೇಷನ್ ಹೌಸ್ ಅಧಿಕಾರಿ ರನ್ನೇಶ್ ದುಬೆ ತಿಳಿಸಿದ್ದಾರೆ.

## ತ್ವರಿತ ರಾಜಕೀಯ ನಿರ್ಧಾರ ಪ್ರಕಟಿಸಿ ಸೈಮನ್ ಸ್ಟಿಯಲ್ ಒತ್ತಾಯ

**ಬಾಕು:** ಜಾಗತಿಕ ಹವಾಮಾನ ಪರಿಣಾಮಕ್ಕೆ ಸಂಬಂಧಿಸಿದ ವಿವಾದಾತ್ಮಕ ಸಮಸ್ಯೆಗಳ ಕುರಿತು ಕ್ರಮ ಕೈಗೊಳ್ಳಲು ರಾಜಕೀಯ ನಿರ್ಧಾರವನ್ನು ತ್ವರಿತವಾಗಿ ಪ್ರಕಟಿಸಬೇಕು ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಸೈಮನ್ ಸ್ಟಿಯಲ್ ಅವರು ಸದಸ್ಯ ರಾಷ್ಟ್ರಗಳಿಗೆ ಒತ್ತಾಯಿಸಿದರು. ತಾಪಮಾನ ಬದಲಾವಣೆ ಕುರಿ ತಂತೆ ಅಜೈರ್ ಬೈಜಾನ್‌ನ ರಾಜಧಾನಿ ಬಾಕುವಿನಲ್ಲಿ ನಡೆದ ಸಿಒಪಿ29' ಶೃಂಗಸಭೆಯಲ್ಲಿ ಮಾತನಾಡಿದ ಅವರು, ಭವಿಷ್ಯದಲ್ಲಿ ಎದುರಾಗುವ ಗಂಭೀರ ಸಮಸ್ಯೆಗಳಿಗೆ ಪ್ರಾಯೋಗಿಕ ಪರಿಹಾರ ಅಗತ್ಯವಿದ್ದು, ಸದಸ್ಯ ರಾಷ್ಟ್ರಗಳು ಹೆಚ್ಚಿನ ಒತ್ತು ನೀಡಬೇಕು ಎಂದರು. ಸಮಸ್ಯೆ ಬಗೆಹರಿಸಲು ಪರಸ್ಪರ ಸಹಕಾರ ಈಗಿನ ತುರ್ತು ಅಗತ್ಯ. ಈ ವಿಚಾರದಲ್ಲಿ ಬೇರೆಯವರು ಮೊದಲು ಕ್ರಮ ಕೈಗೊಳ್ಳಲಿ ಎಂದು ಕಾಯುವುದು ಸರಿಯಲ್ಲ. ಇಂತಹ ನಡವಳಿಕೆಗಳು ಎಲ್ಲರ ಮೇಲೂ ಪರಿಣಾಮ ಬೀರ ಲಿವೆ ಎಂದು ಸ್ಟಿಯಲ್ ಎಚ್ಚರಿಸಿದರು. ಈಗ ಕೆಲಸದಲ್ಲಿ ತೊಡಗಿಸಿಕೊಳ್ಳುವ ಕಾಲ ಬಂದಿದೆ ಎಂದು ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿದರು.

**ಬಿಕ್ಕಟ್ಟು ಬಗೆಹರಿಸಲು ಆದ್ಯತೆ:** ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ನೀಡಬೇಕಾದ ಹಣಕಾಸು ನೆರವು, ವ್ಯಾಪಾರ ಸಹಕಾರ ಹಾಗೂ ಹಮಾಮಾನ ಕಾರ್ಯಕ್ರಮದಲ್ಲಿ ಸಮಾನ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಉಂಟಾಗಿರುವ ಬಿಕ್ಕಟ್ಟು ಕೊನೆಗಾಣಿಸಲು 'ಸಿಒಪಿ29' ಶೃಂಗಸಭೆಯ ಎರಡನೇ ವಾರದ ಸಭೆಯಲ್ಲಿ ಚರ್ಚೆ ನಡೆಸಲು ನಿರ್ಧರಿಸಲಾಗಿದೆ.

## ಹೊಸ ಸಚಿವ ಸಂಪುಟ ರಚನೆ

**ಕೊಲಂಬೊ:** ಶ್ರೀಲಂಕಾದ ಅಧ್ಯಕ್ಷ ಅನುರಾ ಡಿಸ್ಸಾನಾಯಕೆ ಅವರು ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಸರ್ಕಾರದ ಸಂಪುಟಕ್ಕೆ 21 ಸಚಿವರನ್ನು ಸೋಮವಾರ ಆಯ್ಕೆ ಮಾಡಿದ್ದಾರೆ. ಹಣಕಾಸು ಮತ್ತು ರಕ್ಷಣಾ ಖಾತೆಗಳನ್ನು ಡಿಸ್ಸಾನಾಯಕೆ ಅವರೇ ಉಳಿಸಿಕೊಂಡಿದ್ದು, 12 ಹೊಸ ಸದಸ್ಯರಿಗೆ ಸಂಪುಟದಲ್ಲಿ ಪ್ರಮುಖ ಸ್ಥಾನಗಳನ್ನು ನೀಡಿದ್ದಾರೆ. ಅಲ್ಲದೇ, 2000ದಿಂದ ಸೇವೆ ಸಲ್ಲಿಸುತ್ತಿರುವ ಎಂಟು ಅನುಭವಿ ಸದಸ್ಯರಿಗೆ ಮಹತ್ವದ ಜವಾಬ್ದಾರಿಯನ್ನು ವಹಿಸಿದ್ದಾರೆ. ಡಿಸ್ಸಾನಾಯಕೆ ಸಂಪುಟದಲ್ಲಿ ಇಬ್ಬರು ಮಹಿಳಾ ಸದಸ್ಯರಿದ್ದಾರೆ. ಪ್ರಧಾನಿ ಹರಿಣಿ ಅಮರಸೂರ್ಯ ಅವರು ಶಿಕ್ಷಣ ಖಾತೆ ನಿರ್ವಹಿಸುತ್ತಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಗೆ ಸರೋಜಾ ಸಾವಿತ್ರಿ ಪಾಲ್‌ರಾಜ್ ಅವರನ್ನು ನೇಮಿ ಸಲಾಗಿದೆ. ಹೊಸ ಸಂಪುಟ ಗುರುವಾರ ಸಭೆ ಸೇರಲಿದೆ. ಹೊಸ ಸಂಪುಟವನ್ನು ಉದ್ದೇಶಿಸಿ ಮಾತನಾಡಿದ ಡಿಸ್ಸಾನಾಯಕೆ, ನಮಗೆ ನೀಡಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲ. ಹೆಚ್ಚಿನ ಸದಸ್ಯರು ಸಚಿವ ಸಂಪುಟಕ್ಕೆ ಹೊಸಬರಾಗಿದ್ದರೂ, ರಾಜಕೀ ಯಕ್ಕೆ ಹೊಸಬರಲ್ಲ. ನಮ್ಮ ಘೋಷಣೆಗಳಿಗೆ ಬದ್ಧವಾಗಿ ಕೆಲಸ ಮಾಡಬೇಕು ಎಂದರು.


**ತಮಿಳಿನಲ್ಲಿ ಪ್ರಮಾಣ ವಚನ ಸ್ವೀಕಾರ:** ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಮೀನುಗಾರಿಕಾ ಸಚಿವ ರಾಮಲಿಂಗಂ ಚಂದ್ರಶೇಖರನ್ ಅವರು ತಮಿಳಿನಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಹೊಸ ಸರ್ಕಾರದಲ್ಲಿ ಅಲ್ಪಸಂಖ್ಯಾತ ಸಮುದಾಯದ ಪ್ರಾತಿನಿಧ್ಯವನ್ನು ಎತ್ತಿಹಿಡಿದಿದ್ದಾರೆ.

## ಶಸ್ತ್ರಾಸ್ತ್ರಗಳನ್ನು ಬಳಸಲು ಉಕ್ರೇನ್‌ಗೆ ವಿಧಿಸಿದ್ದ ನಿರ್ಬಂಧ ಸಡಿಲಿಸಿದ ಅಮೆರಿಕ



**ವಾಷಿಂಗ್ಟನ್:** ರಷ್ಯಾದ ಭೂಪ್ರದೇಶದ ಮೇಲೆ ದಾಳಿ ನಡೆಸಲು ಅಮೆರಿಕ ಒದಗಿಸಿದ ಶಸ್ತ್ರಾಸ್ತ್ರಗಳನ್ನು ಬಳಸದಂತೆ ಉಕ್ರೇನ್‌ಗೆ ಹೇರಿದ್ದ ನಿರ್ಬಂಧಗಳನ್ನು ಜೋ ಬೈಡನ್ ನೇತೃತ್ವದ ಆಡಳಿತ ತೆಗೆದುಹಾಕಿದೆ. ಇದು ಉಕ್ರೇನ್-ರಷ್ಯಾ ಸಂಘರ್ಷ ಕುರಿತಾದ ಅಮೆರಿಕದ ನೀತಿಯಲ್ಲಿ ಮಹತ್ವದ ಬದಲಾವಣೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಅಮೆರಿಕ ಈ ನಿರ್ಧಾರದಿಂದ ರಷ್ಯಾದ ಮೇಲೆ ಉಕ್ರೇನ್ ತನ್ನ ಮೊದಲ ದೀರ್ಘ ಶ್ರೇಣಿಯ ದಾಳಿಯನ್ನು ನಡೆಸಲು ಯೋಜನೆ ರೂಪಿಸಿದೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು ಶ್ವೇತಭವನವು ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ. 2025ರ ಜನವರಿ 20ರಂದು ಅಮೆರಿಕ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಇದಕ್ಕೂ ಎರಡು ತಿಂಗಳ ಮೊದಲೇ ಬೈಡನ್ ಅವರು ಅಮೆರಿಕದ ಶಸ್ತ್ರಾಸ್ತ್ರಗಳನ್ನು ಬಳಸಲು ಅನುಮತಿ ನೀಡಬೇಕೆಂಬ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್‌ಸ್ಕಿ ಅವರ ಮನವಿಗೆ ಸ್ಪಂದಿಸಿದ್ದಾರೆ. ಉಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾಗೆ ನೆರವಾಗಲು ಉತ್ತರ ಕೊರಿಯಾ ಸೇನಾಪಡೆಗಳನ್ನು ಕಳುಹಿಸಿದೆ. ಇದಕ್ಕೆ ಪ್ರತ್ಯುತ್ತರವಾಗಿ ಅಮೆರಿಕ ತನ್ನ ನಿಲುವು ಬದಲಾಯಿಸಿದೆ ಎಂದು ವಿಶ್ಲೇಷಿಸಲಾಗಿದೆ. ಮೊದಲ ಹಂತದಲ್ಲಿ ಅಮೆರಿಕ ನಿರ್ಮಿತ 306 ಕಿ.ಮೀ. ವ್ಯಾಪ್ತಿಯನ್ನು ಕ್ರಮಿಸಬಲ್ಲ ಎಟಿಎಸಿಎಂಎಸ್ ರಾಕೆಟ್‌ಗಳನ್ನು ಬಳಸಿಕೊಂಡು ರಷ್ಯಾದ ಮೇಲೆ ಉಕ್ರೇನ್ ದಾಳಿ ನಡೆಸುವ ಸಾಧ್ಯತೆಯಿದೆ. ಉಕ್ರೇನ್‌ಗೆ ಅಮೆರಿಕ ಒದಗಿಸಿರುವ ಶಸ್ತ್ರಾಸ್ತ್ರಗಳನ್ನು ಹೇಗೆ ಬಳಸಬಹುದು ಎಂಬುದರ ಕುರಿತು ನಿಯಮಗಳನ್ನು ಸಡಿಲಗೊಳಿಸುವಂತೆ ಕೆಲವು ರಿಪಬ್ಲಿಕನ್ ನಾಯಕರು ಒತ್ತಾಯಿಸಿದ್ದಾರೆ. ಇತ್ತ ಶಸ್ತ್ರಾಸ್ತ್ರಗಳ ಬಳಕೆಯ ಮೇಲಿನ ಮಿತಿಗಳನ್ನು ಸಡಿಲಗೊಳಿಸುವ ಅಮೆರಿಕದ ಕ್ರಮವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ರಷ್ಯಾ ಎಚ್ಚರಿಸಿದೆ.

# ಟೈಗರ್ ಶ್ರಾಫ್‌ಗೆ ಭಜರಂಗಿ ಹರ್ಷ ಆಕ್ಷನ್ ಕಟ್




'ಭಜರಂಗಿ' ಖ್ಯಾತಿಯ ನಿರ್ದೇಶಕ ಎ.ಹರ್ಷ ಅವರು ಬಾಲಿವುಡ್‌ನತ್ತ ಮುಖ ಮಾಡಿದ್ದಾರೆ. ಪ್ರತಿಭಾನ್ವಿತ ನಟ ಟೈಗರ್ ಶ್ರಾಫ್‌ಗೆ ಎ.ಹರ್ಷ ನಿರ್ದೇಶನ ಮಾಡುತ್ತಿದ್ದಾರೆ. ಇದೀಗ ನಟನ ಖಡಕ್ ಆಗಿರುವ ಪೋಸ್ಟರ್‌ವೊಂದನ್ನು ರಿಲೀಸ್ ಮಾಡಿ ಮೊದಲ ಬಾಲಿವುಡ್ ಸಿನಿಮಾದ ಬಗ್ಗೆ ಎ.ಹರ್ಷ ಮಾಹಿತಿ ಹಂಚಿಕೊಂಡಿದ್ದಾರೆ.

ಟೈಗರ್ ಶ್ರಾಫ್ ನಟನೆಯ 'ಬಾಘಿ 4'ಗೆ ಎ.ಹರ್ಷ ನಿರ್ದೇಶನ ಮಾಡುತ್ತಿದ್ದಾರೆ. ಈ ಸಿನಿಮಾದ ಪೋಸ್ಟರ್ ರಿಲೀಸ್ ಆಗಿದ್ದು, ಟೈಗರ್ ಶ್ರಾಫ್ ಅವರು ಸ್ಮೋಕ್ ಮಾಡುತ್ತಾ ಒಂದು ಕೈಯಲ್ಲಿ ಲಾಂಗ್ ಹಿಡಿದ್ದಾರೆ. ಮತ್ತೊಂದು ಕೈಯಲ್ಲಿ ಮದ್ಯಪಾನ ಬಾಟಲಿ ಹಿಡಿದು ರಕ್ತಸಿಕ್ತ ಅವತಾರದಲ್ಲಿ ನಟ ಖಡಕ್ ಆಗಿ ಪೋಸ್ ಕೊಟ್ಟಿದ್ದಾರೆ. ಈ ಚಿತ್ರವನ್ನು ಖ್ಯಾತ ನಿರ್ಮಾಪಕ ಸಾಜಿದ್ ನಾಡಿಯಾದ್ವಾಲಾ ನಿರ್ಮಾಣ ಮಾಡುತ್ತಿದ್ದಾರೆ. ಮುಂದಿನ ವರ್ಷ ಸೆ.5ರಂದು ಸಿನಿಮಾ ರಿಲೀಸ್ ಆಗಲಿದೆ. ಅಂದಹಾಗೆ, ಬಿರುಗಾಳಿ, ಚಿಂಗಾರಿ ಸಿನಿಮಾ ನಂತರ ವಜ್ರಕಾಯ, ಭಜರಂಗಿ, ಭಜರಂಗಿ 2, ವೇದ ಸಿನಿಮಾಗಳ ಮೂಲಕ ಎ.ಹರ್ಷ ಸಕ್ಸಸ್ ಕಂಡರು.

# ನಾಗಚೈತನ್ಯ, ಶೋಭಿತಾ ಮದುವೆ ಆಮಂತ್ರಣ ಪತ್ರಿಕೆ ವೈರಲ್

ಟಾಲಿವುಡ್ ನಟ ನಾಗಚೈತನ್ಯ ಮತ್ತು ಶೋಭಿತಾ ಧುಲಿಪಾಲ್ ಹಸೆಮಣೆ ಏರೋಕೆ ರೆಡಿಯಾಗಿದ್ದಾರೆ. ಡಿ.4ರಂದು ನಾಗಚೈತನ್ಯ ಮದುವೆ ಡೇಟ್ ನಿಗದಿಯಾಗಿದೆ. ಸೋಷಿಯಲ್ ಮೀಡಿಯಾದಲ್ಲಿ ಆಮಂತ್ರಣ ಪತ್ರಿಕೆ ವೈರಲ್ ಆಗಿದೆ. ಸಮಂತಾ ಮಾಜಿ ಪತಿ ನಾಗಚೈತನ್ಯ ಅವರು ಶೋಭಿತಾ ಜೊತೆ ದಾಂಪತ್ಯ ಜೀವನಕ್ಕೆ ಕಾಲಿಡಲು ರೆಡಿಯಾಗಿದ್ದಾರೆ. ಇದೇ ಡಿಸೆಂಬರ್ 4ರಂದು ಬಂಜಾರಾ ಹಿಲ್ಸ್‌ನಲ್ಲಿರುವ ಅನುಪಮಾ ಸ್ಟುಡಿಯೋದಲ್ಲಿ ಮದುವೆಯಾಗುತ್ತಿದ್ದಾರೆ. ಇದು ನಾಗಾರ್ಜುನ ಅಕ್ಕಿನೇನಿ ಅವರ ಒಡೆತನದಲ್ಲಿದೆ. ಈ ಮದುವೆಗೆ ಸೆಲೆಬ್ರಿಟಿಗಳು, ರಾಜಕೀಯ ಗಣ್ಯರಿಗೆ ಆಹ್ವಾನ ನೀಡಲಾಗಿದೆ. ಅಂದಹಾಗೆ, ನಟಿ ಸಮಂತಾ ಜೊತೆ ನಾಗಚೈತನ್ಯ 2017ರಲ್ಲಿ ಮದುವೆಯಾದರು. 2021ರಲ್ಲಿ ಇಬ್ಬರೂ ಡಿವೋರ್ಸ್ ಘೋಷಿಸಿದರು. ಹಲವು ವರ್ಷಗಳು ಪ್ರೀತಿ, ಮದುವೆಯ ಮುದ್ರೆ ಒತ್ತಿದ್ದ ಜೋಡಿ ಆ ನಂತರ ಡಿವೋರ್ಸ್ ಮೂಲಕ ವೈವಾಹಿಕ ಬದುಕಿಗೆ ಪೂರ್ಣ ವಿರಾಮವಿಟ್ಟರು.



ಸೆಲೆಬ್ರಿಟಿಗಳು, ರಾಜಕೀಯ ಗಣ್ಯರಿಗೆ ಆಹ್ವಾನ

# ಕತ್ತಿ ಹಿಡಿದು ಉಗ್ರಾವತಾರ ತಾಳಿದ ನಯನತಾರಾ

ಕಾಲಿವುಡ್ ಲೇಡಿ ಸೂಪರ್ ಸ್ಟಾರ್ ನಯನತಾರಾಗೆ ಹುಟ್ಟುಹಬ್ಬದ ಸಂಭ್ರಮ. ಹಾಗಾಗಿ ಅಭಿಮಾನಿಗಳಿಗೆ ಹೊಸ ಅಪ್‌ಡೇಟ್ ಹಂಚಿಕೊಂಡಿದ್ದಾರೆ. 'ರಕ್ಕಯಿ' ಆಗಿ ಕತ್ತಿ ಹಿಡಿದು ಅಖಾಡಕ್ಕೆ ಇಳಿದಿದ್ದಾರೆ.

ನಯನತಾರಾ ನಟನೆಯ ರಕ್ಕಯಿ ಸಿನಿಮಾದ ಟ್ರೈಲರ್ ರಿಲೀಸ್ ಆಗಿದೆ. 'ರಕ್ಕಯಿ' ಸಿನಿಮಾದ ಟೈಟಲ್ ಟೀಸರ್ ಅನ್ನು ಅನಾವರಣ ಮಾಡಲಾಗಿದೆ. ಅಳುವ ಮಗುವನ್ನು ಸಂತೈಸುವ ತಾಯಿಯಾಗಿ, ದುಷ್ಟರಿಗೆ ಸೆದೆಬಡೆಯುವ ಗಟ್ಟಿಗಿತ್ತಿಯಾಗಿ ನಯನತಾರಾ ಕಾಣಿಸಿಕೊಂಡಿದ್ದಾರೆ. ಅಳುವ ಮಗುವನ್ನು ಸಂತೈಸುವ ತಾಯಿಯಾಗಿ, ದುಷ್ಟರ ಮುಂದೆ ನಟಿ ಉಗ್ರಾವತಾರ ತಾಳಿದ್ದಾರೆ.

ಕತ್ತಿಯನ್ನು ಹಿಡಿದು ತನ್ನ ಮಗುವಿನ ತಂಟೆಗೆ ಬರುವ ದುಷ್ಟರ ಗುಂಪನ್ನು ಸಂಹಾರ ಮಾಡುವ ರೌದ್ರವತಾರಾ ತಾಳಿದ್ದಾರೆ ನಟಿ. ಇದೊಂದು ತಾಯಿ ಸೆಂಟಿಮೆಂಟ್ ಇರುವ ಮಾಸ್ ಸಿನಿಮಾ ಆಗಿದೆ.

ಇನ್ನೂ ನಯನತಾರಾ ಮದುವೆ ಸಾಕ್ಷ್ಯಚಿತ್ರದಲ್ಲಿ 3 ಸೆಕೆಂಡ್ ವಿಡಿಯೋದಲ್ಲಿ ಧನುಷ್ ನಿರ್ಮಾಣ ಮಾಡಿದ್ದ 'ನಾನೂ ರೌಡಿ ಧಾನ್' ಚಿತ್ರದ ತುಣುಕು ಬಳಸಿದಕ್ಕೆ ಧನುಷ್ ಲೀಗಲ್ ನೋಟಿಸ್ ಕಳುಹಿಸಿದ್ದರು. ನಯನತಾರಾ ಮತ್ತು ಧನುಷ್ ಕಾಂಟ್ರವರ್ಸಿ ನಡುವೆ ಈಗ ರಕ್ಕಯಿ ಸಿನಿಮಾದಲ್ಲಿ ನಟಿ ಉಗ್ರವತಾರಾ ತಾಳಿರೋದು ಫ್ಯಾನ್ಸ್ ಮೆಚ್ಚುಗೆ ಸೂಚಿಸಿದ್ದಾರೆ.



ರಕ್ಕಯಿ ಸಿನಿಮಾದ ಟೈಟಲ್ ಟೀಸರ್

# ಎಮರ್ಜೆನ್ಸಿ ರಿಲೀಸ್‌ಗೆ ಮುಹೂರ್ತ ಫಿಕ್ಸ್



ಜ.17ಕ್ಕೆ ಕಂಗನಾ ಸಿನಿಮಾ ರಿಲೀಸ್

ಬಾಲಿವುಡ್ ಬೆಡಗಿ ಕಂಗನಾ ರಣಾವತ್ ನಟಿಸಿ, ನಿರ್ದೇಶಿಸಿ, ನಿರ್ಮಾಣ ಮಾಡಿರುವ 'ಎಮರ್ಜೆನ್ಸಿ' ಚಿತ್ರ, ಥಿಯೇಟರ್‌ಗೆ ಲಗ್ಗೆಯಿಡಲು ಸಿದ್ಧವಾಗಿದೆ.

ಹೊಸ ರಿಲೀಸ್ ಡೇಟ್ ಅನೌನ್ಸ್ ಮಾಡುವ ಮೂಲಕ ಫ್ಯಾನ್ಸ್‌ಗೆ ಗುಡ್ ನ್ಯೂಸ್ ಕೊಟ್ಟಿದೆ. ಈ ಹಿಂದೆ ಟ್ರೈಲರ್ ಮೂಲಕ ರಿಲೀಸ್ ಡೇಟ್‌ನ್ನು ಚಿತ್ರತಂಡ ರಿವೀಲ್ ಮಾಡಿತ್ತು. ಎಲ್ಲಾ ಅಂದುಕೊಂಡಂತೆ ಆಗಿದ್ರೆ, ಸೆಪ್ಟೆಂಬರ್ 6ರಂದು ಈ ಚಿತ್ರ ಬಿಡುಗಡೆಯಾಗಬೇಕಿತ್ತು. ಆದರೆ ಸಿನಿಮಾಕ್ಕೆ ಸೆನ್ಸಾರ್ ಸಿಗದೆ ರಿಲೀಸ್‌ಗೆ ವಿಳಂಬವಾಗಿತ್ತು. 2025ರ ಜನವರಿ 17ರಂದು 'ಎಮರ್ಜೆನ್ಸಿ' ಚಿತ್ರ ರಿಲೀಸ್ ಆಗಲಿದೆ ಎಂದು ಕಂಗನಾ ಅಪ್‌ಡೇಟ್ ಹಂಚಿಕೊಂಡಿದ್ದಾರೆ. ಇನ್ನೂ ಸಿನಿಮಾದಲ್ಲಿ ಕಂಗನಾ ಅವರು ಇಂದಿರಾ ಗಾಂಧಿ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನುಪಮ್ ಖೇರ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಕಂಗನಾ ನಟನೆಯ ಈ ಸಿನಿಮಾಗಾಗಿ ಎದುರು ನೋಡುತ್ತಿದ್ದಾರೆ.

# ಮಗನಿಗೆ ಬೇಬಿ ರೆಬೆಲ್ ಎಂದ ಅಭಿಷೇಕ್

ರೆಬೆಲ್ ಸ್ಟಾರ್ ಅಂಬರೀಶ್ ಮನೆಗೆ ಮುದ್ದು ಕಂದಮ್ಮನ ಆಗಮನವಾಗಿದೆ. ನವೆಂಬರ್ 12ರಂದು ಅಭಿಷೇಕ್ ಪತ್ನಿ ಗಂಡು ಮಗುವಿಗೆ ಜನ್ಮ ನೀಡಿದರು. ಇದೀಗ ಈ ಕುರಿತು ವಿಶೇಷ ಪೋಸ್ಟ್‌ವೊಂದನ್ನು ಅಭಿಷೇಕ್ ಹಂಚಿಕೊಂಡಿದ್ದಾರೆ. ಮಗನನ್ನು ಬೇಬಿ ರೆಬೆಲ್ ಎಂದಿದ್ದಾರೆ. ಈ ಪೋಸ್ಟ್ ನೋಡಿ ಅಂಬಿ ಫ್ಯಾನ್ಸ್ ಖುಷಿಪಟ್ಟಿದ್ದಾರೆ. ಎಲ್ಲಾರಿಗೂ ನಮಸ್ಕಾರ, ನವೆಂಬರ್ 12ರಂದು ನಮ್ಮ ಕುಟುಂಬಕ್ಕೆ ಅತೀವ ಸಂತಸದ ದಿನ. ರೆಬೆಲ್ ಸ್ಟಾರ್ ಅಂಬರೀಶ್ ಅಣ್ಣನ ಆಶೀರ್ವಾದ, ಗುರು-ಹಿರಿಯರ ಆಶೀರ್ವಾದದಿಂದ ಗಂಡು ಮಗು ಜನಿಸಿದ್ದು, ತಾಯಿ-ಮಗು ಆರೋಗ್ಯವಾಗಿದ್ದಾರೆಂದು ಈ ಮೂಲಕ ತಮ್ಮೆಲ್ಲರಿಗೂ ತಿಳಿಸಲು ಇಚ್ಛಿಸುತ್ತೇನೆ ಎಂದು ಅಭಿಷೇಕ್ ಬರೆದುಕೊಂಡಿದ್ದಾರೆ.





ಅಂಬರೀಶ್ ಫೋಟೋ ಶೇರ್ ಮಾಡಿ ಮಗನನ್ನು ಬೇಬಿ ರೆಬೆಲ್ ಎಂದು ಬರೆದುಕೊಂಡಿದ್ದಾರೆ. ಆದಷ್ಟು ಬೇಗ ಬೇಬಿ ರೆಬೆಲ್ ಫೋಟೋ ರಿವೀಲ್ ಮಾಡಿ ಎಂದು ಫ್ಯಾನ್ಸ್ ಮನವಿ ಮಾಡಿದ್ದಾರೆ. ಅಂದಹಾಗೆ, ಅವಿವ ಜೊತೆ ಅಭಿಷೇಕ್ ಅಂಬರೀಶ್ ಕಳೆದ ವರ್ಷ ಜೂನ್ 5ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ನಟನ ಪೋಸ್ಟ್‌ಗೆ ಅಂಬಿ ಫ್ಯಾನ್ಸ್ ದಿಲ್ ಖುಷ್

# ಜಯಸೂರ್ಯ ಮುಂದಾಳತ್ವದಲ್ಲಿ ಲಂಕಾ ಪಡೆಯ ಗೆಲುವಿನ ನಾಗಾಲೋಟ

ಸತತ ಸೋಲುಗಳಿಂದ ಕಂಗೆಟ್ಟಿದ್ದ ಶ್ರೀಲಂಕಾ ತಂಡವು ಇದೀಗ ಗೆಲುವಿನ ನಾಗಾಲೋಟದೊಂದಿಗೆ ಹೊಸ ಸಂಚಲನ ಸೃಷ್ಟಿಸಿದ್ದಾರೆ. ಅದು ಕೂಡ ಐತಿಹಾಸಿಕ ಗೆಲುವುಗಳ ಮೂಲಕ. ಈ ಗೆಲುವುಗಳ ಹಿಂದಿರುವ ಮಾಸ್ಟರ್ ಮೈಂಡ್ ಮಾಜಿ ಕ್ರಿಕೆಟಿಗ, ಪ್ರಸ್ತುತ ಶ್ರೀಲಂಕಾ ತಂಡದ ಕೋಚ್ ಸನತ್ ಜಯಸೂರ್ಯ. ಸನತ್ ಜಯಸೂರ್ಯ ಶ್ರೀಲಂಕಾ ತಂಡದ ಮುಖ್ಯ ಕೋಚ್ ಆದ ಬಳಿಕ ಹಲವು ಐತಿಹಾಸಿಕ ಜಯ ಸಾಧಿಸಿದೆ. ಇದೀಗ ನ್ಯೂಝಿಲೆಂಡ್ ವಿರುದ್ಧ ಏಕದಿನ ಸರಣಿಯನ್ನು ಗೆಲ್ಲುವ ಮೂಲಕ ಈ ಗೆಲುವಿನ ನಾಗಾಲೋಟ ಮುಂದುವರೆಸಿದೆ.

- **27 ವರ್ಷಗಳ ಬಳಿಕ ಭಾರತದ ವಿರುದ್ಧ ಶ್ರೀಲಂಕಾ ತಂಡವು ಏಕದಿನ ಸರಣಿ ಗೆದ್ದುಕೊಂಡಿದೆ.**
- **10 ವರ್ಷಗಳ ಬಳಿಕ ಶ್ರೀಲಂಕಾ ತಂಡವು ಇಂಗ್ಲೆಂಡ್‌ನಲ್ಲಿ ಟೆಸ್ಟ್ ಪಂದ್ಯದಲ್ಲಿ ಜಯ ಸಾಧಿಸಿದೆ.**
- **15 ವರ್ಷಗಳ ಬಳಿಕ ನ್ಯೂಝಿಲೆಂಡ್ ವಿರುದ್ಧ ಶ್ರೀಲಂಕಾ ತಂಡವು ಟೆಸ್ಟ್ ಸರಣಿ ಗೆದ್ದುಕೊಂಡಿದೆ.**
- **4 ವರ್ಷಗಳ ಬಳಿಕ ವೆಸ್ಟ್ ಇಂಡೀಸ್ ವಿರುದ್ಧ ಶ್ರೀಲಂಕಾ ಏಕದಿನ ಸರಣಿ ಜಯಿಸಿದೆ.**
- **ವೆಸ್ಟ್ ಇಂಡೀಸ್ ವಿರುದ್ಧ ಇದೇ ಮೊದಲ ಬಾರಿಗೆ ಟಿ20 ಸರಣಿ ಗೆದ್ದುಕೊಂಡಿದೆ.**
- **12 ವರ್ಷಗಳ ಬಳಿಕ ನ್ಯೂಝಿಲೆಂಡ್ ವಿರುದ್ಧ ಶ್ರೀಲಂಕಾ ಏಕದಿನ ಸರಣಿಯನ್ನು ಗೆದ್ದುಕೊಂಡಿದೆ.**



ಅಂದರೆ ಶ್ರೀಲಂಕಾ ಪಾಲಿಗೆ ಮರೀಚಿಕೆಯಾಗಿದ್ದ ಗೆಲುವುಗಳು ಇದೀಗ ಕೇವಲ ಎರಡು ತಿಂಗಳುಗಳ ಅಂತರದಲ್ಲಿ ದಕ್ಕಿರುವುದು ವಿಶೇಷ.

ಹೀಗಾಗಿಯೇ ಸನತ್ ಜಯಸೂರ್ಯ ಅವರ ಮುಂದಾಳತ್ವದಲ್ಲಿ ಶ್ರೀಲಂಕಾ ತಂಡವು ತನ್ನ ಗತಕಾಲದ ವೈಭವಕ್ಕೆ ಮರಳಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಪ್ರಸ್ತುತ ತಂಡದ ಪ್ರದರ್ಶನವನ್ನು ಗಮನಿಸಿದರೆ, ಅಂತಹದೊಂದು ವೈಭವಕ್ಕೆ ಶ್ರೀಲಂಕಾ ತಂಡ ಮರಳಿದರೂ ಅಚ್ಚರಿಪಡಬೇಕಿಲ್ಲ. ಇದಾಗ್ಯೂ, ಶ್ರೀಲಂಕಾ ತಂಡದ ಅಸಲಿ ಆಟ ಗೊತ್ತಾಗುವುದು ಐಸಿಸಿ ಟೂರ್ನಿಯಲ್ಲಿ. ಆದರೆ ಈ ಬಾರಿಯ ಚಾಂಪಿಯನ್ಸ್ ಟ್ರೋಫಿಗೆ ಶ್ರೀಲಂಕಾ ಅರ್ಹತೆ ಪಡೆದಿಲ್ಲ. ಹೀಗಾಗಿ ಪ್ರಮುಖ ಟೂರ್ನಿಯಲ್ಲಿ ಸನತ್ ಜಯಸೂರ್ಯ ಮುಂದಾಳತ್ವದಲ್ಲಿ ಶ್ರೀಲಂಕಾ ಹೇಗೆ ಪ್ರದರ್ಶನ ನೀಡಲಿದೆ ಎಂದು ತಿಳಿಯಲು 2026ರ ಟಿ20 ವಿಶ್ವಕಪ್‌ವರೆಗೂ ಕಾಯಲೇಬೇಕು.

**ಸನತ್ ಜಯಸೂರ್ಯ ವೃತ್ತಿಜೀವನ:**

ಶ್ರೀಲಂಕಾ ಪರ 110 ಟೆಸ್ಟ್ ಪಂದ್ಯಗಳನ್ನಾಡಿರುವ ಸನತ್ ಜಯಸೂರ್ಯ ಒಟ್ಟು 6973 ರನ್ ಕಲೆಹಾಕಿದ್ದಾರೆ. ಈ ವೇಳೆ 3 ದ್ವಿಶತಕ, 31 ಅರ್ಧಶತಕ ಹಾಗೂ 14 ಶತಕಗಳನ್ನು ಸಿಡಿಸಿದ್ದಾರೆ.

ಹಾಗೆಯೇ 445 ಏಕದಿನ ಪಂದ್ಯಗಳಲ್ಲಿ ಕಣಕ್ಕಿಳಿದಿರುವ ಎಡಗೈ ದಾಂಡಿಗ, 28 ಶತಕ ಹಾಗೂ 68 ಅರ್ಧಶತಕಗಳೊಂದಿಗೆ ಒಟ್ಟು 13430 ರನ್ ಕಲೆಹಾಕಿದ್ದಾರೆ. ಇದರ ಜೊತೆಗೆ 31 ಟಿ20 ಪಂದ್ಯಗಳಲ್ಲಿ ಕಾಣಿಸಿಕೊಂಡಿರುವ ಸನತ್ ಜಯಸೂರ್ಯ 4 ಅರ್ಧಶತಕಗಳೊಂದಿಗೆ 629 ರನ್ ಗಳಿಸಿದ್ದಾರೆ. ಇನ್ನು ಟೆಸ್ಟ್, ಏಕದಿನ ಮತ್ತು ಟಿ20 ಕ್ರಿಕೆಟ್‌ನಲ್ಲಿ ಕ್ರಮವಾಗಿ 98, 323 ಮತ್ತು 19 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಈ ಮೂಲಕ ಶ್ರೀಲಂಕಾ ತಂಡ ಕಂಡ ಅತ್ಯಂತ ಶ್ರೇಷ್ಠ ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿದ್ದಾರೆ. ಇದೀಗ ಕೋಚ್ ಆಗಿಯೂ ಸನತ್ ಜಯಸೂರ್ಯ ಹೊಸ ಸಂಚಲನ ಸೃಷ್ಟಿಸಿದ್ದಾರೆ.

# ಟೀಮ್ ಇಂಡಿಯಾ ಪರ ಯುವ ಆಟಗಾರ ಪಾದಾರ್ಪಣೆ

ಪ್ರತಿಷ್ಠಿತ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯು ಶುಕ್ರವಾರದಿಂದ ಶುರುವಾಗಲಿದೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಈ ಸರಣಿಯ ಮೊದಲ ಪಂದ್ಯವು ಪರ್ತ್‌ನಲ್ಲಿ ನಡೆಯಲಿದ್ದು, ಈ ಪಂದ್ಯದ ಮೂಲಕ ಟೀಮ್ ಇಂಡಿಯಾ ಪರ ಯುವ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಪಾದಾರ್ಪಣೆ ಮಾಡಲಿದ್ದಾರೆ ಎಂದು ವರದಿಯಾಗಿದೆ.

ಪರ್ತ್ ಟೆಸ್ಟ್ ಪಂದ್ಯದಿಂದ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಹೊರಗುಳಿದಿದ್ದಾರೆ. ವೈಯುಕ್ತಿಕ ಕಾರಣಗಳಿಂದಾಗಿ ಹಿಟ್‌ಮ್ಯಾನ್ ಮೊದಲ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಇನ್ನು ಗಾಯಗೊಂಡಿರುವ ಶುಭ್‌ಮನ್ ಗಿಲ್ ಕೂಡ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯುತ್ತಿಲ್ಲ. ಹೀಗಾಗಿ ಪ್ಲೇಯಿಂಗ್ ಇಲೆವೆನ್‌ನಲ್ಲಿ 2 ಬದಲಾವಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಟೀಮ್ ಇಂಡಿಯಾ ಮುಂದಿದೆ.


ಇಲ್ಲಿ ರೋಹಿತ್ ಶರ್ಮಾ ಅವರ ಸ್ಥಾನದಲ್ಲಿ ಅಭಿಮನ್ಯು ಈಶ್ವರನ್ ಅವರನ್ನು ಆರಂಭಿಕನಾಗಿ ಕಣಕ್ಕಿಳಿಯುವ ಸಾಧ್ಯತೆಯಿದೆ. ಹಾಗೆಯೇ ಶುಭ್‌ಮನ್ ಗಿಲ್ ಸ್ಥಾನದಲ್ಲಿ ನಿತೀಶ್ ಕುಮಾರ್ ರೆಡ್ಡಿಗೆ ಅವಕಾಶ ನೀಡಲು ಟೀಮ್ ಇಂಡಿಯಾ ಕೋಚ್ ಬಳಗ ಚರ್ಚಿಸಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಏಕೆಂದರೆ ಪರ್ತ್‌ನ ಒಪ್ಟಸ್ ಮೈದಾನದಲ್ಲಿನ ಪಿಚ್ ಉತ್ತಮ ವೇಗ, ಬೌನ್ಸರ್‌ಗೆ ಸಹಕಾರಿ ಎಂದು ಈಗಾಗಲೇ ಕ್ಯುರೇಟರ್ ತಿಳಿಸಿದ್ದಾರೆ. ಇತ್ತ ನಿತೀಶ್ ಕುಮಾರ್ ರೆಡ್ಡಿ ವೇಗದ ಬೌಲಿಂಗ್ ಆಲ್‌ರೌಂಡರ್. ಅಲ್ಲದೆ ಅತ್ಯುತ್ತಮವಾಗಿ ಬ್ಯಾಟ್ ಬೀಸಬಲ್ಲ ಸಾಮರ್ಥ್ಯವನ್ನು ಸಹ ಹೊಂದಿದ್ದಾರೆ. ಹೀಗಾಗಿ ಗಿಲ್ ಸ್ಥಾನದಲ್ಲಿ ನಿತೀಶ್‌ರನ್ನು ಕಣಕ್ಕಿಳಿಸಿ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗವನ್ನು ಬಲಪಡಿಸಲು ಪ್ಲ್ಯಾನ್ ರೂಪಿಸಲಾಗಿದೆ.

ಅದರಂತೆ ಪರ್ತ್ ಟೆಸ್ಟ್ ಪಂದ್ಯದ ಮೂಲಕ ನಿತೀಶ್ ಕುಮಾರ್ ರೆಡ್ಡಿ ಭಾರತದ ಪರ ಚೊಚ್ಚಲ ಟೆಸ್ಟ್ ಪಂದ್ಯವಾಡುವ ಸಾಧ್ಯತೆ ಹೆಚ್ಚಿದೆ. ಈ ಮೂಲಕ ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್ ಜೊತೆ 4ನೇ ವೇಗಿಯಾಗಿ ಕಾಣಿಸಿಕೊಳ್ಳುವುದನ್ನು ಎದುರು ನೋಡಬಹುದು.




ರೆಡ್ಡಿ ವೇಗದ ಬೌಲಿಂಗ್ ಆಲ್ ರೌಂಡರ್

# ಪಾಕಿಸ್ತಾನ ತಂಡಕ್ಕೆ ಹಂಗಾಮಿ ಮುಖ್ಯ ಕೋಚ್ ನೇಮಕ



ಕಳೆದ ಒಂದು ವರ್ಷದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡದಲ್ಲಿ ನಿರಂತರವಾಗಿ ತರಬೇತುದಾರರು ಮತ್ತು ನಾಯಕರ ಬದಲಾವಣೆಯಾಗುತ್ತಲೆ ಇದೆ. ಇದೀಗ ಈ ಟ್ರೆಂಡ್ ಇನ್ನೂ ಮುಂದುವರೆದಿದ್ದು, ಪಾಕಿಸ್ತಾನ ಸೀಮಿತ ಓವರ್‌ಗಳ ತಂಡಕ್ಕೆ ಹೊಸ ಹಂಗಾಮಿ ಮುಖ್ಯ ಕೋಚ್‌ನ ನೇಮಕವಾಗಿದೆ. ಅದರಂತೆ ಪಾಕಿಸ್ತಾನ ತಂಡದ ಮಾಜಿ ವೇಗದ ಬೌಲರ್ ಆಕಿಬ್ ಜಾವೇದ್ ಅವರನ್ನು ಏಕದಿನ ಮತ್ತು ಟಿ20 ತಂಡದ ಹಂಗಾಮಿ ಕೋಚ್ ಆಗಿ ನೇಮಕಗೊಂಡಿದ್ದಾರೆ.ವಾಸ್ತವವಾಗಿ ಈ ಹಿಂದೆ ಪಾಕ್ ಸೀಮಿತ ಓವರ್‌ಗಳ ತಂಡಕ್ಕೆ ಕೋಚ್ ಆಗಿ ನೇಮಕಗೊಂಡಿದ್ದ ಗ್ಯಾರಿ ಕರ್ಸ್ಟನ್, ಪಾಕಿಸ್ತಾನ ಮಂಡಳಿಯೊಂದಿಗಿನ ಭಿನ್ನಾಭಿಪ್ರಾಯದಿಂದಾಗಿ ಕೆಲವೇ ದಿನಗಳ ಹಿಂದೆ ತಮ್ಮ ಕೋಚ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಹೀಗಾಗಿ ಜೇಸನ್ ಗಿಲ್ಲೆಸ್ಪಿ ಅವರನ್ನು ಟೆಸ್ಟ್ ಜೊತೆಗೆ ಉಳಿದ ಎರಡೂ ಮಾದರಿಗಳಿಗೂ ಕೋಚ್ ಆಗಿ ನೇಮಿಸಿತ್ತು. ಜೇಸನ್ ಗಿಲ್ಲೆಸ್ಪಿ ನೇತೃತ್ವದಲ್ಲಿ ಪಾಕಿಸ್ತಾನ ತಂಡ ಆಸ್ಟ್ರೇಲಿಯಾದಲ್ಲಿ ಏಕದಿನ ಸರಣಿ ಗೆದ್ದ ಬಳಿಕ ಅವರನ್ನೇ ಮೂರು ಮಾದರಿಗೂ ಕೋಚ್ ಆಗಿ ಮುಂದುವರೆಸಲು ಪಿಸಿಬಿ ಮುಂದಾಗಿತ್ತು. ಆದರೆ ವೇತನ ತಾರತಮ್ಯದಿಂದಾಗಿ ಈ ಜವಬ್ದಾರಿಯನ್ನು ತೆಗೆದುಕೊಳ್ಳಲು ಗಿಲ್ಲೆಸ್ಪಿ ಹಿಂದೇಟು ಹಾಕಿದ್ದರು. ಹಾಗಾಗಿ ಆಕಿಬ್ ಜಾವೇದ್ ಅವರನ್ನು ಸೀಮಿತ ಓವರ್‌ಗಳ ತಂಡದ ಹಂಗಾಮಿ ಕೋಚ್ ಆಗಿ ನೇಮಿಸಿರುವುದಾಗಿ ಪಿಸಿಬಿ ತಿಳಿಸಿದೆ.

# ಬೌಲಿಂಗ್ ಕೋಚ್ ಹುದ್ದೆ ನೀಡಿದ ಆರ್‌ಸಿಬಿ

2025 ರ ಐಪಿಎಲ್ ಮೆಗಾ ಹರಾಜು ಇದೇ ನವೆಂಬರ್ 24 ಮತ್ತು 25 ರಂದು ಸೌದಿ ಅರೇಬಿಯಾದ ಜೆಡ್ಡಾದಲ್ಲಿ ನಡೆಯಲಿದೆ.



ಅದಕ್ಕೂ ಮುನ್ನ ಎಲ್ಲಾ ತಂಡಗಳು ತಮ್ಮ ಸಿದ್ಧತೆಗಳನ್ನು ಅಂತಿಮಗೊಳಿಸಿವೆ. ಪ್ರತಿ ಬಾರಿಯಂತೆ ಈ ಬಾರಿಯೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೇಲೆ ಎಲ್ಲಾರ ಕಣ್ಣು ನೆಟ್ಟಿದೆ. ಏಕೆಂದರೆ ಪ್ರತಿ ಹರಾಜಿನಲ್ಲೂ ಸ್ಟಾರ್ ಆಟಗಾರರ ದಂಡನ್ನೇ ಕಟ್ಟಿಕೊಂಡು ಅಖಾಡಕ್ಕಿಳಿಯುವ ಈ ರೆಡ್ ಆರ್ಮಿಗೆ ಮಾತ್ರ ಇದುವರೆಗೂ ಐಪಿಎಲ್ ಟ್ರೋಫಿ ಎಂಬುದು ಗಗನ ಕುಸುಮವಾಗಿದೆ. ಹೀಗಾಗಿ ಈ ಬಾರಿಯಾದರೂ ಸಮತೋಲಿತ ತಂಡವನ್ನು ಆರ್‌ಸಿಬಿ ಕಟ್ಟಲಿ ಎಂಬುದು ಅಭಿಮಾನಿಗಳ ಆಶಯವಾಗಿದೆ. ಈ ನಡುವೆ ಮೆಗಾ ಹರಾಜಿಗೂ ಮುನ್ನ ತಂಡದಲ್ಲಿ ಮಹತ್ವದ ಬದಲಾವಣೆ ಮಾಡಿರುವ ಆರ್‌ಸಿಬಿ, ಮುಂಬೈ ತಂಡವನ್ನು ರಣಜಿ ಚಾಂಪಿಯನ್ ಮಾಡಿದ್ದ ಓಂಕಾರ್ ಸಾಲ್ವಿ ಅವರನ್ನು ಬೌಲಿಂಗ್ ಕೋಚ್ ಆಗಿ ನೇಮಕ ಮಾಡಿದೆ ಎಂದು ವರದಿಯಾಗಿದೆ. ಓಂಕಾರ್ ಸಾಲ್ವಿ ದೇಶೀಯ ಕ್ರಿಕೆಟ್‌ನಲ್ಲಿ ಮುಂಬೈ ತಂಡದ ಮುಖ್ಯ ಕೋಚ್ ಆಗಿದ್ದಾರೆ. ಅವರ ಕೋಚಿಂಗ್‌ನಲ್ಲಿ ಮುಂಬೈ 2023-24ರ ರಣಜಿ ಟ್ರೋಫಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಟೈಮ್ಸ್ ಆಫ್ ಇಂಡಿಯಾದ ಸುದ್ದಿಯ ಪ್ರಕಾರ, ಇದೀಗ ಆರ್‌ಸಿಬಿ ಬಳಗವನ್ನು ಸೇರಿಕೊಂಡಿರುವ ಓಂಕಾರ್, ದೇಶೀಯ ಸೀಸನ್ ಮುಗಿದ ಬಳಿಕ ಅಧಿಕೃತವಾಗಿ ತಂಡಕ್ಕೆ ಸೇರ್ಪಡೆಗೊಳ್ಳಲಿದ್ದಾರೆ ಎಂದು ವರದಿಯಾಗಿದೆ. ಓಂಕಾರ್ ಈ ಹಿಂದೆ ಐಪಿಎಲ್‌ನಲ್ಲಿ ಕೆಲಸ ಮಾಡಿದ್ದ ಅನುಭವ ಹೊಂದಿದ್ದು, ಅವರು ಈ ಹಿಂದೆ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಕೋಚಿಂಗ್ ಯೂನಿಟ್‌ನಲ್ಲಿದ್ದರು.

ಓಂಕಾರ್ ಸಾಲ್ವಿ ಅವರ ವೃತ್ತಿಜೀವನದ ಬಗ್ಗೆ ಹೇಳುವುದಾದರೆ ಸಾಲ್ವಿ ಅವರಿಗೆ ಆಟಗಾರನಾಗಿ ಹೆಚ್ಚಿನ ಅನುಭವವಿಲ್ಲ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966